ಜನಶಕ್ತಿ



ಕನ್ನಡ ವಾರಪತ್ರಿಕೆ


blog janashakthi.wordpress.com e-mail : js_weekly@yahoo.com

ಸಂಪುಟ 7 ಸಂಚಿಕೆ 28
ಜುಲೈ 14, 2013 ಪುಟ 16 ರೂ. 10/-



ಬೇಕಿದೆ ಪರ್ಯಾಯ ಧೋರಣೆಗಳನ್ನು ಅನುಸರಿಸುವ ಪರ್ಯಾಯ ರಾಜಕೀಯ

ಜ್ಯೋತಿಬಸು ಮತ್ತು ಕೋಮುಸೌಹಾರ್ದತೆ





ಈಜಿಪ್ಟ್ : ಇನ್ನೊಬ್ಬ ಸರ್ವಾಧಿಕಾರಿಯನ್ನು ಇಳಿಸಿದ ಜನ

ಐಸಿಡಿಎಸ್ ದುರ್ಬಲಗೊಳಿಸುವ ದುಷ್ಟ ನೀತಿಗಳು



ಪೆಟ್ರೋಲ್ - ಡೀಸೆಲ್ ಬೆಲೆಗಳು ಏರುತ್ತಿವೆ ರೂಪಾಯಿ ಮೌಲ್ಯ ಕುಸಿಯುತ್ತಿದೆ !





ನೇರ ನಗದು ವರ್ಗಾವಣೆ : ತುಮಕೂರು ಅನುಭವ ಏನು ?

ಬಜೆಟ್‌ನಲ್ಲಿ ಕೃಷಿ ಬಿಕ್ಕಟ್ಟಿಗೆ ಪರಿಹಾರ ಒದಗಿಸಲು ಆಗದ

ನೀತಿಗಳ ದಿಕ್ಕು ಬದಲಾಗಲಿ – ಕೃಷಿ ಬಿಕ್ಕಟ್ಟಿಗೆ ರಾಜ್ಯ ಬಜೆಟ್ ಪರಿಹಾರ ತೋರಲಿ

ರಾಜ್ಯ ಸರ್ಕಾರದ ಬಜೆಟ್‌ಗೆ ಕರ್ನಾಟಕ ಪ್ರಾಂತ ರೈತ ಸಂಘದ ಸಲಹೆ ಸೂಚನೆಗಳು.

ರಾಜ್ಯ ಸರ್ಕಾರವು ಬಜೆಟ್ ತಯಾರಿಯಲ್ಲಿ ತೊಡಗಿದೆ. ಈ ಹಿನ್ನೆಲೆಯಲ್ಲಿ ಜೂನ್ 24, 2013 ರಂದು ಮುಖ್ಯಮಂತ್ರಿ ಸಿದ್ದರಾಮಯ್ಯನವರು ರೈತಸಂಘಟನೆಗಳ ಪ್ರತಿನಿಧಿಗಳ ಸಭೆ ಕರೆದು ಚರ್ಚೆ ನಡೆಸಿದ್ದಾರೆ. ಆ ಸಭೆಯಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಜಿ.ಸಿ. ಬಯ್ಯಾರೆಡ್ಡಿಯವರು, ರಾಜ್ಯ ರೈತ ಸಂಘದ ಎರಡೂ ಬಣಗಳ ಪ್ರತಿನಿಧಿಗಳು ಇತರರು ಪಾಲುಗೊಂಡಿದ್ದ ಈ ಸಭೆಯಲ್ಲಿ ಪ್ರಾಂತ ರೈತ ಸಂಘಟನೆ ಪರವಾಗಿ ಸಲ್ಲಿಸಲಾದ ಲಿಖಿತ ಮನವಿ ಜೊತೆಗೆ ಜಿ.ಸಿ. ಬಯ್ಯಾರೆಡ್ಡಿಯವರು ಮಂಡಿಸಿದ, ಪ್ರತಿಪಾದಿಸಿದ ವಿಷಯಗಳ ವಿವರಗಳು ಇಲ್ಲಿವೆ.

ಸಭಾಂಗಣ ಕಿಕ್ಕಿರಿದಿತ್ತು. ಒಂದು ಕಾಲದಲ್ಲಿ ಹೆಗಲ ಮೇಲೆ ಹಸಿರು ಟವೆಲ್ ಹಾಕಿದ ಸಿದ್ದರಾಮಯ್ಯನವರು ಈಗ ಮುಖ್ಯಮಂತ್ರಿಯಾಗಿದ್ದಾರೆ. ಹೀಗಾಗಿ ಕೃಷಿ ರಂಗದ ಸಮಸ್ಯೆಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸುತ್ತಾರೆಂಬ ನಿರೀಕ್ಷೆ–ಸಂತೋಷವೂ ಹಲವರಿಂದ ಸಭೆಯಲ್ಲಿ ವ್ಯಕ್ತವಾಯಿತು.

ಪ್ರತ್ಯೇಕ ಕೃಷಿ ಬಜೆಟ್ ಮಂಡಿಸಬೇಕೆ ಬೇಡವೆ ಎಂಬ ವಿಷಯ ಚರ್ಚೆಗೆ ಬಂದಿದೆ. ಈ ಬಗ್ಗೆ ಪರ–ವಿರೋಧವಾಗಿ ಚರ್ಚೆಗಳು ನಡೆದಿವೆ. ಪ್ರಾಂತ ರೈತ ಸಂಘ ನಿರೀಕ್ಷಿಸುವುದು ಕೃಷಿ ನೀತಿಗೆ ಸಂಬಂಧಿಸಿ ಸರ್ಕಾರದ ನೀತಿಗಳಲ್ಲಿ ರಾಜಕೀಯ ನೀತಿ ನಿರ್ದೇಶನದಲ್ಲಿಯೇ ಒಂದು ಬದಲಾವಣೆ ಎಂದು ಬಯ್ಯಾರೆಡ್ಡಿಯವರು ಪ್ರತಿಪಾದಿಸಿದ್ದಾರೆ.

ಕೃಷಿ ಬಿಕ್ಕಟ್ಟಿಗೆ ಬೇಕು ಪರಿಹಾರ

"ಬೇರೆ ಎಲ್ಲವೂ ಕಾಯಬಹುದು, ಆದರೆ ಕೃಷಿ ಕಾಯಲಾರದು" ಎಂದರು ಶ್ರೀ ಜವಾಹರಲಾಲ್ ನೆಹರುರವರು ನಮ್ಮ ಸ್ವಾತಂತ್ರ್ಯದ ಸಮಯದಲ್ಲಿ. ಆದ–ರೆ ಕೃಷಿ ಪ್ರಧಾನವಾದ ಈ ದೇಶದಲ್ಲಿ ಕಳೆದ ಆರು ದಶಕಗಳಲ್ಲಿ ಜನಪರ ಕೃಷಿ ಪದ್ಧತಿಯನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿದ ಪರಿಣಾಮವಾಗಿ ನಮ್ಮ ದೇಶದ ಕೃಷಿ ರಂಗ, ಮುಖ್ಯವಾಗಿ ಕೃಷಿಯನ್ನೆ ತಮ್ಮ 'ಬದುಕು' ಎಂದು ನಂಬಿರುವ ಸರಿಸುಮಾರು 70 ಕೋಟಿ ರೈತರು, ಕೃಷಿ ಕೂಲಿಕಾರರು ಮತ್ತಿತರ ಗ್ರಾಮೀಣ ಜನತೆ ಅನೇಕ ಸಂಕಷ್ಟಗಳನ್ನು ಎದುರಿಸುತ್ತಿದ್ದಾರೆ. ಈ ಸಂಕಷ್ಟಗಳು ಗ್ರಾಮೀಣ ಭಾರತದ ಪ್ರಗತಿಗೆ ಮಾರಕವಾಗಿ ಪರಿಣಮಿಸಿವೆ ಮಾತ್ರವಲ್ಲ, ಒಟ್ಟಾರೆ ದೇಶದ ಅಭಿವೃದ್ಧಿಗೆ ತುಂಬಾ ದೊಡ್ಡ ಅಡ್ಡಿಯಾಗಿ ಮಾರ್ಪಟ್ಟಿವೆ. ಅದರಲ್ಲೂ ವಿಶೇಷವಾಗಿ ಕಳೆದ ಒಂದೂವರೆ ದಶಕದಲ್ಲಿ ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣ ನೀತಿಗಳನ್ನು ದೇಶದೊಳಗೆ ಜಾರಿಗೆ ತರಲು ಆರಂಭಿಸಿದ ನಂತರವಂತೂ ಕೃಷಿ ರಂಗವು ಹಿಂದೆಂದೂ ಇಲ್ಲದ ಬಿಕ್ಕಟ್ಟಿಗೆ ಗುರಿಯಾಗತೊಡಗಿತು. ರೈತರ ಆತ್ಮಹತ್ಯೆಗಳು ತೀವ್ರಗೊಂಡವು. ರೈತರ ಆತ್ಮಹತ್ಯೆಗಳ ವಿಷಯದಲ್ಲಿ ಕರ್ನಾಟಕವು ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶಗಳ ನಂತರ ಮೂರನೇ ಸ್ಥಾನದಲ್ಲಿದೆ. ಈ ದುರಂತವನ್ನು ತಪ್ಪಿಸಬೇಕು. ಈ ಹಿನ್ನೆಲೆಯಲ್ಲಿ ಈ ನೀತಿಗಳಿಗೆ ವಿರುದ್ಧವಾದ ರೈತ ಪರ, ಕೃಷಿ ಪರವಾದ ನೀತಿಗಳನ್ನು ಒಳಗೊಂಡಿರುವ ರಾಜ್ಯ ಸರ್ಕಾರ ತನ್ನ ಬಜೆಟ್‌ನ್ನು ಮಂಡಿಸಲು ಸಾಧ್ಯವಾದರೆ ರಾಜ್ಯದ ರೈತರ ಮತ್ತು ಕೃಷಿಕೂಲಿಕಾರರ ಸಂಕಷ್ಟಗಳನ್ನು ಸ್ವಲ್ಪಮಟ್ಟಿಗಾದರೂ ನಿವಾರಿಸಬಹುದೆಂದು ಭಾವಿಸಿ ಸಮಗ್ರವಲ್ಲದಿದ್ದರೂ ತಕ್ಷಣದ ಕೆಲವು ಪ್ರಶ್ನೆಗಳ ಕುರಿತು ಈ ಕೆಲವು ಸಲಹೆ ಸೂಚನೆಗಳನ್ನು ನೀಡುತ್ತಿದ್ದೇವೆ ಎಂದರು.

1. ಭೂಮಿ ಪ್ರಶ್ನೆಯ ಕುರಿತು

ಬಗರ್‌ಹುಕುಂ ಸಾಗುವಳಿ ಸಕ್ರಮ, ತಿರಸ್ಕರಿಸಿರುವ ಆರ್ಹ ಅರ್ಜಿಗಳ ಪುನರ್ ಪರಿಶೀಲನೆ, ಹೊಸ ಅರ್ಜಿಹಾಕಲು ಅವಕಾಶ

ರಾಜ್ಯ ಸರ್ಕಾರದ ಡಿಸೆಂಬರ್ 2009ರ ಅಂಕಿ ಸಂಖ್ಯೆಗಳ ಪ್ರಕಾರ 31,50,495–16 ಎಕರೆ ಪ್ರದೇಶದಲ್ಲಿ ಬಗರ್‌ಹುಕುಂ ಸಾಗುವಳಿ ಮಾಡುತ್ತಿದ್ದ 12,35,822 ಬಗರ್‌ಹುಕುಂ ಸಾಗುವಳಿದಾರರ ಫಾರಂ.ನಂ 50 ಮತ್ತು 53 ಅರ್ಜಿಗಳನ್ನು ತಿರಸ್ಕರಿಸಲಾಗಿದೆ. ಇದೇ ರೀತಿಯಲ್ಲಿ 10,55,191.04 ಎಕರೆ ಪ್ರದೇಶದಲ್ಲಿ ಸುಮಾರು 20 ವರ್ಷಗಳ ಹಿಂದೆ ಫಾರಂ ನಂ. 50 ಮತ್ತು 53 ಅರ್ಜಿಗಳನ್ನು ಸಲ್ಲಿಸಿ ವಿಲೇವಾರಿ ಅಗದೆ ಉಳಿದಿರುವ ಅರ್ಜಿಗಳ ಸಂಖ್ಯೆ 4,28,411 ಇದೆ. ಇತ್ತೀಚಿನ ವರ್ಷಗಳಲ್ಲಿ ರೈತರಿಗೆ, ಬಡವರಿಗೆ ಬದುಕು ನೀಡುವ ಭೂಮಿ ಹಂಚಿಕೆಯಂತಹ ಕೆಲಸಕ್ಕೆ ಅಧ್ಯತೆ ಸಿಗದೆ, ನಿರ್ಲಕ್ಷತೆಯನ್ನು ತೋರಲಾಗುತ್ತಿದೆ. ಹೀಗಾಗಿ ತಿರಸ್ಕರಿಸಲ್ಪಟ್ಟಿರುವ ಫಾರಂ. ನಂ 50 ಮತ್ತು 53 ಅರ್ಜಿದಾರರಲ್ಲಿ ಭಾರಿ ದೊಡ್ಡ ಸಂಖ್ಯೆಯ ಕುಟುಂಬಗಳು ಹಾಗು ವಿಲೇವಾರಿಯಾಗದೇ ದಶಕಗಳಿಂದ ಕಾಯುತ್ತಿರುವ ಲಕ್ಷಾಂತರ ಅರ್ಜಿದಾರರಲ್ಲಿ ಬಹುತೇಕ ಬಡವರು, ದಲಿತರು, ಹಿಂದುಳಿದ ಜಾತಿ, ಪಂಗಡಗಳಿಗೆ ಸೇರಿದವರಾಗಿದ್ದು ಇವರು ನ್ಯಾಯಕ್ಕಾಗಿ ಕಾಯುತ್ತಿದ್ದಾರೆ.

ಆದರೆ ಬಗರ್ ಹುಕುಂ ಸಾಗುವಳಿ ಮಾಡುತ್ತಿರುವ ಬಹುತೇಕ ಬಡವರಿಗೆ, ಈ ಭೂಮಿಗಳನ್ನು ಸಕ್ರಮ ಮಾಡಿಕೊಳ್ಳಲು ಅನೇಕ ಅಡ್ಡಿ ಅತಂಕಗಳು ಎದುರಾಗುತ್ತಿವೆ. "ಗೋಮಾಳ ಭೂಮಿಯನ್ನು ಬಗರ್‌ಹುಕುಂ ಸಾಗುವಳಿದಾರರಿಗೆ ಸಕ್ರಮ ಮಾಡಬಾರದೆಂಬ ನ್ಯಾಯಾಲಯಗಳ ಆಜ್ಞೆಗಳು", ನಂತರದ "ಪರಿಷ್ಕೃತ ಆಜ್ಞೆಗಳು", "ಅರಣ್ಯ ಭೂಮಿ ಎನ್ನುವ ಕಾರಣದಿಂದ ಅರ್ಜಿಗಳ ವಜಾ", ಬಿಬಿಎಂಪಿಯ ಗಡಿಯಿಂದ 18 ಕಿ.ಮೀ, 5 ಕಿ.ಮೀ ಇತ್ಯಾದಿ ಕಾರಣಗಳು, ಭೂ ಮಂಜುರಾತಿ ಸಮಿತಿಗಳ ರಚನೆಯಲ್ಲಿ ವಿಳಂಬ, ಸಮಿತಿಗಳು ಕೆಲಸ ಮಾಡದಿರುವ ಸ್ಥಿತಿ, ಹೀಗೆ ಹತ್ತು ಹಲವು ಸಮಸ್ಯೆಗಳ ಕಾರಣದಿಂದ ರಾಜ್ಯದಲ್ಲಿನ ಬಾರಿ ದೊಡ್ಡ ಸಂಖ್ಯೆಯ ಬಗರ್‌ಹುಕುಂ ಸಾಗುವಳಿದಾರರಿಗೆ ನ್ಯಾಯ ಸಿಗುತ್ತಿಲ್ಲ ಎಂದ ಬಯ್ಯಾರೆಡ್ಡಿಯವರು ಈ ಬಜೆಟ್‌ನ ಸಮಯದಲ್ಲಿ ನ್ಯಾಯ ದೊರಕಿಸಿ ಕೊಡಬೇಕೆಂದು ಒತ್ತಾಯಿಸಿದರು.

ಅರಣ್ಯ ಕಾಯ್ದೆ–2006ರ ಸಮರ್ಪಕ ಜಾರಿ :

'ಅರಣ್ಯ ಕಾಯ್ದೆ–2006' ಜನ ಚಳುವಳಿಗಳ ಒತ್ತಡದಿಂದ ಕೇಂದ್ರ ಸರ್ಕಾರ ಜಾರಿಗೆ ತಂದಿದೆ. ಆದರೆ ಈ ಕಾಯ್ದೆಯನ್ನು ರಾಜ್ಯದಲ್ಲಿ ಸಮರ್ಪಕವಾಗಿ ಜಾರಿಗೊಳಿಸಲಾಗುತ್ತಿಲ್ಲ. ಕಾಯ್ದೆಯ ಅನ್ವಯ 'ಅದಿವಾಸಿ'ಗಳಿಗೆ ಭೂಮಿಯನ್ನು ನೀಡುವ ಕೆಲಸಕ್ಕೆ ಹೆಚ್ಚು ಒತ್ತು ಸಿಗಬೇಕಿದೆ. ಅಲ್ಲದೆ



ಈ ಕಾಯ್ದೆಯಲ್ಲಿ 'ಪಾರಂಪರಿಕ ಇತರೆ ಅರಣ್ಯವಾಸಿಗಳ' ಬಗ್ಗೆ ಇರುವ ದೋಷ ಪೂರಿತ ಷರತ್ತಿನಿಂದ ರಾಜ್ಯದ ಶೇ. 80ರಷ್ಟು ಅರಣ್ಯವಾಸಿಗಳಿಗೆ ಭೂಮಿಯನ್ನು ಸಕ್ರಮ ಮಾಡಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಈ ಹಿನ್ನೆಲೆಯಲ್ಲಿ 'ಆದಿವಾಸಿ'ಗಳಿಗೆ ಭೂಮಿಯನ್ನು ನೀಡಲು ನಿಗದಿ ಮಾಡಿರುವಂತೆ ಡಿಸೆಂಬರ್ 13, 2005ಕ್ಕೆ ಸ್ವಾಧೀನದಲ್ಲಿರುವ ಇತರೆ ಅರಣ್ಯ ವಾಸಿಗಳಿಗೂ ಭೂಮಿಯನ್ನು ಸಕ್ರಮ ಮಾಡುವಂತೆ ಕೇಂದ್ರ ಸರ್ಕಾರದ ಮೇಲೆ ಬಾರಿ ಒತ್ತಡವನ್ನು ತರಬೇಕಿದೆ. ಇದರ ಭಾಗವಾಗಿ ಪಾರಂಪರಿಕ ಇತರ ಅರಣ್ಯವಾಸಿಗಳಿಂದ ಅರ್ಜಿಗಳನ್ನು ಆಹ್ವಾನಿಸಲು ಅದೇಶ ನೀಡಬೇಕು.

ದಿನಾಂಕ 29.02.2012 ಅಂಕಿ ಸಂಖ್ಯೆಗಳ ಪ್ರಕಾರ ಈ ಕಾಯ್ದೆ ಅಡಿಯಲ್ಲಿ ಕೇವಲ 8 ಜಿಲ್ಲೆಗಳಿಂದ ಒಟ್ಟು ಬಂದಿರುವ ಅರ್ಜಿಗಳ 1,63,115. ಇನ್ನೂ ದೊಡ್ಡ ಸಂಖ್ಯೆಯ ಅರ್ಜಿಗಳು ಬರಬೇಕಾಗಿದೆ. ಆದರೆ ಆದ ಸಂದರ್ಭದಲ್ಲಿ ಸಕ್ರಮಮಾಡಿ ಹಕ್ಕುಪತ್ರಗಳನ ನೀಡಲಾಗಿರುವುದು ಕೇವಲ 607 ಅರ್ಜಿದಾರರಿಗೆ ಮಾತ್ರ, ಉಳಿದ ಅರ್ಜಿಗಳನ ವಿವಿಧ ಹಂತಗಳಲ್ಲಿ ತಿರಸ್ಕರಿಸಲಾಗಿದೆ. ಇದ ಸಮಸ್ಯೆಯ ಗಂಭೀರತೆಯನ್ನು ತೋರಿಸುತ್ತದ ಈ ಕಾಯ್ದೆಗೆ ಅಗತ್ಯವಿರುವ ತಿದ್ದುಪಡಿಯನ ತರದೇ ರಾಜ್ಯದಲ್ಲಿ ಅತಿ ದೊ ಸಂಖ್ಯೆಯಲ್ಲಿರುವ ಇತರೆ ಅರಣ್ಯವಾಸಿಗಳಿ ನ್ಯಾಯವನ್ನು ನೀಡಲು ಸಾಧ್ಯವಿಲ್ಲ. ಹೀಗಾ ಈ ದೆಸೆಯಲ್ಲಿ ಕಾರ್ಯಪ್ರವೃತ್ತರಾಗಬೇಕು.

ಮನೆ ನಿವೇಶನ :

ಮನೆಯನ್ನು ಕಟ್ಟಿಕೊಳ್ಳಲು ಸರ್ಕಾರ ನೀಡುತ್ತಿರುವ ಹಣಕಾಸಿನ ಪ್ರಮಾಣ, ಸಬ್ಸಿ ಪ್ರಮಾಣವನ್ನು ಹೆಚ್ಚಿಸುವ ಸರ್ಕಾರದ ಪ್ರಸ್ತಾಪಗಳನ್ನು ಬಯ್ಯಾರೆಡ್ಡಿ ಸ್ವಾಗತಿಸಿದರು ಬಾರೀ ಪ್ರಮುಖವಾಗಿ ನಗರ ಹಾಗೂ ಗ್ರಾಮೀಣ ಪ್ರದೇಶದಲ್ಲಿ ಸರ್ಕಾರಿ ಭೂಮಿಯಲ್ಲಿ ಮನೆ ಕಟ್ಟಿಕೊಂಡಿರುವ ಬಡ ಕುಟುಂಬಗಳಿಗೆ ಹಕ್ಕುಪತ್ರಗಳನ್ನು ನೀಡಬೇ ಹಾಗೂ ದಶಲಕ್ಷಗಟ್ಟಲೇ ನಿವೇಶನವಿಲ್ಲದ ಎಲ್ಲಾ ಬಡವರಿಗೆ ಮನೆ ನಿವೇಶನ ನೀಡಬೇಕು. ಅದಕ್ಕಾಗಿ ವಿಶೇಷ ಯೋಜನ ರೂಪಿಸಬೇಕು. ರೈತರಿಗೆ ಒಪ್ಪಿಗೆಯಾಗುವ ಪರಿಹಾರ ನೀಡಿ ಭೂಮಿ ವಶಪಡಿಸಿಕೊಳ್ಳಲು ಕಾಯಿದೆ ರೂಪಿಸಬೇಕು. ಶ್ರೀಮಂತರು ಅಕ್ರಮವಾಗಿ ಕಬಳಿಸಿಕೊಂಡಿರುವ ಸರ್ಕಾರಿ ಭೂಮಿಯನ್ನು ವಶಪಡಿಸಿಕೊಂಡು ನಿವೇಶನ ರಹಿತ ಬಡವರಿಗೆ ವಿತರಿಸಬೇಕು. ಈಗಾಗಲೇ ಬೆಂಗಳೂರು, ರಾಮನಗರ, ಚಿಕ್ಕಬಳ್ಳಾಪುರ, ಕೋಲಾರ, ಕೊಪ್ಪಳ, ಗುಲ್ಬರ್ಗಾ, ಬಳ್ಳಾರಿ ಮುಂತಾದ ಜಿಲ್ಲೆಗಳಲ್ಲಿ ಮನೆ ನಿವೇಶನಗಳಿಗಾಗಿ ಅರ್ಜಿ ಸಲ್ಲಿಸಿದವರಿಗೆ ನಿವೇಶನಗಳನ್ನು ತಕ್ಷಣ ಒದಗಿಸಲು ಕ್ರಮವಹಿಸಬೇಕು ಎಂದು ಅವರು ಪ್ರತಿಪಾದಿಸಿದರು.

ಭೂಸ್ವಾಧೀನ :

ಹಿಂದಿನ ರಾಜ್ಯ ಸರ್ಕಾರ ಬಂಡವಾಳಗಾರರು, ರಿಯಲ್ ಎಸ್ಟೇಟ್ ದೊರೆಗಳನ್ನು ತೃಪ್ತಿಪಡಿಸಲು ಹಾಗು ದೊಡ್ಡಪ್ರಮಾಣದ ಭ್ರಷ್ಟಾಚಾರದ ಫಲವಾಗಿ ಬೇಕಾಬಿಟ್ಟಿಯಾಗಿ ಫಲವತ್ತಾದ ಕೃಷಿಭೂಮಿಯನ್ನು ಬಲವಂತವಾಗಿ ಸ್ವಾಧೀನ ಪಡಿಸಿಕೊಂಡಿದೆ. ಇದಕ್ಕಾಗಿ 'ಭೂಬ್ಯಾಂಕ್'ನ್ನು ಮಾಡಿದ್ದೇವೆಂದು ಹಲವಾರು ಹಗರಣಗಳನ್ನು ಉಂಟುಮಾಡಿದೆ. ಈ ಹಿನ್ನೆಲೆಯಲ್ಲಿ ಇತ್ತೀಚೆಗೆ ಭೂಸ್ವಾಧೀನಕ್ಕೆ ಸಂಬಂಧಿಸಿ ಸರ್ಕಾರ ಅಧಿಕಾರಿಗಳ ಸಭೆಯನ್ನು ನಡೆಸಿ, ಹಿಂದಿನ ಸರ್ಕಾರ ವಶಪಡಿಸಿಕೊಂಡ ಭೂಮಿಯ ವಿವರಗಳು, ಬಳಕೆಯ ವಿವರಗಳನ್ನು ನೀಡಬೇಕೆಂದು ಅನಂತರ ಮಾತ್ರವೇ ಭೂ ಸ್ವಾಧೀನದ ಬಗ್ಗೆ ನಿಲುವುಗಳನ್ನು ತೆಗೆದುಕೊಳ್ಳುವುದು ಸಾಧ್ಯವಾಗಬೇಕೆಂಬ ತೀರ್ಮಾನ ಮಾಡಿ ಬಂಡವಾಳಗಾರರ ಸಭೆಯನ್ನು ಮುಂದೂಡಿದ್ದನ್ನು ಮತ್ತು ಅಂತಹ ಪ್ರಯತ್ನಗಳನ್ನು ಬಯ್ಯಾರೆ ಸ್ವಾಗತಿಸಿದರು.

ಪುಟ 12 ಕ್ಕೆ

ಸಂಪಾದಕೀಯ

ಮೈಸೂರಿನಲ್ಲಿ ನೇರ ನಗದು ವರ್ಗಾವಣೆ ಆರಂಭ : ತುಮಕೂರು ಅನುಭವ ಏನು ಹೇಳುತ್ತದೆ?

ಅಡುಗೆ ಅನಿಲ ಸಬ್ಸಿಡಿಯನ್ನು ನೇರವಾಗಿ ಗ್ರಾಹಕನ ಬ್ಯಾಂಕ್ ಖಾತೆಗೆ ಜಮಾಮಾಡುವ ಕೇಂದ್ರ ಸರ್ಕಾರದ ಯೋಜನೆ ಜುಲೈ 1 ರಿಂದ ಮೈಸೂರು ಜಿಲ್ಲೆಯಲ್ಲಿ ಆರಂಭವಾಗಿದೆ ಎನ್ನುತ್ತಾರೆ. ಪಿರಿಯಾಪಟ್ಟಣ ವಿಧಾನಸಭಾ ಚುನಾವಣೆ ಮುಂದೂಡಿದ್ದರಿಂದ ಜಿಲ್ಲೆಯಲ್ಲಿ ಈ ಯೋಜನೆಯ ಜಾರಿ ಮುಂದೂಡಲ್ಪಟ್ಟಿತ್ತು. ಈ ಯೋಜನೆಯ ಅನುಷ್ಠಾನದಿಂದ ಇನ್ನು ಮುಂದೆ ಅಡುಗೆ ಅನಿಲದ ಸಬ್ಸಿಡಿ ನೇರವಾಗಿ ಗ್ರಾಹಕನ ಬ್ಯಾಂಕ್ ಖಾತೆಗೆ ವರ್ಗಾವಣೆ ಆಗಬೇಕಾಗಿದೆ. ಅಡುಗೆ ಅನಿಲ ಸಹಾಯಧನ ನೇರ ವರ್ಗಾವಣೆಗೆ ಸಂಬಂಧಿಸಿದಂತೆ ಗ್ರಾಹಕರಿಗೆ ಯಾವುದೇ ತೊಂದರೆ ಆಗದಂತೆ ಬ್ಯಾಂಕ್ ಅಧಿಕಾರಿಗಳು ಮತ್ತು ವಿವಿಧ ತೈಲ ಕಂಪನಿಗಳ ಡೀಲರ್‌ಗಳು ಎಚ್ಚರಿಕೆ ವಹಿಸಬೇಕೆಂದು ಜಿಲ್ಲಾಡಳಿತ ತಾಕೀತು ಮಾಡಿದೆ ಎನ್ನಲಾಗಿದೆ.

ಈ ಯೋಜನೆಯ ಲಾಭ ಪಡೆಯಲು ಗ್ರಾಹಕ ಆಧಾರ್ ನೋಂದಣಿ ಮಾಡಿಸಿಕೊಂಡಿರಬೇಕು. ಆಧಾರ್ ನೋಂದಣಿ ಮಾಡಿಸಿದ ಗ್ರಾಹಕ ತಮ್ಮ ನೋಂದಣಿ ಸಂಖ್ಯೆಯನ್ನು ಗ್ಯಾಸ್ ಏಜೆನ್ಸಿ ಹಾಗೂ ಬ್ಯಾಂಕಿಗೆ ಕೊಟ್ಟು ತಮ್ಮ ಸಂಖ್ಯೆಯನ್ನು ಕ್ರಮಾಂಕಿತಗೊಳಿಸಿಕೊಂಡರೆ ಗ್ಯಾಸ್ ಬುಕ್ ಮಾಡುತ್ತಿದ್ದಂತೆ ಆ ತಿಂಗಳಲ್ಲಿ ಅಡುಗೆ ಅನಿಲಕ್ಕೆ ನಿಗದಿ ಆಗಿರುವ ಮಾರುಕಟ್ಟೆ ದರಕ್ಕೆ ಪೂರಕವಾಗಿ ಕೊಡುವ ಸಬ್ಸಿಡಿ ಮೊತ್ತ ಗ್ರಾಹಕನ ಬ್ಯಾಂಕ್ ಖಾತೆಗೆ ಜಮಾ ಆಗಲಿದೆ. ಆದರೆ ಗ್ರಾಹಕರು ಪೂರ್ಣ ಹಣವನ್ನು ಜಮಾ ಮಾಡಿ ಅಡುಗೆ ಅನಿಲವನ್ನು ಖರೀದಿಸಬೇಕಾಗುತ್ತದೆ. ಮೈಸೂರು ಜಿಲ್ಲೆಯಲ್ಲಿ ಜುಲೈ 1 ರಿಂದ ಈ ಯೋಜನೆ ಜಾರಿಯಾಗಿದ್ದರೂ ಅಗಸ್ಟ್ ಅಂತ್ಯದವರೆಗೂ ಆಧಾರ್ ಸಂಖ್ಯೆ ಕ್ರಮಾಂಕಿತಗೊಳಿಸಲು ಕಾಲಾವಕಾಶ ಇದೆ ಎಂದು ಹೇಳಲಾಗುತ್ತಿದೆ.

ತುಮಕೂರು ಜಿಲ್ಲೆಯಲ್ಲಿ ಜೂನ್ ತಿಂಗಳಿಂದಲೇ ಈ ಯೋಜನೆಗೆ ಚಾಲನೆ ನೀಡಲಾಗಿದೆ. ಅಲ್ಲಿಯ ಅನುಭವದ ಕುರಿತು ವರದಿಗಳು ಬರುತ್ತಿವೆ.


ಅಡುಗೆ ಅನಿಲ ಸಬ್ಸಿಡಿ ನೇರ, ವರ್ಗಾವಣೆ ಯೋಜನೆ ತುಮಕೂರಿನಲ್ಲಿ ಮೊದಲ ಬಾರಿಗೆ ಜಾರಿಯಾಗಿದೆ. ಆದರೆ ಅದು ನೀರಿಕ್ಷಿತ ಫಲಿತಾಂಶ ನೀಡಿಲ್ಲ ಎಂಬ ಕೂಗು ವ್ಯಾಪಕವಾಗಿ ಕೇಳಿಬರುತ್ತಿದೆ. ಆರಂಭದಲ್ಲೇ ಹೀಗಾದರೆ ಮುಂದೆ ಏನಾದೀತು ಎಂಬ ಆತಂಕ ಎಲ್‌ಪಿಜಿ ಗ್ರಾಹಕರನ್ನು ಕಾಡಲಾರಂಭಿಸಿದೆ. ತುಮಕೂರು ಜಿಲ್ಲೆಯಲ್ಲಿ ಒಟ್ಟು 2,57,691 ಅಡುಗೆ ಅನಿಲ ಸಂಪರ್ಕಗಳಿವೆ. ಈ ಪೈಕಿ ವಿತರಕರ ಬಳಿ ಇದುವರೆಗೆ 1,66,510 ಗ್ರಾಹಕರು ಮಾತ್ರ ತಮ್ಮ ಆಧಾರ್ ಸಂಖ್ಯೆಗಳನ್ನು ನಮೂದಿಸಿದ್ದಾರೆ ಎಂದು ಅಧಿಕೃತ ಮೂಲಗಳು ತಿಳಿಸಿವೆ. ಯೋಜನೆಯಡಿ ಇದುವರೆಗೆ 75 ಸಾವಿರ ಗ್ರಾಹಕರು ಮಾತ್ರ ಬ್ಯಾಂಕ್‌ಗಳಲ್ಲಿ ತಮ್ಮ ಆಧಾರ್ ನೋಂದಣಿ ಸಂಖ್ಯೆಯನ್ನು ಕ್ರಮಾಂಕಿತಗೊಳಿಸಿದ್ದಾರೆ. ಈವರೆಗೆ ಜಿಲ್ಲೆಯಲ್ಲಿ 42,382 ಗ್ರಾಹಕರ ಖಾತೆಗಳಿಗೆ ಮಾತ್ರ ಸಬ್ಸಿಡಿ ಹಣ ಜಮಾ ಆಗಿದೆ.

ತುಮಕೂರು ಜಿಲ್ಲೆಯ ಅಡುಗೆ ಅನಿಲ ಗ್ರಾಹಕರು ಸರ್ಕಾರದಿಂದ ಸಬ್ಸಿಡಿ ಹಣ ಪಡೆಯಲು ಪರದಾಡುತ್ತಿದ್ದಾರೆ. ಮೊದಲನೆಯದಾಗಿ ಆಧಾರ್ ನೋಂದಣಿಗಾಗಿ ನೋಂದಣಿ ಕೇಂದ್ರಗಳಲ್ಲಿ ನೂಕುನುಗ್ಗಲು ನಿತ್ಯದ ವಿದ್ಯಮಾನವಾಗಿದೆ. ಜಿಲ್ಲೆಯಲ್ಲಿ ಕೇವಲ 23 ನೋಂದಣಿ ಕೇಂದ್ರಗಳು ಇರುವುದರಿಂದ ಜನ ಬೆಳಗ್ಗೆಯಿಂದ ಸಂಜೆಯವರೆಗೆ ಸಾಲುಗಟ್ಟಿ ನಿಲ್ಲಬೇಕಾಗುತ್ತದೆ. ಎರಡನೇಯದಾಗಿ ಬ್ಯಾಂಕ್ ಖಾತೆಗಳನ್ನು ತೆರೆಯುವುದೂ ಅಷ್ಟೇ ಸಾಹಸದ ಕೆಲಸವಾಗಿದೆ. ಖಾತೆ ತೆರೆಯುವ ಅರ್ಜಿ ನಮೂನೆಯನ್ನೂ ಪಡೆಯಲು ಉದ್ದುದ್ದ ಸಾಲುಗಳಲ್ಲಿ ನಿಂತು ನಿರಾಸೆಯಾಗಬೇಕಾಗುತ್ತದೆ. ಬ್ಯಾಂಕಿನವರು 10 ದಿನ ಬಿಟ್ಟು ಬನ್ನಿ ಎನ್ನುತ್ತಾರೆ. ದಿನವೊಂದಕ್ಕೆ 25 ಖಾತೆಗಳಿಗಿಂತ ಹೆಚ್ಚು ಖಾತೆಗಳನ್ನು ತೆರೆಯಲು ಬ್ಯಾಂಕುಗಳು ನಿರಾಕರಿಸುತ್ತವೆ. ಬ್ಯಾಂಕುಗಳು ಶೂನ್ಯ ಮೊತ್ತದಲ್ಲಿ ಖಾತೆ ತೆರೆಯಲು ಹಿಂದೇಟು ಹಾಕುತ್ತಿರುವುದರಿಂದ ಜಿಲ್ಲೆಯಲ್ಲಿ ಇಷ್ಟೊಂದು ಗ್ರಾಹಕರ ಖಾತೆಗಳು ಕ್ರಮಾಂಕಿತ ಆಗದೇ ಇರಲು ಕಾರಣವಾಗಿದೆ. ಎಲ್‌ಪಿಜಿ ಸಬ್ಸಿಡಿ ಪಡೆಯಲು ಬ್ಯಾಂಕ್ ಖಾತೆಗಳಲ್ಲಿ ಕನಿಷ್ಠ ರೂ. 500 ರಿಂದ ರೂ. 1000 ವರೆಗೂ ಶಿಲ್ಕು ಉಳಿಸಬೇಕೆಂದು ಬ್ಯಾಂಕುಗಳು ಒತ್ತಾಯಿಸುತ್ತವೆ. ಕೆಳ ಮಧ್ಯಮ ವರ್ಗದವರಿಗೆ ಇದು ಕಷ್ಟಸಾಧ್ಯವಾಗುತ್ತಿದೆ. ಪಡೆಯುವ ಸಬ್ಸಿಡಿಗಳಿಗಿಂತಲೂ ಹೆಚ್ಚು ಹಣವನ್ನು ಈ ಅಲೆದಾಟಕ್ಕೆ ವೆಚ್ಚ ಮಾಡಬೇಕಾಗುವುದರಿಂದ ಸಾಮಾನ್ಯ ಗ್ರಾಹಕರು ಈ ಯೋಜನೆಯ ಬಗ್ಗೆ ವಿಶ್ವಾಸ ಕಳೆದುಕೊಳ್ಳುತ್ತಿದ್ದಾರೆ. ಮೇಲ್ ಮಧ್ಯಮ ವರ್ಗದ ಜನಗಳಂತೂ 'ನಿಮ್ಮ ಸಬ್ಸಿಡಿಯೂ ಬೇಡ, ಈ ಹಿಂಸೆಯೂ ಬೇಡ' ಎಂದು ಮೊದಲಿನಂತೆ ಮಾರುಕಟ್ಟೆ ದರಗಳಲ್ಲಿ ಅಡುಗೆ ಅನಿಲ ಖರೀದಿ ಮಾಡಲು ರಾಜಿಯಾಗುತ್ತಿದ್ದಾರೆ. ಈಗ ಸದ್ಯ ಎಲ್‌ಪಿಜಿ ಸಿಲಿಂಡರ್ ಪಡೆಯಲು ಮಾರುಕಟ್ಟೆ ದರದಲ್ಲಿ ರೂ. 855.60 ಕೊಡಬೇಕಾಗುತ್ತದೆ.

ನೊಂದಾಯಿತ ಗ್ರಾಹಕರು ಮಾರುಕಟ್ಟೆ ಬೆಲೆ ಕೊಟ್ಟು ಎಲ್‌ಪಿಜಿ ಗ್ಯಾಸ್ ಸಿಲಿಂಡರ್ ಬುಕ್ ಮಾಡಿದ ತಕ್ಷಣ ಬ್ಯಾಂಕ್ ಖಾತೆಗೆ ಸಬ್ಸಿಡಿ ಮೊತ್ತ ಜಮಾ ಆಗುತ್ತದೆ ಎಂಬ ಭರವಸೆಯೂ ತುಮಕೂರು ಜಿಲ್ಲೆಯಲ್ಲಿ ಸುಳ್ಳಾಗಿದೆ. ಆರಂಭದಲ್ಲಿ ಕೆಲವರ ಬ್ಯಾಂಕ್ ಖಾತೆಗಳಿಗೆ ಸಬ್ಸಿಡಿ ಜಮಾ ಆಗಿದ್ದರೂ ಬಹಳಷ್ಟು ಗ್ರಾಹಕರು ತಮಗೆ 18–20 ದಿನಗಳ ನಂತರವೂ ಸಬ್ಸಿಡಿ ಹಣ ಸಂದಾಯವಾಗಿಲ್ಲ ಎಂದು ದೂರುತ್ತಿದ್ದಾರೆ.

ಪುಟ 4 ಕ್ಕೆ

'ಡಿಗ್ಗಿ ರಾಜ'ನ ತೇಪೆಯ ಶುಭಾರಂಭ!



ಎಸ್.ವೈ.ಗುರುಶಾಂತ್

ಕೆಪಿಸಿಸಿ ಅಧ್ಯಕ್ಷ ಡಾ.ಜಿ.ಪರಮೇಶ್ವರವರನ್ನು ಡಿ.ಸಿ.ಎಂ. ಮಾಡಿ' ಎಂಬ ಕೂಗು ಮತ್ತೆ ಕಾಂಗ್ರೆಸ್‌ನಲ್ಲಿ ಜೋರಾಗಿ ಕೇಳುತ್ತಿದೆ. ಕರ್ನಾಟಕಕ್ಕೆ ಪಕ್ಷದ ಹೈಕಮಾಂಡ್‌ನಿಂದ ಉಸ್ತುವಾರಿಯಾಗಿ ನೇಮಕವಾದ ಬಳಿಕ ಬಂದ ದಿಗ್ವಿಜಯ್ ಸಿಂಗ್‌ರನ್ನು ಬೆನ್ನು ಹತ್ತಿರುವ ಕೂಗಿದು. ಸಿದ್ಧರಾಮಯ್ಯ ಮುಖ್ಯಮಂತ್ರಿಯಾದ ಬಳಿಕ ಇದಕ್ಕೆ ಅವಕಾಶವಿಲ್ಲವೆಂದು ಹೈಕಮಾಂಡ್ ನಿರಾಕರಿಸಿತ್ತು. ಆದರೀಗ ಮತ್ತೆ ಕೂಗು ಕೇಳಿ ಬಂದಿರುವುದರಲ್ಲಿ ಕೆಲವು ಅರ್ಥಗಳಿವೆ. ಸಿದ್ಧರಾಮಯ್ಯನವರೂ ಪಕ್ಷದ ಪದಾಧಿಕಾರಿ. ಆ ವೇದಿಕೆಯಲ್ಲೇ ಚರ್ಚಿಸಬಹುದಲ್ಲಾ. ಪಕ್ಷ ಮತ್ತು ಸರಕಾರವನ್ನು ಬಿಟ್ಟು ಮೇಲೊಂದು ಸಮಿತಿ? ಅಧಿಕಾರದ ಆಚೆಗಿರುವ ಗುಂಪುಗಳ ಅಹವಾಲಿನ ಒತ್ತಡಗಳ ಪುನರಾವರ್ತನೆಯ ಭಾಷೆಯಿದು.

ಗಂಟಲಲ್ಲಿ ಸಿಕ್ಕಿರುವ ಕಡುಬು

ಸಿಂಗ್‌ರವರದ್ದು ರಾಜ್ಯಕ್ಕೆ ಪ್ರಥಮ ಭೇಟಿ. ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಅತೀ ಹೆಚ್ಚಿನ ಸಂಸದರನ್ನು ರಾಜ್ಯದಿಂದ ಆರಿಸಿಕೊಳ್ಳಬೇಕು. ಈ ಕೆಲಸಕ್ಕಾಗಿ ಇಡೀ ಅವರ ಪಕ್ಷ ತೊಡಗಬೇಕು. ಹೀಗಾಗಬೇಕಾದಲ್ಲಿ ಇಲ್ಲಿರುವ ಅಹವಾಲುಗಳನ್ನು ಕೇಳಿ ಸಮಾಧಾನ ಪಡಿಸಬೇಕು. ಉಳಿದಿರುವ ಅಧಿಕಾರದ ಪ್ರಸಾದವನ್ನು 'ಹಸಿದವರಿಗೆ' ಹಂಚಬೇಕು. ಸರ್ಕಾರ ಬಂದು ಇನ್ನೂ ಮೂರು ತಿಂಗಳು ಕಳೆದಿಲ್ಲ. ಭಾರೀ ಘೋಷಣೆಗಳನ್ನು ಹೊರಡಿಸಿ ಅವನ್ನು ಕಾರ್ಯಗತಗೊಳಿಸಲಾಗದ ಪರಿಸ್ಥಿತಿ. ಜಾರಿ ಮಾಡಬೇಕೆಂದರೆ ಮೂಲಭೂತ ನೀತಿಗಳನ್ನು ಬದಲಾಯಿಸಿಕೊಳ್ಳದೇ ಆಗದು. ನೀರಿಳಿಯದ ಗಂಟಲಲ್ಲಿ ಕಡುಬು ತುರುಕಿಕೊಂಡಂತಿರುವ ಸ್ಥಿತಿಯಲ್ಲೇ ನೂತನ ಸಿ.ಎಂ.ರವರು ಇದೀಗ ಬಜೆಟ್ ಮಂಡನೆಯ ಕಸರತ್ತಿನಲ್ಲಿದ್ದಾರೆ. ಎಲ್ಲಾ ಮಾರ್ಗಗಳು ಲೋಕಸಭೆ ಚುನಾವಣೆಯತ್ತಲೇ!

ದಿಗ್ವಿಜಯ್ ಸಿಂಗ್‌ರವರು ಬೆಂಗಳೂರಿಗೆ 2013 ರ ಜುಲೈ 2ರಂದು ಬಂದಾಗ ಕರೆಯಲಾದ ಪಕ್ಷದ ರಾಜ್ಯ ಮಟ್ಟದ ಸಭೆಯಲ್ಲಿ ಪದಾಧಿಕಾರಿಗಳೂ ಸೇರಿದಂತೆ ಇತರರು ತಮ್ಮ ಅಳಲು–ಅಹವಾಲು ಹೇಳಿಕೊಂಡಿದ್ದಾರಂತೆ. ಅಂತಿಮವಾಗಿ ಸರ್ಕಾರ ಮತ್ತು ಪಕ್ಷದ ನಡುವೆ ಸಮನ್ವಯದ ಕೊರತೆಯಿರುವುದರಿಂದ ಒಂದು ಸಮನ್ವಯ ಸಮಿತಿಯನ್ನು ರಚಿಸುವುದು, ಚುನಾವಣಾ ಪ್ರಣಾಳಿಕೆಯ ಅನುಷ್ಠಾನಕ್ಕೂ ಮತ್ತೊಂದು ಸಮಿತಿ, ಸಿಎಂ ಆಫೀಸಿನಲ್ಲಿ ಅದಕ್ಕೆ ಖಾಯಂ ಜಾಗ, ಪಕ್ಷದ ಬಲವರ್ಧನೆಗೆ ಕೆಲವು ಸೂಚನೆಗಳು ನೀಡಲಾಗಿದೆಯಂತೆ. ಅದರಲ್ಲಿ ಈಗಾಗಲೇ ಗೆಲುವಿಗೆ ದುಡಿದ ಕಾರ್ಯಕರ್ತರಿಗೆ ನಿಗಮ, ಮಂಡಳಿಗಳಲ್ಲಿ ಸ್ಥಾನ ನೀಡುವ ಬೇಡಿಕೆಯೂ ಒಂದು. ಈ ಬೇಡಿಕೆಯನ್ನು ಕೇಂದ್ರ ಸಚಿವ ಖರ್ಗೆ, ಮುನಿಯಪ್ಪನವರೂ ಸಹ ಬಹಿರಂಗವಾಗಿ ಕೇಳಿರುವುದೂ ವಿಶೇಷ. ಅವರು ಪಕ್ಷದಲ್ಲೋ ಅಥವಾ ವೈಯುಕ್ತವಾಗಿಯೋ ಹೇಳಬಹುದಿತ್ತು. ಬಹಿರಂಗದಲ್ಲಿ ಎಂದರೆ? ಬೆಂಬಲಿಗರ ಸಾರ್ವಜನಿಕ ಜಾಗೃತಿಯೇ?

ಗುರುತರ ಹೊಣೆ ನಿಭಾಯಿಸಬಹುದೇ?

ಸ ಬ ಂ ಎ ಲ್ಲಿ ಮಾತನಾಡುವಾಗ ರಾಜ್ಯದಲ್ಲಿ ಬಿಜೆಪಿಯನ್ನೆದುರಿಸುವುದಕ್ಕೆ ಒತ್ತನ್ನೇನೋ ದಿಗ್ವಿಜಯರು ನೀಡಿದ್ದಾರೆ. ಸೋತು ಹತಾಶೆಯಲ್ಲಿರುವ ಬಿಜೆಪಿ ಕೋಮುಗಲಭೆಗಳ ಮೂಲಕ ರಾಜಕೀಯ ಬೆಂಬಲವನ್ನು ಕ್ರೋಢೀಕರಿಸುವ ಸಾಧ್ಯತೆಗಳನ್ನು ಪ್ರಸ್ತಾಪಿಸಿದ್ದಾರೆ. ನಿಜ, ಅದು ನಮ್ಮೆಲ್ಲರ ಹಿಂದಿನ ಅನುಭವ. ಬಿಜೆಪಿಯು ಈ ಮಾತನ್ನೇ ಹಿಡಿದು ತನ್ನ ರಕ್ಷಣೆಯ ಕೋಟೆ ಕಟ್ಟಿಕೊಳ್ಳಲು ಹೊರಟಿದೆ. (ಇದು ಕೋಮುಸಾಮರಸ್ಯ ಕದಡುವ ಹೇಳಿಕೆಯೆಂದೂ, ಅವರ ಮೇಲೆ ಮೊಕದ್ದಮೆ ಹೂಡುವುದಾಗಿಯೂ ಬಿಜೆಪಿ ವಕ್ತಾರ ಸಿ.ಟಿ.ರವಿ. ಹೇಳಿದ್ದಾರೆ). ಪ್ರಶ್ನೆಯೆಂದರೆ ಇಂತಹ ಸನ್ನಿವೇಶಗಳನ್ನು ಕಾಂಗ್ರೆಸ್ ಅದೆಷ್ಟು ಧೃಡವಾಗಿ ಎದುರಿಸಲಿದೆ ಎಂಬುದು. ಮಾತ್ರವಲ್ಲ, ಕೋಮುವಾದವನ್ನು

ಪುಟ 4 ಕ್ಕೆ

ಕಾರ್ಟೂನ್ ಕಾರ್ನರ್



ನೇರ ನಗದು ವರ್ಗಾವಣೆ...

ಪುಟ 3 ರಿಂದ

ತುಮಕೂರು ಜಿಲ್ಲೆಯ ಅನುಭವ ಈ ಯೋಜನೆಯ ಪೊಳ್ಳುತನವನ್ನು ಈಗಾಗಲೇ ಬಯಲಿಗೆ ತಂದಿವೆ. ಇದರಿಂದ ಬಡವರಿಗೆ, ಬಡಮಧ್ಯಮ ವರ್ಗದವರಿಗೆ ಅನುಕೂಲತೆಗಿಂತ ಅನಾನುಕೂಲತೆಗಳೇ ಹೆಚ್ಚಾಗಲಿವೆ. ಸಬ್ಸಿಡಿಗಳನ್ನು ಕಡಿತ ಮಾಡುವ ಕೇಂದ್ರ ಸರ್ಕಾರದ ಧೋರಣೆಯ ಭಾಗವಾಗಿದೆ ಈ ನೇರ ನಗದು ವರ್ಗಾವಣೆ ಎಂಬ ಯೋಜನೆ. ಗ್ರಾಹಕರು ಮೊದಲೇ ಪೂರ್ಣ ಹಣ ತೆತ್ತು ಅಡುಗೆ ಅನಿಲ ಸಿಲಿಂಡರ್ ಅನ್ನು ಖರೀದಿ ಮಾಡಬೇಕಾಗುತ್ತದೆ. ಅಷ್ಟು ಹಣ ಜೋಡಿಸಲು ಸಾಧ್ಯವಾಗದಿದ್ದಾಗ ಬಡ ಗ್ರಾಹಕ ಸಾಲ ಮಾಡಬೇಕಾಗುತ್ತದೆ. ಸಬ್ಸಿಡಿ ಹಣ ಆಯಾ ತಿಂಗಳೇ ಬ್ಯಾಂಕ್ ಖಾತೆಗೆ ಜಮಾ ಆಗದಿದ್ದರೆ ಸಾಲ ಮಾಡಿ ತಂದ ಸಿಲಿಂಡರ್ ಬಡಗ್ರಾಹಕನಿಗೆ ದುಬಾರಿಯಾಗಲಿದೆ. ಮಾರುಕಟ್ಟೆ ದರಗಳು ಏರುತ್ತಿದ್ದಂತೆ ಸಬ್ಸಿಡಿ ಮೊತ್ತವನ್ನು ಹೆಚ್ಚಿಸುವ ಪ್ರಸ್ತಾವ ಈ ಯೋಜನೆಯಲ್ಲಿ ಇಲ್ಲ. ಸಬ್ಸಿಡಿಯನ್ನು ಒಂದೇ ಸಲಕ್ಕೆ ವಾಪಸ್ ಪಡೆಯಲು ಸಾಧ್ಯವಾಗದಿರುವುದರಿಂದ ಕಾಂಗ್ರೆಸ್ ಸರ್ಕಾರ ಬಡವರಿಗೆ ಮೋಸಮಾಡಲು ಕೈಗೊಂಡಿರುವ ಹೊಸ ಕ್ರಮವೇ ಈ **'ನೇರ ನಗದು ವರ್ಗಾವಣೆ'.**

ತೇಪೆಯ ಶುಭಾರಂಭ...

ಪುಟ 3 ರಿಂದ

ಎದುರಿಸಬೇಕಾದ ನಿಟ್ಟಿನಲ್ಲಿ ಹಲವು ತುರ್ತು ವಿಷಯಗಳಿದ್ದು ಅವುಗಳನ್ನು ಅತ್ಯಂತ ತಾಳ್ಮೆಯಿಂದ ಕೈಗೆತ್ತಿಕೊಳ್ಳಬೇಕಿದೆ. ಆ ರಾಜಕೀಯ ಎಚ್ಚರ, ಮುತುವರ್ಜಿ ಕಾಂಗ್ರೆಸ್‌ನಲ್ಲಿ ಕಾಣುವುದಿಲ್ಲ. ಉರಿವ ಬೆಂಕಿಯಲ್ಲಿ ಮೈ ಕಾಸಿಕೊಳ್ಳದಿದ್ದರೆ ಅಷ್ಟೇ ಸಾಕು ಎನಿಸುವಷ್ಟು ಕಹಿ ಅನುಭವಗಳು ಇವೆ.!

ಕೆಲವೇ ನಾಯಕರನ್ನು ಭೇಟಿ ಮಾಡಿ ಹೋಗುತ್ತಿದ್ದ ಹಿಂದಿನ ಉಸ್ತುವಾರಿ ಮೇಸ್ತ್ರಿಗಿಂತ ಇನ್ನಷ್ಟು ಕೆಳಗಿನ ಹಂತದ ನಾಯಕರು, ಕಾರ್ಯಕರ್ತರೊಂದಿಗೆ ಸಂಬಂಧವಿರಿಸಿಕೊಳ್ಳ ಬಯಸಿರುವುದು ಸಿಂಗ್‌ರ ಒಂದಂಶವಾದರೆ, ತನ್ನನ್ನು ಹಾರ, ತುರಾಯಿ, ಕಟೌಟುಗಳಿಂದ ಸಂಪ್ರೀತನನ್ನಾಗಿಸಲು ಸಾಧ್ಯವಿಲ್ಲವೆಂಬ ಅವರ ಮಾತುಗಳು ಕಾಂಗ್ರೆಸ್ ಸಂಸ್ಕೃತಿಗೆ ಭಿನ್ನವಾಗಿವೆಯೇ ಎಂಬ ಅನುಮಾನ ಹುಟ್ಟಿಸಬಹುದು. ಆದರೆ ಇದು ಆರಂಭ ಶೂರತ್ವವಲ್ಲದೇ ಬೇರೇನೂ ಅಲ್ಲ.

ಸಮನ್ವಯ ಎಲ್ಲಿ?

ಆದರೆ ಇಲ್ಲೊಂದು ಗಂಭೀರವಾದ ಅಂಶವಿದೆ. ಈಗ ಪಕ್ಷ ಮತ್ತು ಸರಕಾರದ ನಡುವೆ ಸಮನ್ವಯ ಸಮಿತಿಯನ್ನು ರಚಿಸುವುದು ಎಂದರೆ ಏನರ್ಥ? ಅದೂ ಒಂದೇ ಪಕ್ಷದ, ಬಹುಮತವಿರುವ ಸರಕಾರವಿರುವಾಗ ಹೀಗೊಂದು ಇರಲು ಸಾಧ್ಯವೇ? ಒಂದು ವೇಳೆ ಸಮಿಶ್ರ ಪಕ್ಷಗಳ ಸರಕಾರವಿದ್ದರೆ ಸಮನ್ವಯಕ್ಕಾಗಿ ಅಂತಹ ಸಮಿತಿಯೊಂದರ ಅಗತ್ಯವಿರುತ್ತದೆ. ಆದರೆ ಇಲ್ಲಿ! ಅಂದರೆ ಈ ಸಮನ್ವಯ ಈಗ ಇಲ್ಲವೆಂದೇ ಅರ್ಥ ಅಲ್ಲವೇ? ಹಾಗಾದರೆ ಕರ್ನಾಟಕದ ಕಾಂಗ್ರೆಸ್ ಕೆಲವು ಪಕ್ಷಗಳ ಅಥವಾ ವ್ಯಕ್ತಿ-ಗುಂಪುಗಳ ಸಮ್ಮಿಶ್ರವೇ?

ಇಂತಹ ವಿವಿಧ ಗುಂಪುಗಳ ನಡುವೆ ಅನೈಕ್ಯತೆಯಿರುವ ವಿಷಯ ಹೊಸದೇನಲ್ಲ. ಸಿದ್ಧರಾಮಯ್ಯನವರು ಸಿಎಂ ಆಗಿ ಆಯ್ಕೆಯಾದಾಗಲೇ ಅವರು ಮೂಲ ಕಾಂಗ್ರೆಸ್ಸಿಗರಲ್ಲ, ವಲಸಿಗರೆಂದೂ, ಸಂಪುಟದಲ್ಲಿ ಪ್ರಧಾನ ಸ್ಥಾನಗಳು ಅವರ ಮಾಜಿ ಜನತಾ ಪರಿವಾರದ ಪಾಲಾಗಿವೆಯೆಂದೂ ಬಂದ ತೀವ್ರ ಆಕ್ಷೇಪಗಳು ಈಗಲೂ ಮುಂದುವರಿದಿವೆ. ಅರ್ಥಾತ್ ಅಧಿಕಾರ ಹಂಚಿಕೆಯ ನೆಲೆಯಲ್ಲೂ ಸ್ಪಷ್ಟವಾಗಿ ಗುಂಪುಗಳಿವೆ. ಇದರಲ್ಲಿ ಸಿ.ಎಂ. ಸ್ಥಾನಾಕಾಂಕ್ಷಿ ಕೆಪಿಸಿಸಿ ಅಧ್ಯಕ್ಷ ಪರಮೇಶ್ವರ್ ಮುಂಚೂಣಿ. ಎಸ್.ಎಂ.ಕೃಷ್ಣ-ಡಿಕೆಶಿಯವರದ್ದು ಮತ್ತೊಂದು ಬಣ. ಬಹುತೇಕ ಇಂತಹ ಪಕ್ಷಗಳಲ್ಲಿ ಅಧಿಕಾರದಲ್ಲಿರುವವರ ಸುತ್ತಲೇ ಪಕ್ಷವೂ ಬಾಲಂಗೋಚಿಯಾಗಿ ಸುತ್ತುತ್ತಿರುತ್ತದೆ. ಇಲ್ಲೆಲ್ಲಾ ಪಕ್ಷ ಮತ್ತು ಸರಕಾರಗಳ ನಡುವೆ ವ್ಯತ್ಯಾಸವೇ ಇರುವುದಿಲ್ಲ. ಆದರೆ ಅಪಾರ ಸಂಪನ್ಮೂಲಗಳ ಹರಿದಾಟದ ಉದಾರೀಕರಣದ ಯುಗದಲ್ಲಿ ಕಾಂಗ್ರೆಸ್‌ನಲ್ಲಿ ಒಂದಿಷ್ಟು ಸೂತ್ರಗಳು ಬದಲಾಗಿ ಹೈ ಕಮಾಂಡ್ ಹಿಡಿತ ಇನ್ನಷ್ಟು ಬಿಗಿಯಾಗಿದೆ. ರಾಜ್ಯ ನಾಯಕರೇನಿದ್ದರೂ ಹುಕುಂ ಪಾಲಕರಾಗಿರುವುದನ್ನೇ ಕಾಂಗ್ರೆಸ್ ಬಯಸುತ್ತದೆ. ಇದರೊಟ್ಟಿಗೆ ಈ ಎಲ್ಲಾ ಗುಂಪು ಸಿದ್ಧರಾಮಯ್ಯನವರನ್ನು ಹಿಡಿದಿಡುವ ಪ್ರಯತ್ನದಲ್ಲಿವೆ. (ಈ ಅಧಿಕಾರದಲ್ಲಿ ಅವರಿಗೂ ಪಾಲು ಸಿಗಬೇಕಲ್ಲವೇ?)ಇದು ಅವರವರ ಸ್ಥಾಪಿತ ಹಿತಾಸಕ್ತಿಗಳಿಗನುಗುಣವಾಗಿ !

ಒಂದಂತೂ ಸ್ಪಷ್ಟ. ಕಾಂಗ್ರೆಸ್‌ನಲ್ಲಿ ಸಮನ್ವಯವಿಲ್ಲ. ಅದು ಬರಲು ಸಾಧ್ಯವೂ ಇಲ್ಲ. ಭೂ ಎಸ್ಟೇಟ್, ಗಣಿ, ಸರಾಯಿ, ಶಿಕ್ಷಣ, ಕಾರ್ಪೋರೇಟ್ ಕಂಪನಿಗಳು ಇತ್ಯಾದಿ ಲಾಭಿಗಳ ಹಿತಾಸಕ್ತಿಗಳೇ ತುಂಬಿರುವಾಗ, ಹಲವು ವರ್ಷಗಳ ನಂತರ ಅಧಿಕಾರ ಸಿಕ್ಕಿರುವಾಗ.

ಜನಮರುಳು ಯೋಜನೆಗಳು

ಈಗೇನೋ ದಿಗ್ವಿಜಯ್ ಸಿಂಗ್‌ರವರು ಉಪಮುಖ್ಯಮಂತ್ರಿ ಸ್ಥಾನ ಸೃಷ್ಟಿಯನ್ನು ನಿರಾಕರಿಸಿದ್ದಾರೆ. ಆದರೆ ಕಾಲಕ್ರಮೇಣ ಈ ಬೇಡಿಕೆ ಹೆಚ್ಚಿನ ಬಲ ಪಡೆಯುವ ಸಾಧ್ಯತೆ ಇಲ್ಲದಿಲ್ಲ. ಹಾಲಿ ಸಿ.ಎಂ.ರನ್ನು ಕಟ್ಟಿ ಹಾಕಿ ಪಳಗಿಸಿಕೊಳ್ಳುವುದು ಸಹ ಹೈಕಮಾಂಡ್‌ಗೆ ಅಗತ್ಯವಿದ್ದಂತೆ ಕಾಣುತ್ತದೆ. ಹೀಗಾಗಿ ಸ್ವಭಾವಜನ್ಯವಾದ ಗುಂಪುಗಾರಿಕೆಯೂ ಮುಂದುವರಿಯಲಿದೆ. ಇದಲ್ಲದೇ ಲೋಕಸಭಾ ಚುನಾವಣೆಯಲ್ಲಿ ಅನುಸರಿಸುವ ಕೆಲವು ಜನಪ್ರಿಯ/ಜನಮರುಳು ಯೋಜನೆಗಳು, ಪ್ರಧಾನವಾಗಿ ಜಾತಿ ಆಧಾರಿತವಾಗಿ ಓಟು ಪಡೆಯುವ ತಂತ್ರಗಳು ಮುಂದೆಯೂ ಹೆಚ್ಚಿನ ಆಯಾಮ ಪಡೆಯಲಿವೆ.

ಆದ್ದರಿಂದ 'ಡಿಗ್ಗಿ ರಾಜ'ನದು ಕೇವಲ ತೇಪೆಯ ಶುಭಾರಂಭ ಅಷ್ಟೇ !

ಬಗರ್ ಹುಕುಂ ಸಾಗುವಳಿ ಸಕ್ರಮಕ್ಕೆ ಒತ್ತಾಯ

ಕರ್ನಾಟಕ ಪ್ರಾಂತ ರೈತ ಸಂಘದ ಮೈಸೂರು ತಾ. ಸಮ್ಮೇಳನ

ರೈತರ ಸಮಸ್ಯೆಗಳ ಇತ್ಯರ್ಥಕ್ಕಾಗಿ ಹಾಗೂ ಬಗರ್ ಹುಕುಂ ಸಾಗುವಳಿದಾರರಿಗೆ ಸಾಗುವಳಿ ಪತ್ರಕ್ಕೆ ಒತ್ತಾಯಿಸಿ, ಮೈಸೂರು ತಾಲ್ಲೂಕಿನ ಪ್ರಥಮ ತಾಲ್ಲೂಕು ಸಮ್ಮೇಳನ ಜೂನ್ 27, 2013 ರಂದು ಯಶಸ್ವಿಯಾಗಿ ನಡೆಯಿತು.

ಸಮ್ಮೇಳನವನ್ನು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯಾಧ್ಯಕ್ಷರಾದ ಮಾರುತಿ ಮಾನ್ಪಡೆ ಉದ್ಘಾಟನೆ ಮಾಡಿ ಮಾತನಾಡಿದರು. ರೈತರು ತಮ್ಮ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕಾದರೆ ಸಂಘಟಿತರಾಗುವುದು ಅನಿವಾರ್ಯ. ಸರ್ಕಾರಗಳಿಗೆ ವಿದೇಶಿ ಕಂಪನಿಗಳ ಮೇಲೆ ವ್ಯಾಮೋಹ ಹೆಚ್ಚುತ್ತಿದೆ. ವಿದೇಶಿ ಕಂಪನಿಗಳಿಗೆ ರೈತರ ಕೃಷಿ ಭೂಮಿಯನ್ನು ನೀಡುತ್ತಿದೆ. ಆದರೆ ತಾವು ಸಾಗುವಳಿ ಮಾಡುವ ಜಮೀನಿಗೆ ಹಕ್ಕು ಪತ್ರ ನೀಡುವಂತೆ 16 ಲಕ್ಷ ರೈತರು ಸಲ್ಲಿಸಿದ್ದ ಅರ್ಜಿಯನ್ನು ತಿರಸ್ಕರಿಸಿದೆ. ಅನ್ನದಾತರಿಗೆ ಅವರ ಸಾಗುವಳಿ ಜಮೀನಿಗೆ ಸಾಗುವಳಿ ಪತ್ರ ನೀಡಬೇಕು. ಈ ನಿಟ್ಟಿನಲ್ಲಿ ರೈತರ ಸಮಸ್ಯೆಗಳನ್ನು ಬಗೆಹರಿಸಲು ಒತ್ತಾಯಿಸಿ ಮೈಸೂರಿನಿಂದ ಬೆಂಗಳೂರಿಗೆ ಪಾದಯಾತ್ರೆ ಮಾಡಲಾಗುವುದು ಎಂದರು.

ಸಂಘಟನೆಯ ಜಿಲ್ಲಾ ಸಂಚಾಲಕ ಎಂ.ಕೆ. ಬಸವರಾಜು ಮಾತನಾ[ಡಿ] ಮುಖ್ಯಮಂತ್ರಿಗಳು, ಕಂದಾಯ ಸಚಿವ[ರು] ಮೈಸೂರಿನವರೇ ಆಗಿದ್ದು, ರೈತರ ಸಮಸ್ಯೆಗ[ಳ] ಬಗ್ಗೆ ಮತ್ತು ಸಾಗುವಳಿ ಪತ್ರ ನೀಡುವ ಬ[ಗ್ಗೆ] ತೀವ್ರ ಒತ್ತಡ ಹೇರಬೇಕಿದೆ. ಅದಕ್ಕಾ[ಗಿ] ಗ್ರಾಮ ಘಟಕಗಳನ್ನು ರಚಿಸಿ ಪರಿಣಾಮಕಾ[ರಿ] ಹೋರಾಟ ಕಟ್ಟಬೇಕಿದೆ. ಆ ಮೂಲ[ಕ] ರಾಜ್ಯದ ರೈತ ಚಳುವಳಿಯನ್ನು ಮತ್ತ[ಷ್ಟು] ಬಲಪಡಿಸಬೇಕಿದೆ ಎಂದರು.

ವಿವಿಧ ಹಳ್ಳಿಗಳಿಂದ ಬಂದಿ[ದ್ದ] ರೈತರು ತಮ್ಮ ಸಮಸ್ಯೆಗಳನ್ನು ಚರ್ಚಿಸಿ[...] ಸಂಘಟನೆಯನ್ನು ಬಲಗೊಳಿಸಲ[ು] ಅದಕ್ಕೂ ಗ್ರಾಮ ಘಟಕಗಳನ್ನು ರಚಿಸಲ[ು] ತೀರ್ಮಾನಿಸಲಾಯಿತು.

ಅಂತಿಮವಾಗಿ ಸಮ್ಮೇಳನ ನೂತ[ನ] ತಾಲ್ಲೂಕು ಸಮಿತಿಯನ್ನು ಆಯ್ಕೆ ಮಾಡಿತು. [ಅ]ಧ್ಯಕ್ಷರಾಗಿ ದೂರ ಕೆಂಪಯ್ಯ, ಉಪಾಧ್ಯಕ್ಷರ[ಾಗಿ] ರಮೇಶ್, ವೆಂಕಟೇಶ್, ನರಕಲಯ[...] ತೋಟಪ್ಪ, ಕಾರ್ಯದರ್ಶಿಯಾಗಿ ಶಂಕರ[್], ಜಂಟಿ ಕಾರ್ಯದರ್ಶಿಯಾಗಿ ಶಿವಣ್ಣ, ಖಜಾಂ[ಚಿ] ಆಗಿ ಜಯರಾಂ ಆಯ್ಕೆ ಆದರು. ಅಲ್ಲದೆ 1[...] ಜನ ಸದಸ್ಯರನ್ನು ಆಯ್ಕೆ ಮಾಡಲಾಯಿತು. ಸಿಂಧನೂರಿನಲ್ಲಿ ನಡೆಯಲಿರುವ ರಾಜ[್ಯ] ಸಮ್ಮೇಳನಕ್ಕೆ ಪ್ರತಿನಿಧಿಗಳಾಗಿ ಕೆ. ಬಸವರಾಜ[ು] ಹಾಗೂ ಶಂಕರ್ ಆಯ್ಕೆ ಆದರು.

ರಾಮದುರ್ಗ, ಧನಲಕ್ಷ್ಮೀ ಸಕ್ಕರೆ ಕಾರ್ಖಾನೆ –

ಕಾರ್ಮಿಕರ ವೇತನ ಒಪ್ಪಂದ

ಪ್ರಾವಿಡೆಂಟ್ ಫಂಡ್, ಓವ್ಹರ್‌ಟಾಯಿಮ್ ವೇತನ, ವೈದ್ಯಕೀಯ ಸೌಲಭ್ಯ ಇವ್ಯಾವೂ ಇಲ್ಲದೇ ದುಡಿಯುತ್ತಿದ್ದ ಧನಲಕ್ಷ್ಮೀ ಸಕ್ಕರೆ ಕಾರ್ಖಾನೆ ಕಾರ್ಮಿಕರಿಗೆ ವೇತನ ಹೆಚ್ಚಳ ಸಹಿತ ಒಪ್ಪಂದ ಆಗಿದೆ.

ಖಾನಪೇಟದಲ್ಲಿರುವ ಸಕ್ಕರೆ ಕಾರ್ಖಾನೆಯಲ್ಲಿ ನೂರಕ್ಕೂ ಹೆಚ್ಚು ಖಾಯಂ ಕೆಲಸಗಾರರು ಹಾಗೂ ಸುಮಾರು 100 ಜನ ಹಂಗಾಮಿ ಕೆಲಸಗಾರರು ಕೆಲಸ ಮಾಡುತ್ತಿದ್ದಾರೆ.

ಅತ್ಯಂತ ಕಡಿಮೆ ಕೆಲಸಗಾರರಿದ್ದರೂ ಈ ಹಂಗಾಮಿನಲ್ಲಿ ಸುಮಾರು ಐದು ಲಕ್ಷ ಟನ್‌ಗೂ ಹೆಚ್ಚು ಕಬ್ಬು ನುರಿಸಿ ಸಕ್ಕರೆಯನ್ನು ಉತ್ಪಾದಿಸಿ ದಾಖಲೆ ಮಾಡಿದ್ದಾರೆ. ಈ ಯಾವ ಕೆಲಸಗಾರರೂ ಕಾರ್ಖಾನೆಯ ಗುತ್ತಿಗೆದಾರ ಮಾಲೀಕರಾದ ಪ್ಯಾರೀ ಶುಗರ್ಸನವರಿಂದ ನೇಮಕಾತಿ ಆಗಿಲ್ಲ. ಎಲ್ಲರನ್ನು ಚೆನ್ನೈಯನ ತ್ರಿಶೂಲ್ ಎಂಬ ಹೊರಗುತ್ತಿಗೆ ಕಂಪನಿಯಿಂದ ನೇಮಕಾತಿ ಮಾಡಿಕೊಳ್ಳಲಾಗಿದೆ.

ಸೌಲಭ್ಯಗಳಿಲ್ಲದೇ, ಭಾರೀ ಪ್ರಮಾಣದ ವೇತನ ತಾರತಮ್ಯ ಅನುಭವಿಸಿ ಬೇಸತ್ತ ಕಾರ್ಮಿಕರು ಸಿ.ಐ.ಟಿ.ಯು. ಅಡಿಯಲ್ಲಿ ಸಂಘಟನೆಗೊಂಡು ಕಾರ್ಮಿಕ ಮುಖಂಡರಾದ ವ್ಹಿ.ಪಿ.ಕುಲಕರ್ಣಿ ಅವರನ್ನು ಅಧ್ಯಕ್ಷರಾಗಿ ಗೈಬು ಜೈನೆಖಾನರನ್ನು ಉಪಾಧ್ಯಕ್ಷರಾಗಿ ಆಯ್ಕೆ ಮಾಡಿಕೊಂಡು ಸಂಘ ರಚಿಸಿಕೊಂಡಿದ್ದರು. ಸಂಘ ಆರಂಭವಾದೊಡನೆ ಸಂಘದ ಮುಖಂಡರನ್ನು ಚೆನ್ನೈಗೆ ವರ್ಗಾವಣೆ ಮಾಡಿದ್ದನ್ನು ಪ್ರತಿಭಟಿಸಿ ಹೋರಾಟ ನಡೆಸಿ ಯಶಸ್ವಿಯಾಗಿದ್ದರು.

ಇತ್ತೀಚಿಗೆ ಬೇಡಿಕೆ ಪತ್ರ ಸಲ್ಲಿಸಿ ಹೊರಗುತ್ತಿಗೆ ಕಂಪನಿಯ ಅಧಿಕಾರಿಗಳೊಟ್ಟಿಗೆ ದೀರ್ಘ ಮಾತುಕತೆ ನಡೆದು ಕೊನೆಗೆ ಒಪ್ಪಂದ ಆಗಿದೆ.

ಒಪ್ಪಂದಿಂದಾಗಿ ಕಾರ್ಮಿಕರಿಗೆ ರೂ. 1000/– ರಿಂದ ರೂ. 2500/– ವರೆಗೆ ವೇತನ ಹೆಚ್ಚಳ ದೊರೆಕಿದೆ. ರೂ. 50,000/- ವೈದ್ಯಕೀಯ ಸೌಲಭ್ಯ, ದುಪ್ಪಟ್ಟು ಓವ್ಹರು ಟಾಯಿಮ್ ವೇತನ, ಕ್ಯಾಂಟೀನ್ ಸೌಲಭ್ಯ ಇತ್ಯಾದಿ ದೊರೆತಂತಾಗಿದೆ. ದಿನಾಂಕ 01/10/2012 ರಿಂದ ಅರಿಯರ್ಸ್ ದೊರೆತಿದೆ.

ದಿನಾಂಕ : 25/06/2013 ರಂದು ಕಾರ್ಮಿಕರು ರಾಮದುರ್ಗದಲ್ಲಿ ಸಭೆ ನಡೆಸಿ ಸಂಭ್ರಮಿಸಿದರು. ವ್ಹಿ.ಪಿ. ಕುಲಕರ್ಣಿ ಮತ್ತು ಜೈನೆಖಾನರನ್ನು ಸನ್ಮಾನಿಸಲಾಯಿತು. ಸಭೆಯ ನೇತೃತ್ವವನ್ನು ಸಂಘದ ಕಾರ್ಯದರ್ಶಿ ಕೆ.ಎಸ್. ಹೊಸೂರ, ಜಾಧವ ಮತ್ತಿತರರು ವಹಿಸಿದ್ದರು.

ಜನಶಕ್ತಿ
ಕನ್ನಡ ವಾರಪತ್ರಿಕೆ

'ಮುಂದುವರಿದ' ಜಿಲ್ಲೆಯಲ್ಲಿ ಅತ್ಯಾಚಾರ 'ಮರೆಮಾಚುವ' ಯತ್ನ!!

ಬಾಲಕೃಷ್ಣ ಶೆಟ್ಟಿ

ಪಂಕ್ತಿಭೇದ, ಅಸ್ಪೃಶ್ಯತೆಯ ನಂತರ ಉಡುಪಿ ಜಿಲ್ಲೆಗೆ ಇನ್ನೊಂದು ಕಳಂಕ–ಗ್ಯಾಂಗ್ ರೇಪ್. ಅದರಲ್ಲೂ ಪ್ರತಿಷ್ಠಿತ ಎನ್ನಲಾಗುವ ಮಾತೆ (ಮಣಿಪಾಲ ಅಕಾಡೆಮಿ ಆಫ್ ಹೈಯರ್ ಎಜುಕೇಶನ್) ವಿಶ್ವವಿದ್ಯಾಲಯದಲ್ಲಿ! ತಂಗಾಳಿ ಬೀಸುತ್ತಿರುವ ಕರಾವಳಿ ಜಿಲ್ಲೆಗಳಲ್ಲಿ ಬಿರುಗಾಳಿ ಬಂದಂತಾಗಿದೆ.

ಜೂನ್ 20 ರ ರಾತ್ರಿ 11.30ರ ಹೊತ್ತಿಗೆ ನಡೆದ ಈ ಘಟನೆ ಬೆಳಕಿಗೆ ಬಂದಿದ್ದು 21 ರ ಮಧ್ಯಾಹ್ನದ ನಂತರ. ಸಂಜೆ 7 ಘಂಟೆಯ ಹೊತ್ತಿಗೆ ವಿಶ್ವವಿದ್ಯಾಲಯದ 2,000 ವಿದ್ಯಾರ್ಥಿಗಳಲ್ಲಿ ನೂರರಷ್ಟು ಧೈರ್ಯವಂತ ವಿದ್ಯಾರ್ಥಿಗಳ ಪ್ರತಿಭಟನೆ ಇಲ್ಲದಿದ್ದರೆ ಇದು ಕೂಡ ಸದ್ದಿಲ್ಲದೆ ಅಡಗಿ ಹೋಗುತ್ತಿತ್ತು ಎಂದು ಉಡುಪಿ ಮತ್ತು ಮಣಿಪಾಲಿನ ಜನತೆ ಮಾತಾಡಿಕೊಳ್ಳುತ್ತಿದ್ದಾರೆ.

ಜೂನ್ 20, ಗುರುವಾರ ತ'ಡ'ರಾತ್ರಿ೦ಎ'ಎವ'ರ'ಗ'ೂ ವಿದ್ಯಾರ್ಥಿನಿ ಲೈಬ್ರರಿಯಲ್ಲಿ ಓದುತ್ತಿದ್ದಳು. ಮರುದಿನ ಪರೀಕ್ಷೆ. ಕೆ ಪ್ರತಿಭಾವಂತೆ ಮಾತ್ರವಲ್ಲ ಹಾಡುಗಾರ್ತಿಯೂ ಹೌದು. 4 ನೇ ವರ್ಷದಲ್ಲಿ ವೈದ್ಯಕೀಯ ಓದುತ್ತಿರುವ ವಿದ್ಯಾರ್ಥಿನಿ ಕೇರಳ ಮೂಲದವರು. ತಂದೆ ಬಾಂಗ್ಲಾದೇಶದ ಢಾಕ್ಕಾದಲ್ಲಿ ವೈದ್ಯ ವೃತ್ತಿಯಲ್ಲಿದ್ದಾರೆ.


ಹೆಸರಿಗೆ ವಿಶ್ವವಿದ್ಯಾಲಯ ಎಂದಾದರೂ, ಯಾವುದೇ ಆವರಣಗಳಿಲ್ಲ. ಕಾಲೇಜು, ಲೈಬ್ರರಿ, ಹಾಸ್ಟೆಲ್‌ಗಳ ನಡುವೆ ಸಾರ್ವಜನಿಕ ರಸ್ತೆಗಳಿದ್ದು, ನಾಗರೀಕರು, ವಾಹನಗಳು ಹೇಗೆ ಬೇಕಾದರೂ ಓಡಾಡಬಹುದು. ಅಂತಹ ಒಂದು ಪರಿಸರದಲ್ಲಿ ಮದ್ಯವ್ಯಸನಿಗಳಾದ ಮೂವರು ಆಟೋಚಾಲಕರು ವಿದ್ಯಾರ್ಥಿನಿಯನ್ನು ಅಪಹರಿಸಿ ಲೈಂಗಿಕ ದೌರ್ಜನ್ಯ ನಡೆಸಿದ್ದಾರೆ.

ವಿಶ್ವವಿದ್ಯಾಲಯ ಪ್ರಥಮ ಹೊಣೆ :

ರಾತ್ರಿ 11.30ರ ವರೆಗೆ ಲೈಬ್ರರಿಯಲ್ಲಿ ಓದಲು ಅವಕಾಶ ಇರುವಾಗ ಅಲ್ಲಿಂದ ಹಾಸ್ಟೆಲ್‌ಗೆ, ತನ್ನ ರೂಂಗೆ ಹೋಗುವವರೆಗೆ ಭದ್ರತೆ ನೀಡದೆ ಇರುವುದು ವಿಶ್ವವಿದ್ಯಾಲಯದ ಮೊದಲ ತಪ್ಪು. ಎರಡನೆಯದಾಗಿ ಬೃಹದಾಕಾರವಾಗಿ ಬೆಳೆದಿರುವ ವಿಶ್ವವಿದ್ಯಾಲಯದಲ್ಲಿ ಸಿ.ಸಿ.ಟಿ.ವಿ. ಕ್ಯಾಮರಗಳೇ ಇಲ್ಲ.

ಇದಲ್ಲದೆ, 14 ದಿನಗಳ ಕಾಲ ಆಸ್ಪತ್ರೆಯಲ್ಲಿದ್ದರೂ, ಉನ್ನತ ಪೋಲೀಸ್ ಅಧಿಕಾರಿಗಳಿಗೂ ಭೇಟಿಗೆ ಅವಕಾಶ ನೀಡಲಿಲ್ಲ. ಇದೆಲ್ಲವನ್ನು ಗಮನಿಸಿದರೆ ವಿ.ವಿ.ಯ ಭದ್ರತಾ ವ್ಯವಸ್ಥೆಯಲ್ಲಿನ ಗಂಭೀರ ದೋಷ ಮತ್ತು ಪ್ರಕರಣವನ್ನು ಮುಚ್ಚಿ ಹಾಕಲು ವಿಶ್ವವಿದ್ಯಾಲಯವು ಪ್ರಯತ್ನಿಸುತ್ತಿರುವುದು ದೃಢಪಡುತ್ತದೆ.

ಮಣಿಪಾಲಿನಲ್ಲಿ ಇಂತಹ ಘಟನೆಗಳು ಆಗಾಗ ಸಂಭವಿಸುತ್ತವೆ ಎಂದು ಅಲ್ಲಿಯ ಜನರು, ವಿದ್ಯಾರ್ಥಿಗಳು ಮಾತನಾಡಿಕೊಳ್ಳುತ್ತಿದ್ದಾರೆ. ವಿಶ್ವವಿದ್ಯಾಲಯದ ಹತ್ತಿರದಲ್ಲೇ ಸಾಕಷ್ಟು ಬಾರ್, ಪಬ್‌ಗಳು ರಾತ್ರಿ 11.30ರ ವರೆಗೂ ತೆರೆದಿರುತ್ತವೆ. ಇದೂ ಸಾಲದೆಂಬಂತೆ, ಡ್ರಗ್ಸ್ (ಮಾದಕ ದ್ರವ್ಯ) ಹೇರಳವಾಗಿ ದೊರಕುತ್ತದೆ. ಇಲ್ಲಿನ ಎಂಡ್ ಪಾಯಿಂಟ್ ಪಿಕಾಕ್ ಪಾಯಿಂಟ್ ಎಂಬಲ್ಲಿ ಡ್ರಗ್ಸ್ ಮಾರಾಟ ಮಾಡುವ ದೊಡ್ಡ ತಾಣವಿದ್ದು ವ್ಯಸನಿ ವಿದ್ಯಾರ್ಥಿ–ವಿದ್ಯಾರ್ಥಿನಿಯರು ಆಗಾಗ ಸೇರುತ್ತಾರೆ. ಹೆಸರು ಹೇಳಲಿಚ್ಚಿಸದ ಪ್ರಾಧ್ಯಾಪಕರೊಬ್ಬರ ಪ್ರಕಾರ ಉಡುಪಿ, ದಕ್ಷಿಣ ಕನ್ನಡ, ಜಿಲ್ಲೆಗಳ ಅನೇಕ ವಿದ್ಯಾಕೇಂದ್ರಗಳಲ್ಲಿ



ಕಾಸರಗೋಡು ಸಿಪಿಐ(ಎಂ) ಸಂಸದ ಕರುಣಾಕರನ್ ರವರು ಉಡುಪಿಗೆ ಭೇಟಿ ನೀಡಿ ಪೊಲೀಸ್ ಅಧಿಕಾರಿಗಳೊಂದಿಗೆ ಮಾತನಾಡುತ್ತಿರುವುದು

ಡ್ರಗ್ಸ್ ಮಾರಾಟವಾಗುತ್ತದೆ. ಡ್ರಗ್ಸ್ ಎಲ್ಲೂ ದೊರಕುವುದಿಲ್ಲ ಎಂದಾಗ, ವ್ಯಸನಿ ವಿದ್ಯಾರ್ಥಿಗಳು ಮಣಿಪಾಲದ ಎಂಡ್ ಪಾಯಿಂಟ್, ಪಿಕಾಕ್ ಪಾಯಿಂಟ್‌ಗೆ ಹೋಗುತ್ತಾರೆ ಎಂದು ಜನ ಹೇಳುತ್ತಾರೆ. ಅಂದರೆ ಅಲ್ಲಿ ಡ್ರಗ್ಸ್ ದೊರಕುವುದು ಖಾತ್ರಿ.

ಇಲ್ಲಿನ ವಿದ್ಯಾಲಯಕ್ಕೆ ನಮ್ಮ ರಾಜ್ಯದ ವಿದ್ಯಾರ್ಥಿಗಳು ಮಾತ್ರವಲ್ಲದೆ, ದೇಶ ವಿದೇಶಗಳಿಂದ ವಿದ್ಯಾರ್ಥಿಗಳು ಬರುತ್ತಾರೆ. ಸುಮಾರು 1000ಕ್ಕೂ ಹೆಚ್ಚು ವಿದೇಶಿ ವಿದ್ಯಾರ್ಥಿಗಳು ಇಲ್ಲಿ ಓದುತ್ತಿದ್ದಾರೆ. ಇದರಲ್ಲಿ ಮಲೇಶ್ಯಾದ ವಿದ್ಯಾರ್ಥಿಗಳು ದೊಡ್ಡ ಸಂಖ್ಯೆಯಲ್ಲಿದ್ದಾರೆ. 10,000ಕ್ಕೂ ಹೆಚ್ಚು ಹೊರರಾಜ್ಯದ ವಿದ್ಯಾರ್ಥಿಗಳು ಓದುತ್ತಿದ್ದಾರೆ. ಕೇರಳ ರಾಜ್ಯದವರೂ ದೊಡ್ಡಸಂಖ್ಯೆಯ ವಿದ್ಯಾರ್ಥಿಗಳಿದ್ದಾರೆ. ಖಾಸಗಿ ವಿಶ್ವವಿದ್ಯಾಲಯದಲ್ಲಿ ಹೊರ ರಾಜ್ಯದ, ಬೇರೆ ದೇಶದ ವಿದ್ಯಾರ್ಥಿಗಳು ಓದಬೇಕಂದರೆ, ಬಡ, ಮಧ್ಯಮ ವರ್ಗದವರಿಗೆ ಸಾಧ್ಯವಿಲ್ಲ. ಆದ್ದರಿಂದ ಶ್ರೀಮಂತ ವಿಭಾಗಕ್ಕೆ ಸೇರಿದ ವಿದ್ಯಾರ್ಥಿಗಳೇ ದೊಡ್ಡ ಸಂಖ್ಯೆಯಲ್ಲಿ ಇರುವುದರಿಂದ ಅವರಿಗೆ ಬೇಕಾದ ವ್ಯವಸ್ಥೆಗಳನ್ನು ಮಾಡಿದ್ದಾರೆ.

ಪ'್ರ'ಕ'ರ'ಣ'ವ'ನ'್ನ ಮುಚ್ಚಿಹಾಕುವ ಉದ್ದೇಶವೂ ಅದೇ ಕಾರಣಕ್ಕೇ ಆಗಿದೆ. ದೇಶ ವಿದೇಶಗಳಲ್ಲಿ ವಿಶ್ವವಿದ್ಯಾಲಯಕ್ಕೆ ಕೆಟ್ಟ ಹೆಸರು ಬಂದರೆ ಅಲ್ಲಿಂದ ಬರುವ ವಿದ್ಯಾರ್ಥಿಗಳ ಸಂಖ್ಯೆ ಕುಂಠಿತವಾಗುತ್ತದೆ. ಆ ಮೂಲಕ ಬರುವ ಬಂಡವಾಳಕ್ಕೆ ಧಕ್ಕೆಯಾಗುತ್ತದೆ.

ಹಿಂದೆಯೂ ಇಂತಹ ಪ್ರಕರಣಗಳು ನಡೆದಿತ್ತು ಎನ್ನುವುದಕ್ಕೆ ಒಂದು ಉದಾಹರಣೆ ನೀಡುತ್ತಾರೆ ಸ್ಥಳೀಯರು. ಮಣಿಪಾಲದ ಪಕ್ಕದಲ್ಲಿ ಮಣ್ಣ ಪಳ್ಳ ಎನ್ನುವ ಸಣ್ಣ ಲೇಕ್ (ಕೆರೆ) ಇದೆ. ಇಲ್ಲಿ ವಿದ್ಯಾರ್ಥಿಗಳು ಬೋಟಿಂಗ್‌ಗೆ ಹೋಗುತ್ತಾರೆ. ಒಂದು ದಿನ ರಾತ್ರಿ 3 ವಿದ್ಯಾರ್ಥಿಗಳು ಬೋಟಿಂಗ್‌ಗೆ ಹೋಗಿದ್ದಾರೆ. ಒಬ್ಬ ವಿದ್ಯಾರ್ಥಿ ಮಾತ್ರ ವಾಪಾಸು ಬಂದಿದ್ದ. ಆದರೆ ಇಬ್ಬರು ವಿದ್ಯಾರ್ಥಿಗಳು ಸತ್ತು ಶವವಾಗಿ ಬಂದಿದ್ದರು. ಆದರೆ 'ಬೋಟ್' (ದೋಣಿ) ಈವರೆಗೂ ಪತ್ತೆಯಾಗಿಲ್ಲ. ಆದ್ದರಿಂದ ಈ ವಿದ್ಯಾರ್ಥಿಗಳ ಸಾವು ಹೇಗೆ ಸಂಭವಿಸಿತು ಎಂಬುದು ಇನ್ನೂ ಕೂಡ ಪತ್ತೆಯಾಗಿಲ್ಲ.

ಕಾಂಗ್ರೆಸ್–ಬಿಜೆಪಿಗಳ 'ಮೃದು' ಪ್ರತಿಕ್ರಿಯೆ

ಯಾವಾಗಲೂ ಒಬ್ಬರ ಮೇಲೊಬ್ಬರು ಸಣ್ಣ, ಸಣ್ಣ ವಿಷಯಗಳಿಗೆ ಜಗಳವಾಡುವ ಕರಾವಳಿ ಜಿಲ್ಲೆಗಳ ಕಾಂಗ್ರೆಸ್–ಬಿಜೆಪಿಯವರು 'ಗ್ಯಾಂಗ್ ರೇಪ್' ಪ್ರಕರಣದಲ್ಲಿ ಹೆಚ್ಚು ಗದ್ದಲ ಮಾಡಲೇ ಇಲ್ಲ. ಯಾಕೆಂದರೆ ಯುನಿವರ್ಸಿಟಿಯ 'ಪೈ'ಗಳಿಗೆ ಬೇಸರವಾಗಬಾರದು. ಇಲ್ಲಿನ ಕಾಂಗ್ರೆಸ್ ಶಾಸಕರು ಪ್ರಥಮ ಬಾರಿಗೆ ಹೇಳಿಕೆ ನೀಡಿದ್ದು ಆರೋಪಿಯ ಬಂಧನದ ನಂತರ. ಬಿಜೆಪಿಯ ಮಂಗಳೂರು ಲೋಕಸಭಾ ಸದಸ್ಯರು ಪ್ರಾರಂಭದಲ್ಲಿ 'ಡ್ರಗ್ಸ್' ಮಾಫಿಯಾದ ಕೈವಾಡ ಇದೆ ಎಂದು ಹೇಳಿದರಾದರೂ ನಂತರ ತುಟಿ ಪಿಟಿಕ್ಕೆನ್ನಲಿಲ್ಲ. ಬಹುಶಃ ಬಂಧಿತ ಆರೋಪಿ ರೌಡಿ ಶೀಟರ್ ಯೋಗಿಶ್ ಬಜರಂಗದಳದ ಕಾರ್ಯಕರ್ತ ಎನ್ನುವುದು ಅವರಿಗೆ ತಿಳಿಯಿತು ಎಂದು ಕಾಣುತ್ತದೆ.

ಒಟ್ಟಾರೆಯಾಗಿ ಎರಡೂ ಪಕ್ಷಗಳು ವಿಶ್ವವಿದ್ಯಾಲಯದ ಭದ್ರತಾ ವೈಫಲ್ಯಗಳ ಕುರಿತಾಗಲೀ, ಗೌಪ್ಯವಾಗಿಯಾದರೂ ವಿದ್ಯಾರ್ಥಿನಿಯ ಹೇಳಿಕೆಯನ್ನು ಪಡೆಯುವ ಅಗತ್ಯ ಇದೆ ಎಂಬ ಬಗ್ಗೆಯಾಗಲೀ

ಪುಟ 10 ಕ್ಕೆ

ಖಾಸಗಿಯವರಿಗೆ ಒತ್ತಡ ಹೇರಲು ಸಾಧ್ಯವಿಲ್ಲ – ಸಚಿವ ಜಾರ್ಜ್.

ಮಣಿಪಾಲದ ಘಟನೆಯ ಕುರಿತಾಗಿ ವಿದ್ಯಾರ್ಥಿಗಳು, ಸಾರ್ವಜನಿಕರು ಪ್ರತಿಭಟನೆ ಮಾಡುತ್ತಿದ್ದಂತೆ ಕರ್ನಾಟಕ ಸರ್ಕಾರದ ಗೃಹ ಸಚಿವ ಜಾರ್ಜ್‌ರವರು ಮಣಿಪಾಲಕ್ಕೆ ಭೇಟಿ ನೀಡಿದರು. ನಂತರ ನಡೆದ ಪತ್ರಿಕಾಗೋಷ್ಠಿಯಲ್ಲಿ, ಮಣಿಪಾಲ ವಿಶ್ವವಿದ್ಯಾಲಯದ ಭದ್ರತಾ ವೈಫಲ್ಯದ ಬಗ್ಗೆ, ಪೋಲೀಸರಿಗೂ ವಿದ್ಯಾರ್ಥಿನಿಯನ್ನು ಭೇಟಿಮಾಡಲು ಅವಕಾಶ ನೀಡದಿರುವ ಬಗ್ಗೆ ಪತ್ರಕರ್ತರು ಸಚಿವರ ಗಮನ ಸೆಳೆದಾಗ, 'ಖಾಸಗಿಯವರಿಗೆ ಸೂಚನೆ ನೀಡಬಹುದೇ ಹೊರತು ಒತ್ತಡ ಹೇರಲು ಸಾಧ್ಯವಿಲ್ಲ' ಎಂಬ ಉತ್ತರ ಗೃಹ ಸಚಿವರಿಂದ ಬಂದಿದೆ.

ಅಂದರೆ ಜನರಿಂದ ಆಯ್ಕೆಯಾದ, ಸಂವಿಧಾನಬದ್ಧ ಸರ್ಕಾರದ ಪ್ರತಿನಿಧಿಗಳ ಅಧಿಕಾರ–ಹಕ್ಕಿಗಿಂತ 'ಖಾಸಗಿ ಸಂಸ್ಥೆ'ಗಳ ದರ್ಬಾರೆ ಜೋರು.

ಕಾಂಗ್ರೆಸ್ ಸರ್ಕಾರಗಳ ಮೇಲೆ ಮಣಿಪಾಲ ವಿಶ್ವವಿದ್ಯಾಲಯ ಎಷ್ಟು ಪ್ರಭಾವ ಬೀರಿದೆ ಎಂಬುದಕ್ಕೆ ಇನ್ನೊಂದು ಉದಾರಣೆಯೂ ಇದೆ. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ವಿ.ಶ್ರೀರಾಮರೆಡ್ಡಿ ಮತ್ತು ಕೇರಳದ ಮುಖಂಡರು ಆಸ್ಪತ್ರೆಯ ಮುಖ್ಯಸ್ಥರನ್ನು ಭೇಟಿ ಮಾಡಿದ ನಂತರ ಕಾಲೇಜಿನ ಡೀನ್ ರಾಮ್ ನಾರಾಯಣ್ ಅವರನ್ನು ಸಹ ಭೇಟಿ ಮಾಡಿದರು. ಆ ಸಂದರ್ಭದಲ್ಲಿ ವಿದ್ಯಾರ್ಥಿನಿಯ ತಂದೆ ತಾಯಿಗಳನ್ನು ಕಂಡು ಮಾತನಾಡಬೇಕೆಂದು ಕೇಳಿದಾಗ, ಕೇರಳದ ಮುಖ್ಯಮಂತ್ರಿ ಮಣಿಪಾಲಕ್ಕೆ ಭೇಟಿ ಕೊಡಬೇಕೆಂದಿದ್ದರು. ಆದರೆ ವಿಶ್ವವಿದ್ಯಾಲಯದ ಉಪ ಕುಲಪತಿಗಳು ಕೇರಳ ಮುಖ್ಯಮಂತ್ರಿಗಳನ್ನು ಕಂಡು ಅವರು ಬಾರದಂತೆ ತಡೆದರು ಎಂಬ ಮಾಹಿತಿಯನ್ನು ನೀಡಿದರು.

ಇದರಿಂದ ಮಣಿಪಾಲ ವಿಶ್ವವಿದ್ಯಾಲಯ ಪ್ರಕರಣವನ್ನು ಮುಚ್ಚಿಹಾಕಲು ಸತತವಾಗಿ ಪ್ರಯತ್ನಿಸುತ್ತಿತ್ತು ಎಂಬುದು ಗೊತ್ತಾಗುತ್ತದೆ ಮಾತ್ರವಲ್ಲದೆ, ಕಾಂಗ್ರೆಸ್ ಸರ್ಕಾರಗಳು ಖಾಸಗಿ ಲಾಭಿಗಳಿಗೆ ಮಣಿಯುತ್ತವೆ ಎಂಬುದು ಖಾತರಿಯಾಗುತ್ತದೆ.

ವಿಶ್ವ ವಿದ್ಯಾಲಯ–ಆದರೆ ಆವರಣಗಳೇ ಇಲ್ಲ!

ಖಾಸಗಿ ವಿಶ್ವ ವಿದ್ಯಾಲಯವಾಗಿರುವ ಮಣಿಪಾಲದಲ್ಲಿ ಬಹುತೇಕ ಕಟ್ಟಡಗಳಿಗೆ ಆವರಣಗಳೇ ಇಲ್ಲ. 20,000ಕ್ಕೂ ಹೆಚ್ಚು ವಿದ್ಯಾರ್ಥಿಗಳು ಇಲ್ಲಿನ ವಿವಿಧ ಕಾಲೇಜುಗಳಲ್ಲಿ ಓದುತ್ತಿದ್ದಾರೆ. ಆದರೂ ಕಾಲೇಜಿನ ವಿವಿಧ ವಿಭಾಗಗಳ ನಡುವಿನಿಂದಲೂ ಸಾರ್ವಜನಿಕ ರಸ್ತೆಗಳು ಹಾದು ಹೋಗುತ್ತವೆ ಇದೊಂದು ಉಡುಪಿ ನಗರದ ಹಾಗೆಯೇ ಇರುವ ವ್ಯಾಪಾರಿ ತಾಣ ಎಂದು ಬಣ್ಣಿಸುತ್ತಾರೆ ಜಿ.ವಿ.ಶ್ರೀರಾಮರೆಡ್ಡಿ. ಡೀಮ್ಡ್ ಯುನಿವರ್ಸಿಟಿಗೆ ಇರಬೇಕಾದ ಅರ್ಹತೆ ಈ ವಿಶ್ವವಿದ್ಯಾಲಕ್ಕೆ ಇಲ್ಲ. ಅದರ ಮಾನ್ಯತೆ ರದ್ದು ಮಾಡಿ ಎಂದು ಸಿಪಿಐ(ಎಂ) ನಿಯೋಗ ಹೇಳಿದೆ.

ಹುತಾತ್ಮ ಶ್ರೀನಿವಾಸ ಬಜಾಲ್ ಸ್ಮರಣೆ



ಹಿಂದುತ್ವ ಕೋಮುವಾದಿಗಳ ಹಲ್ಲೆಗೀಡಾಗಿ ಹುತಾತ್ಮರಾದ ಡಿವೈಎಫ್ಐ ಕಾರ್ಯಕರ್ತ ಶ್ರೀನಿವಾಸ ಬಜಾಲ್ ಅವರ 11ನೇ ಸ್ಮರಣಾ ದಿನವನ್ನು ಡಿವೈಎಫ್ಐ ಮಂಗಳೂರಿನ ಬಜಾಲು ಪಕ್ಕಲಡ್ಕ ಘಟಕದ ವತಿಯಿಂದ ಜೂನ್ 26 ರಂದು ಆಚರಿಸಲಾಯಿತು.

ಕಾರ್ಯಕ್ರಮವನ್ನು ಉಳ್ಳಾಲ



ವಲಯ ಸಿಪಿಐ(ಎಂ) ಕಾರ್ಯದರ್ಶಿ ಕೃಷ್ಣಪ್ಪ ಸಾಲ್ಯಾನ್ ಉದ್ಘಾಟಿಸಿದರು. ಶ್ರೀನಿವಾಸ್ ಬಜಾಲ್‌ನಂತಹ ಕ್ರಾಂತಿಕಾರಿಗಳಿಗೆ ಇರುವುದು ಹುಟ್ಟು ಮಾತ್ರ; ಅವರಿಗೆ ಸಾವಿಲ್ಲ; ಅವರ ಕನಸುಗಳು ಆಶಯಗಳು ಎಂದೆಂದಿಗೂ ಅಮರವಾಗಿರುತ್ತವೆ; ದೇಶದ ಸಾರ್ವಭೌಮತೆಗೆ ಕಂಟಕವಾಗಿರುವ ಕೋಮುವಾದ ಮತ್ತು ಮೂಲಭೂತವಾದ ನಾಶ ಮಾಡಲು ದೇಶದ ಯುವಜನತೆ ಸನ್ನದ್ಧರಾಗಿರಬೇಕು ಎಂದು ಅವರು ನುಡಿದರು.


ಪ್ರತಿ ವರ್ಷದಂತೆ ಸ್ಮರಣಾ ಕಾರ್ಯಕ್ರಮದ ಭಾಗವಾಗಿ ಡಿವೈಎಫ್ಐ ಕಾರ್ಯಕರ್ತರಿಂದ ಸ್ವಯಂಪ್ರೇರಿತ ರಕ್ತದಾನ ಶಿಬಿರ ಹಾಗೂ ಎಸ್ಎಸ್ಎಲ್ಸಿ ಪರೀಕ್ಷೆಯಲ್ಲಿ ಗರಿಷ್ಠ ಅಂಕ ಪಡೆದ ನೆರೆ ಹೊರೆ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪ್ರಧಾನ ನಡೆಯಿತು.

ಡಿವೈಎಫ್ಐ ಪಕ್ಕಲಡ್ಕ ಘಟಕದ ಅಧ್ಯಕ್ಷ ನವೀನ್ ನಾಯಕ್ ಕಾರ್ಯಕ್ರಮದ ಅ ಧ್ಯಕ್ಷತೆ ವಹಿಸಿದ್ದರು. ಡಿವೈಎಫ್ಐ ಮಂಗಳೂರು ನಗರ ಸಮಿತಿ ಅಧ್ಯಕ್ಷ ಬಿ.ಕೆ.ಇಮ್ತಿಯಾಜ್, ಕಾರ್ಯದರ್ಶಿ ಸಂತೋಷ್ ಕುಮಾರ್ ಬಜಾಲ್, ಘಟಕದ ಕಾರ್ಯದರ್ಶಿ ಜಗದೀಶ್ ಬಜಾಲ್, ಪಕ್ಕಲಡ್ಕ ಯುವಕ ಮಂಡಲದ ಅಧ್ಯಕ್ಷ ಅಶೋಕ್ ಸಾಲ್ಯಾನ್, ಜನತಾ ವ್ಯಾಯಾಮ ಶಾಲೆಯ ಅಧ್ಯಕ್ಷ ಸುರೇಶ್ ಬಜಾಲ್, ಮಂಗಳೂರು ವೆನ್ಲಾಕ್ ಆಸ್ಪತ್ರೆಯ ವೈದ್ಯ ಡಾ|ಪವನ್ ಮತ್ತಿತರರು ಭಾಗವಹಿಸಿದ್ದರು.

ಬೇಡಿಕೆ ಒತ್ತಾಯಿಸಿ ಮಂಗಳೂರಿನಲ್ಲಿ ಕಟ್ಟಡ ಕಾರ್ಮಿಕರ ಪ್ರತಿಭಟನೆ:

ನೋಂದಾಯಿತ ಕಟ್ಟಡ ಕಾರ್ಮಿಕರ ಸವಲತ್ತುಗಳನ್ನು ವಿತರಣೆ ಮಾಡಲು ವಿಳಂಬ ಮಾಡಲಾಗುತ್ತಿದೆ ಎಂದು ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಒಕ್ಕೂಟದ ಅಧ್ಯಕ್ಷ ಬಿ.ಎಂ.ಭಟ್ ಹೇಳಿದರು.

ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕರ ದ.ಕ.ಜಿಲ್ಲಾ ಒಕ್ಕೂಟದಿಂದ ಮಂಗಳೂರು ನಗರದಲ್ಲಿರುವ ಸಹಾಯಕ ಕಾರ್ಮಿಕರ ಕಚೇರಿ ಮುಂಭಾಗ ಜೂನ್ 27 ರಂದು ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಅವರು ಮಾತನಾಡಿದರು.



ಸಿಐಟಿಯು ದ.ಕ.ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ ವಸಂತ ಆಚಾರಿ ಮಾತನಾಡಿ, ಕಲ್ಯಾಣ ಮಂಡಲಿ ಇಷ್ಟ ಬಂದಂತೆ ವರ್ತಿಸುತ್ತಿರುವುದು ಖಂಡನೀಯ; ನರ ಮತ್ತು ಮೆದುಳಿಗೆ ಸಂಬಂಧಿಸಿದ ಕಾಯಿಲೆಗಳೂ ಸೇರಿದಂತೆ ಹೊರ ರೋಗಿಗಳಾಗಿ ಮನೆಗಳಲ್ಲಿ ದೀರ್ಘಾವಧಿ ಚಿಕಿತ್ಸೆಗೆ ಒಳಗಾಗುವ ಕಾರ್ಮಿಕರಿಗೂ ಸವಲತ್ತಿನ ಹಣ ವಿಸ್ತರಿಸಬೇಕು ಎಂದು ಒತ್ತಾಯಿಸಿದರು.

ಕಾರ್ಮಿಕ ಅಧಿಕಾರಿಗಳಿಗೆ ಬಳಿಕ ಮನವಿ ಸಲ್ಲಿಸಲಾಯಿತು. ಸಿಐಟಿಯು ಜಿಲ್ಲಾ ಸಮಿತಿ



ಅ ಧ್ಯಕ್ಷ ಜೆ.ಬಾಲಕೃಷ್ಣ ಶೆಟ್ಟಿ, ಒಕ್ಕೂಟದ ಮುಖಂಡರಾದ ಶಶೀಂದ್ರ ಕುಕ್ಯಾನ್, ಸದಾಶಿವ ದಾಸ್, ರಾಮಣ್ಣ ವಿಟ್ಲ, ರಾಧ ಮೂಡಬಿದರೆ, ವಸಂತಿ ಕುಪ್ಪೆಪದವು, ಶಂಕರ ಮೂಡಬಿದರೆ ಮತ್ತಿತರರು ಉಪಸ್ಥಿತರಿದ್ದರು.

ವಿದ್ಯಾರ್ಥಿ ವೇತನಕ್ಕೆ ಆಗ್ರಹಿಸಿ ಕೋಟೆಕಾರು ಬೀಡಿ ಕಾರ್ಮಿಕರ ಪ್ರತಿಭಟನೆ:

ಬೀಡಿ ಕಾರ್ಮಿಕರ ಮಕ್ಕಳಿಗೆ ವಿದ್ಯಾರ್ಥಿ ವೇತನ ನೀಡಲು ಆಧಾರ್ ಕಾರ್ಡು ಕಡ ಮಾಡಬಾರದು; ಒಂದನೇ ತರಗತಿಯ ಎಂಟನೇ ತರಗತಿ ಕಲಿಯುವ ಮಕ್ಕಳಿ ವಿದ್ಯಾರ್ಥಿ ವೇತನ ಮುಂದುವರಿಸಬ ಎಂದು ಕಾಂಗ್ರೆಸ್ ನೇತೃತ್ವದ ಕಾಂ ಸರಕಾರವನ್ನು ಸಿಪಿಐ(ಎಂ) ಉಳ್ಳಾಲ ವಲ ಸಮಿತಿ ಕಾರ್ಯದರ್ಶಿ ಕೃ ಸಾಲಿಯಾನ್ ಆಗ್ರಹಿಸಿದರು.

ಜುಲಾಯಿ 1 ರಂದು ಕೋಟೆಕಾರು ಸರ್ಕಲ್ ಬೀಡಿ ಲೇಬ ಯೂನಿಯನ್ (ಸಿಐಟಿಯ ವತಿಯಿಂದ ದೇರಳಕಟ್ಟೆ ಬೀಡಿ ಕಾರ್ಮಿಕರ ಕ್ಷೇಮ ಡಿಸ್ಪೆನ್ಸರಿ ಎದುರು ನಡೆ ಪ್ರತಿಭಟನೆಯನ್ನು ಉದ್ದೇ ಅವರು ಮಾತನಾಡಿದರು.

ವಿದ್ಯಾರ್ಥಿ ವೇತನದ ಮಂಜೂರ ಪಟ್ಟಿಯನ್ನು ಪ್ರತಿ ಶಾಲೆಗಳಿ ಕಳುಹಿಸಿಕೊಡಬೇಕು; ವಿದ್ಯಾರ್ಥಿ ವೇ ಮೊತ್ತವನ್ನು ಹೆಚ್ಚಿಸಬೇಕು; ಬ್ಯಾಂಕ್ ಖಾತೆಗ ಹಣ ಜಮಾಗೊಳ್ಳುವುದ ಇಲಾಖೆಯೂ ಖಾತ್ರಿಪಡಿಸಬೇ ಎಂದು ಅ ಒತ್ತಾಯಿಸಿದರು.

ದೇರಳಕಟ್ಟೆಯ ಡಿಸ್ಪೆ ನಿರ್ದೇಶಕರಿಗೆ ಬೇಡಿಕೆ ಮನವಿಯನ್ನು ಬ ಸಲ್ಲಿಸಲಾಯಿತು.

ಕೋಟೆಕಾರ್ ಸರ್ಕ ಬೀಡಿ ಲೇಬರ್ ಯೂನಿಯನ್ ಕಾರ್ಯದರ್ಶಿ ಜಯ ನಾಯಕ್, ಸಿಐಟಿಯು ರಾಜ್ಯ ಸಮಿ ಸದಸ್ಯ ಬಾಬು ಪಿಲಾರ್, ಯೂನಿಯ ಕೋಶಾಧಿಕಾರಿ ವಿಲಾಸಿನಿ, ಕೆ.ಸುಂದ ಕುಂಪಲ, ನಾರಾಯಣ ತಲಪಾಡಿ, ಸಂಕ ಅಸೈಗೋಳಿ, ವಿಶ್ವನಾಥ ತೇವುಲ, ಜಯ ಉಳ್ಳಾಲ ಬೈಲ್ ಮತ್ತಿತರರು ಪ್ರತಿಭಟನೆಯ ಭಾಗವಹಿಸಿದ್ದರು.

ತೆಂಕನಿಡಿಯೂರು : ನಿವೇಶನ ರಹಿತರ ಬೃಹತ್ ಸಮಾವೇಶ

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಉಡುಪಿ ತಾಲೂಕು ಸಮಿತಿ ನೇತೃತ್ವದಲ್ಲಿ ಬಡ ನಿವೇಶನ ರಹಿತ ಅರ್ಜಿದಾರರಿಂದ ಭೂಮಿ ಹಕ್ಕಿಗಾಗಿ ಜುಲೈ 9, ಮಂಗಳವಾರ ಅಪರಾಹ್ನ ಗಂಟೆ 3 ಕ್ಕೆ ಉಡುಪಿ ತಾಲೂಕು ತಹಶೀಲ್ದಾರ್ ಕಛೇರಿ ಎದುರು ಬೃಹತ್ ಪ್ರತಿಭಟನೆ ಹೋರಾಟ ನಡೆಸಲು ತೀರ್ಮಾನಿಸಲಾಯಿತು. ಉಡುಪಿ ತಹಶೀಲ್ದಾರ್ ಕಛೇರಿ ಮುತ್ತಿಗೆ ಹೋರಾಟದ ಪೂರ್ವಭಾವಿಯಾಗಿ ತೆಂಕನಿಡಿಯೂರು ಗ್ರಾಮ ಪಂಚಾಯತ್ ವ್ಯಾಪ್ತಿಯ ಬಡ ನಿವೇಶನರಹಿತ ಅರ್ಜಿದಾರರ ಬೃಹತ್ ಸಮಾವೇಶ ಜೂನ್ 22 ರಂದು ಯಶಸ್ವಿಯಾಗಿ ನಡೆಯಿತು.

ಕರ್ನಾಟಕ ಪ್ರಾಂತ ಕೃಷಿಕೂಲಿಗಾರರ ಸಂಘದ ರಾಜ್ಯ ಉಪಾಧ್ಯಕ್ಷ ವೆಂಕಟೇಶ ಕೋಣಿ ಸಮಾವೇಶವನ್ನು ಉದ್ಘಾಟಿಸಿ ಮಾತನಾಡುತ್ತಾ, ಕೃಷಿಕೂಲಿಕಾರರ ಸಂಘದ ನೇತೃತ್ವದಲ್ಲಿ ಈಗಾಗಲೇ ನಿವೇಶನ ರಹಿತರ ಸಹಸ್ರಾರು ಅರ್ಜಿಗಳನ್ನು ಸಲ್ಲಿಸಲಾಗಿದ್ದರೂ – ನಿವೇಶನಗಳ ವಿತರಣೆ ಮಾಡದೇ ಮೀನಾಮೇಷ ಮಾಡುವುದನ್ನು ಖಂಡಿಸಿದರು. ಭೂಮಿ ಹಕ್ಕು ನಮ್ಮ ಮೂಲಭೂತ ಹಕ್ಕು ಇದನ್ನು ಯಾರಿಂದಲೂ ಕಸಿದುಕೊಳ್ಳಲು ಸಾಧ್ಯವಿಲ್ಲ. ಈ ನಿಟ್ಟಿನಲ್ಲಿ ನಿವೇಶನ ರಹಿತರ ಹೋರಾಟವನ್ನು ಇನ್ನಷ್ಟು ತೀವ್ರಗೊಳಿಸಲಾಗುವುದು ಎಂದು ಸರಕಾರವನ್ನು ಎಚ್ಚರಿಸಿದರು. ತೆಂಕನಿಡಿಯೂರು ಗ್ರಾಮ ಪಂಚಾಯತ್ ವ್ಯಾಪ್ತಿಯ ಬಡ ನಿವೇಶನ ರಹಿತರು ಸಲ್ಲಿಸಿದ ಒಟ್ಟು 225 ಅರ್ಜಿಗಳನ್ನು ಈ ಕೂಡಲೇ ಇತ್ಯರ್ಥಗೊಳಿಸಬೇಕೆಂದು ಸರಕಾರವನ್ನು ಒತ್ತಾಯಿಸಲಾಯಿತು.

ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘದ ಉಡುಪಿ ಜಿಲ್ಲಾಧ್ಯಕ್ಷ ದೋ ಸುವರ್ಣ ಸಮಾವೇಶದಲ್ಲಿ ಮಾತನಾಡಿದ ಜಿಲ್ಲಾ ಪಂಚಾಯತ್ ವತಿಯಿಂದ ನಿವೇ ರಹಿತರಿಗೆ ನಿವೇಶನ ನೀಡುವ ಸಲುವಾ ಉಡುಪಿ ತಾಲೂಕು ವ್ಯಾಪ್ತಿಯ 25 ಗ್ರಾಮಗಳ ಜಮೀನು ಗುರುತಿಸಲಾಗಿದ್ದು ನಿವೇಶನ ವಿತರಣೆಗೆ ಕ್ರಮ ಕೈಕೊಳ್ಳಬೇಕೆಂ ಸರಕಾರವನ್ನು ಒತ್ತಾಯಿಸಲಾಯಿತು. ಸಂಘ ತೆಂಕನಿಡಿಯೂರು ಗ್ರಾಮ ಘಟಕದ ಅಧ್ಯ ಯಾಧವ ಆಚಾರ್ ಸಮಾವೇಶದ ಅ ಧ್ಯ ವಹಿಸಿದ್ದರು. ಕಾರ್ಯಾದರ್ಶಿ ಉಮೇ ಕುಂದರ್ ಕಾರ್ಯಕ್ರಮ ನಿರೂಪಿಸಿದರ ಮಲ್ಪೆ ಪ್ರದೇಶ ಬೀಡಿ ಕಾರ್ಮಿಕರ ಸಂಘ ಅಧ್ಯಕ್ಷೆ ಸುಗಂಧಿ, ಬೀಡಿ ಕಾರ್ಮಿಕ ಸಂಘ ಮುಂದಾಳು ನಳಿನಿ ಸಮಾವೇಶಕ್ಕೆ ಬೆಂಬಲಿ ಶುಭ ಕೋರಿದರು

ವರದಿ : – ಉಮೇಶ್ ಕುಂದ

ಜನಶಕ್ತಿ
ಕನ್ನಡ ವಾರಪತ್ರಿಕೆ

ಐಸಿಡಿಎಸ್ ಯೋಜನೆಯನ್ನು ದುರ್ಬಲಗೊಳಿಸುವ ಮತ್ತು
ಖಾಸಗೀಕರಿಸುವ ನೀತಿಗಳ ದುಷ್ಟ ನೀತಿಗಳು

ತಾಯಿಯ ಗರ್ಭದಲ್ಲಿರುವ ಒಂದು ಮಗು ಎಂದರೆ ಭವಿಷ್ಯದ ಭಾರತದಲ್ಲಿ ಉಜ್ವಲ ಚೈತನ್ಯದೊಂದಿಗೆ ಬೆಳಗಬಹುದಾದ ಒಂದು ಶಕ್ತಿ, ದೇಶದ ಕತ್ತಲೆಯ ವಿರುದ್ದ ಹೋರಾಡುವ-ದೇಶದಿಂದ ಕತ್ತಲೆಯನ್ನು ಹೊಡೆದು ಓಡಿಸುವ ಬೆಳಕಾಗಬೇಕಾದ ಒಬ್ಬ ಯುವತಿ ಅಥವಾ ಯುವಕ ಎಂಬ ಕಣ್ಣೋಟ ನಮ್ಮ ಆಳುವ ಜನರಿಗೆ ಇರಬೇಕು. ಅದಿಲ್ಲದ್ದರಿಂದ ದೇಶದ ನವಪೀಳಿಗೆಯ ಬೆಳವಣಿಗೆಯ ಮೇಲೆ ಮಾರಕ ಪರಿಣಾಮ ಬಿರುವಂತಹ ಅಪಾಯವನ್ನೂ ಲೆಕ್ಕಿಸದೇ ಅಮೂಲ್ಯವಾದ 'ಅಂಗನವಾಡಿ ವ್ಯವಸ್ಥೆ'ಯನ್ನೇ ಕಳಚಿ ಹಾಕುವಂತಹ ದಿಕ್ಕಿನಲ್ಲಿ ಹೆಜ್ಜೆ ಹಾಕುತ್ತಿವೆ.

ಭಾರತದಲ್ಲಿ ಶೇ. 58 ರಷ್ಟು ಗರ್ಭಿಣಿಯರು ರಕ್ತಹೀನತೆಯಿಂದ ಬಳಲುತ್ತಿದ್ದಾರೆ. ದೇಶದ ವರ್ಷದೊಳಗಿನ ಮಕ್ಕಳಲ್ಲಿ ಶೇ. 50 ರಷ್ಟು ಮಕ್ಕಳು ಇರಬೇಕಾದುದಕ್ಕಿಂತ ಕಡಿಮೆ ತೂಕದ ಮಕ್ಕಳಾಗಿವೆ. 6 ತಿಂಗಳ ಒಳಗಿನ ಶೇ. 80 ಮಕ್ಕಳು ರಕ್ತಹೀನತೆ(ಅನೀಮಿಯ)ಯಿಂದ ಬಳಲುತ್ತಿವೆ. ತಮ್ಮ ಐದನೇ ವಯಸ್ಸು ತಲುಪುವ ಮೊದಲೇ ಭಾರತದ 21 ಲಕ್ಷ ಮಕ್ಕಳು ಪ್ರತಿವರ್ಷ ಸಾವನ್ನಪ್ಪುತ್ತಿವೆ. ಇಂತಹ ಪರಿಸ್ಥಿತಿಯಲ್ಲಿ ಮಹಿಳೆಯರ ಮತ್ತು ಮಕ್ಕಳನ್ನು ಬದುಕನ್ನು ಉಳಿಸುವ ಅವರ ಸರ್ವಾಂಗೀಣ ಆರೋಗ್ಯವನ್ನು ಸುಧಾರಿಸುವತ್ತ ನಮ್ಮ ಸರ್ಕಾರಗಳು ವಿಶೇಷ ಗಮನ ನೀಡಬೇಕಿದೆ. ಆದರೆ ಕಾಂಗ್ರೆಸ್ ನೇತೃತ್ವದ ಯುಪಿಎ ಕೇಂದ್ರ ಸರ್ಕಾರವು ಮಹಿಳೆಯರು ಮತ್ತು ಮಕ್ಕಳ ಕಾಳಜಿಯ ಮಾತನಾಡುತ್ತ ಆಡುತ್ತಾ ಕೃತಿಯಲ್ಲಿ ಅವರ ವಿರುದ್ದ ದಿಕ್ಕಿನಲ್ಲಿ ಸಾಗುತ್ತಿರುವುದು ಆತಂಕಕಾರಿಯಾಗಿದೆ.

ದೇಶದಲ್ಲಿ 1.8 ಕೋಟಿ ಮಹಿಳೆಯರು ಮತ್ತು 8 ಕೋಟಿ ಮಕ್ಕಳನ್ನು ಫಲಾನುಭವಿಗಳಾಗಿ ಹೊಂದಿರುವ ಯೋಜನೆ ಸಮಗ್ರ ಶಿಶು ಅಭಿವೃದ್ದಿ ಯೋಜನೆ. ಐಸಿಡಿಎಸ್ ಎನ್ನಲಾಗುವ ಈ ಯೋಜನೆಯಲ್ಲಿ ದೇಶದಾದ್ಯಂತ ಅಂಗನವಾಡಿ ಕೇಂದ್ರಗಳ ಮೂಲಕ ಗರ್ಭಿಣಿ ಮಹಿಳೆಯರಿಗೆ ಮತ್ತು ಮಕ್ಕಳಿಗೆ ಪೌಷ್ಟಿಕ ಆಹಾರ ಪೂರೈಕೆ ಮತ್ತು ಆರೋಗ್ಯ ಪಾಲನೆ ಮಾಡುತ್ತ ಬರಲಾಗುತ್ತಿದೆ. ಇಂತಹ ಮಹತ್ವದ 'ಯೋಜನೆ'ಗೆ ಶಾಶ್ವತ ರೂಪನೀಡಿ ಮಹಿಳೆಯರ ಮತ್ತು ಮಕ್ಕಳ ಆರೋಗ್ಯವನ್ನು ಕಾಪಾಡುವ-ಅಪೌಷ್ಟಿಕತೆ ನಿವಾರಿಸುವ ಕರ್ತವ್ಯ ಆಳುವ ಸರ್ಕಾರಗಳಿಗಿದೆ.

ಯುಪಿಎ ಸರ್ಕಾರ ಈ ಕುರಿತು ಮಾತನಾಡುತ್ತಿದೆ. ಬರೀ ಮಾತಾಡುತ್ತಿದೆ. ಆದರೆ ಕೃತಿಯಲ್ಲಿ ಈ ಆಶಯದ ವಿರುದ್ದ ಸಾಗುತ್ತಿದೆ. ಇದು ಬಹಳ ಕಳವಳಕರಿ ಸಂಗತಿಯಾಗಿದೆ.

ಐಸಿಡಿಎಸ್ ಯೋಜನೆಗೆ 11ನೇ ಪಂಚವಾರ್ಷಿಕ ಯೋಜನೆಯಲ್ಲಿ ಸು. 73,000 ಕೋಟಿ ರೂಗಳ ಅನುದಾನ ಅಗತ್ಯವಾಗಿದ್ದ ಕಡೆ ಅಂದಿನ ಯುಪಿಎ ಸರ್ಕಾರ ಕೇವಲ 37,891 ಕೋಟಿ ಮಾತ್ರ ಬಜೆಟ್‌ನಲ್ಲಿ ಕೊಟ್ಟಿತ್ತು.

ಈಗ 12ನೇ ಪಂಚವಾರ್ಷಿಕ ಯೋಜನೆಯಲ್ಲಿ 3 ಲಕ್ಷ ಕೋಟಿ ಅನುದಾನ ಅಗತ್ಯವಾದ ಕಡೆ ಸರ್ಕಾರ ಕೊಟ್ಟಿರುವುದು 1,23,588 ಕೋಟಿ ಮಾತ್ರ.

2012 ರಲ್ಲಿ ಸ್ವತಃ ಪ್ರಧಾನಮಂತ್ರಿಗಳು ಅಪೌಷ್ಟಿಕತೆಯನ್ನು 'ರಾಷ್ಟ್ರೀಯ ಅವಮಾನ' ಎಂದು ಘೋಷಿಸಿ ಐಸಿಡಿಎಸ್‌ನ್ನು ಇನ್ನು ಮುಂದೆ ಒಂದು ಅಭಿಯಾನ (ಮಿಷನ್) ಮಾದರಿಯಲ್ಲಿ ನಡೆಸಲಾಗುವುದು ಎಂದಿದ್ದರು. ಮತ್ತು ಐಸಿಡಿಎಸ್‌ಗಿಂತಲೂ ದೂರದೃಷ್ಟಿಯ ಬಲವಾದ ವ್ಯವಸ್ಥೆಯ ಅಗತ್ಯವನ್ನು ಒತ್ತಿ ಹೇಳಿದ್ದರು. ಆದರೆ ಹಾಗೆ ಹೇಳುತ್ತಾ ಅವರು ತಮ್ಮ ಮಾತಿನ ಆಶಯಕ್ಕೆ ವಿರುದ್ದವಾಗಿ ಐಸಿಡಿಎಸ್ ಯೋಜನೆಯನ್ನು ಪರೋಕ್ಷವಾಗಿ ಖಾಸಗೀಕರಿಸುವ ಇಂಗಿತವನ್ನು ವ್ಯಕ್ತಪಡಿಸಿದರು.



ಈ ನೀತಿಯ ಭಾಗವಾಗಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವಾಲಯ ಸರ್ಕಾರಿ-ಖಾಸಗಿ ಪಾಲುದಾರಿಕೆಯ ದಸ್ತಾವೇಜನ್ನು ತಂದಿದೆ.

ಐಸಿಡಿಎಸ್ ಯೋಜನೆಗೆ ಬೇಕಾದಮೂಲ ಸೌಕರ್ಯ, ನಿರ್ವಹಣೆಗೆ ಮತ್ತು ಸೇವಾ ವಿತರಣೆಯಲ್ಲಿ ಬದಲಾವಣೆ ತರುವುದು ಈ ದಸ್ತಾವೇಜಿನ ಮೂಲ ಲಕ್ಷಣವಾಗಿದೆ. ಇಲ್ಲಿ ಬದಲಾವಣೆಯ ದಿಕ್ಕು ಜನವಿರೋಧಿ ದಿಕ್ಕಿನಲ್ಲಿದೆ.

ಖಾಸಗೀಕರಣದ ಹೆಜ್ಜೆಗಳು ಮತ್ತು ಜನವಿರೋಧಿ ಭಂಡತನ

ದಸ್ತಾವೇಜಿನಲ್ಲಿರುವ ಕೆಲವು ಪ್ರಮುಖ ಸೂಚನೆಗಳು ಹೀಗಿವೆ. ಅಂಗನವಾಡಿ ಕೇಂದ್ರಗಳಲ್ಲಿ ಪೂರಕ ಪೌಷ್ಟಿಕ ಆಹಾರವನ್ನು ಕೊಡುವ ಬದಲಿಗೆ ಪೌಷ್ಟಿಕತೆಯ ಶಿಕ್ಷಣ ಮತ್ತು ಸಲಹೆಗಳನ್ನು ನೀಡುವುದು. ಶೇ. 10 ಐಸಿಡಿಎಸ್ ಪ್ರಾಜೆಕ್ಟ್‌ಗಳನ್ನು ಕಡ್ಡಾಯವಾಗಿ ಖಾಸಗೀಕರಿಸುವುದು. ಶೇ. 10 ಐಸಿಡಿಎಸ್ ಪ್ರಾಜೆಕ್ಟ್‌ಗಳನ್ನು ಪಂಚಾಯತ್ ರಾಜ್ ಇಲಾಖೆಗೆ ಒಪ್ಪಿಸುವುದು. ಹೆಚ್ಚುವರಿ ಮತ್ತು ಸಂಪರ್ಕ ಕಲ್ಪಿಸುವ ನೌಕರರಿಗೆ ಪ್ರೋತ್ಸಾಹ ಧನ ನೀಡುವುದು. ಅಂದರೆ ನೌಕರರಿಗೆ ಉದ್ಯೋಗ ಎಂಬುದರ ಬದಲಿಗೆ ಕೆಲಸಕ್ಕೆ 'ತುಂಡು ಗುತ್ತಿಗೆ' ರೂಪವನ್ನು ಕಲ್ಪಿಸುವುದು.

ಎಲ್ಲಾ ನೌಕರರನ್ನು ಸಹ ಗುತ್ತಿಗೆ ಕಾರ್ಮಿಕರಾಗಿ ಪರಿಗಣಿಸುವ ದಿಕ್ಕಿನಲ್ಲಿ ನೀತಿಯನ್ನು ಬದಲಿಸುವುದು. ಒಟ್ಟು ಅಂಗನವಾಡಿ ಕೇಂದ್ರಗಳಲ್ಲಿ ಶೇ. 15 ಕೇಂದ್ರಗಳಿಗೆ ಮಾತ್ರ ಸರ್ಕಾರ ಕಟ್ಟಡ ಕಟ್ಟಿಸಲು ಅನುದಾನ ನೀಡುವುದು. ಉಳಿದ ಕಟ್ಟಡಗಳಿಗೆ ಸ್ಥಳೀಯವಾಗಿ ಸಂಪನ್ಮೂಲಗಳನ್ನುಸಂಗ್ರಹಿಸಲು ಅಂದರೆ ಖಾಸಗಿ ಮತ್ತು ಸ್ವ-ಯಂ ಸೇವಾ ಸಂಘಟನೆಗಳ ಸಹಾಯದಿಂದ ಸಂಪನ್ಮೂಲ ಸಂಗ್ರಹಿಸಲು ಸೂಚಿಸುವುದು.

ಅಪೌಷ್ಟಿಕತೆ ಹೆಚ್ಚಿರುವ ಯೋಜನೆಗಳಲ್ಲಿ ಪ್ರತಿ ಅಂಗನವಾಡಿ ಕೇಂದ್ರ-ಕ್ಕೆ ಒಬ್ಬರು ಸಲಹೆಗಾರರು, ಹೆಚ್ಚುವರಿ ಸಿಬ್ಬಂದಿಯನ್ನು ಒದಗಿಸುವುದು. ಈ ನೇಮಕಾತಿಯನ್ನು ನೇರವಾಗಿ ಸರ್ಕಾರದಿಂದ ನಡೆಸುವ ಬದಲಿಗೆ ಎನ್‌ಜಿಓಗಳಿಗೆ ವಹಿಸುವುದು. ಹೀಗೆ ಎಷ್ಟೋ ಜನವಿರೋಧಿ ಅಂಶಗಳು ದಸ್ತಾವೇಜಿನಲ್ಲಿ ಅಡಗಿವೆ.

'ಮಿನಿ ಅಂಗನವಾಡಿ ಕೇಂದ್ರ'ಎಂದು ಕರೆಯಲಾಗುವ ಕೇಂದ್ರದ ಕಾರ್ಯಕರ್ತರಿಗೆ ಪೂರ್ಣ ಪ್ರಮಾಣದ ಕಾರ್ಯಕರ್ತರನ್ನಾಗಿ ಘೋಷಿಸುವ ಬದಲಿಗೆ ಕೇವಲ 2,250 ರೂ. 'ಗೌರವಧನ' ನೀಡುವ ಪ್ರಸ್ತಾಪವಿರುವ ಈ ದಸ್ತಾವೇಜು ಅಂಗನವಾಡಿ ನೌಕರರ ವೇತನ – ಸೇವಾ ನಿಯಮಾವಳಿಗಳ ಬಗ್ಗೆ ಮಾತ್ರ ದಿವ್ಯ ಮೌನ ತಾಳಿದೆ ಎಂಬುದನ್ನು ಗಮನಿಸಬೇಕಿದೆ.

ಇನ್ನು ಮುಂದೆ ಅಂಗನವಾಡಿ ಸಹಾಯಕಿಗೂ ಕನಿಷ್ಟ ವಿದ್ಯಾರ್ಹತೆ, ಕಾರ್ಯಕರ್ತೆ ಕಡ್ಡಾಯವಾಗಿ ಎಸ್‌ಎಸ್‌ಎಲ್‌ಸಿ ಪಾಸಾಗಿರಬೇಕು ಎಂಬ ನಿಯಮಾವಳಿ ಸೂಚಿಸಲಾಗಿದೆ. ವಯೋಮಿತಿ 44 ರಿಂದ 35 ಕ್ಕೆ ಇಳಿಸುವ ನೀತಿ ಈಗಾಗಲೇ ಜಾ-ರಿಯಾಗಿದೆ. ಮತ್ತು ಈಗಾಗಲೇ ರಾಜ್ಯದಲ್ಲಿ ಚಿಕ್ಕಬಳ್ಳಾಪುರ, ರಾಮನಗರ, ಬೆಂಗಳೂರು ಗ್ರಾಮಾಂತರ ಮತ್ತು ನಗರ ಜಿಲ್ಲೆಗಳಲ್ಲಿ ವೇದಾಂತ ಸಂಸ್ಥೆಗೆ ಅಂಗನವಾಡಿಗಳಲ್ಲಿ ಪಾಲುದಾರಿಕೆ ನೀಡಿದೆ.

ಹಾಸನ ಜಿಲ್ಲೆಯಲ್ಲಿ 'ಮಕ್ಕಳ ಮನೆ'ಯನ್ನು ಸ್ಥಾಪಿಸುವ ಮೂಲಕ ಅಂಗನವಾಡಿ ಕೇಂದ್ರಗಳನ್ನು ಮುಚ್ಚುವ ಪರಿಸ್ಥಿತಿ ಬಂದಿದೆ.

ಸ್ತ್ರೀ ಶಕ್ತಿ ಸಂಘಟನೆಗಳಿಗೆ ಬಿಸಿಯೂಟವನ್ನು ಮಾಡಿ ಅಂಗನವಾಡಿ ಕೇಂದ್ರಗಳಿಗೆ ಸರಬರಾಜು ಮಾಡಲು ಇಲಾಖೆಯಿಂದ ಸೂಚಿಸಲಾಗಿದೆ.

ಐಸಿಡಿಎಸ್‌ನ್ನು ಖಾಸಗೀಕರಿಸುವ ಮುಖಾಂತರ ಯೋಜನೆಯನ್ನು ನಿಧಾನವಾಗಿ ಸ್ಥಗಿತಗೊಳಿಸಲು ಹೊರಟಿರುವ ಸರ್ಕಾರದ ತೀರ್ಮಾನವನ್ನು ವಿರೋಧಿಸಿ ಮತ್ತು ಇತರ ಬೇಡಿಕೆಗಳಿಗಾಗಿ ಒತ್ತಾಯಿಸಿ ಜಿಲ್ಲಾಧಿಕಾರಿಗಳ ಕಛೇರಿಗಳ ಮುತ್ತಿಗೆ ನಡೆಯುತ್ತಿದೆ. ಉಜ್ವಲ ಚೈತನ್ಯದ ಭವಿಷ್ಯದ ಪೀಳಿಗೆ ಬೇಡವೇ ?

ಇಂದು ತಾಯಿಯ ಗರ್ಭದಲ್ಲಿರುವ ಒಂದು ಮಗು ಎಂದರೆ ಅದು ಭವಿಷ್ಯದ ಭಾರತದಲ್ಲಿ ಉಜ್ವಲ ಚೈತನ್ಯದೊಂದಿಗೆ ಬೆಳಗುವ ಒಂದು ಶಕ್ತಿ, ದೇಶದ ಕತ್ತಲೆಯ ವಿರುದ್ದ ಹೋರಾಡುವ-ದೇಶದಿಂದ ಕತ್ತಲೆಯನ್ನು ಹೊಡೆದು ಓಡಿಸುವ ಬೆಳಕಾಗಬೇಕಾದ ಒಬ್ಬ ಯುವತಿ ಅಥವಾ ಯುವಕ ಎಂಬ ಕಣ್ಣೋಟ- ಕಾಳಜಿ ಆಳುವ ಜನರಿಗೆ ಇರಬೇಕು. ಭವಿಷ್ಯದ ಭಾರತಕ್ಕೆ ದೈಹಿಕವಾಗಿ-ಮಾನಸಿಕವಾಗಿ ಅತ್ಯಂತ ಸದೃಢವಾದ ಯುವಪೀಳಿಗೆಯನ್ನು ರೂಪಿಸಬೇಕು ಎಂಬ ಬದ್ದತೆ ಸರ್ಕಾರದ ಚುಕ್ಕಾಣಿ ಹಿಡಿದವರಿಗೆ ಬೇಕು. ಆದರೆ ಅಂತಹ ದೃಷ್ಟಿಕೋನ ನಮ್ಮ ಆಳುವ ಜನರಲ್ಲಿ ಇಲ್ಲ.

ಈ ಜಾಗತೀಕರಣ-ಉದಾರೀಕರಣದ ನೀತಿಗಳ ಅಮಲು ಆಳುವವರ ತಲೆಗೆ ಏರಿದ ಮೇಲಂತೂ ಶಿಕ್ಷಣ, ತಾಯಿ ಮಕ್ಕಳ ಆರೋಗ್ಯ ಪಾಲನೆಯ ಕೆಲಸ, ಸಾರ್ವಜನಿಕ ಆರೋಗ್ಯ ಇಂತಹ ವಿಷಯಗಳ ಸರ್ಕಾರಗಳು ತಮ್ಮ ಬೊಕ್ಕಸಕ್ಕೆ ಕನ್ನ ಹಾಕುವ 'ಐಟಂ'ಗಳಾಗಿ ಕಾಣುತ್ತಿವೆ.

'ಐಟಂ' ಗರ್ಲ್ಸ್‌ಗಳು, ಹರಾಜುಕೋರರ ಆಳುಗಳಾದ ಕ್ರಿಕೆಟ್ ತಾರೆಯರ ಎದುರು ಚೀರಿ ಕುಣಿಯುವ ಚಿಯರ್ ಗರ್ಲ್ಸ್‌ಗಳು ವಿಜೃಂಭಿಸುತ್ತಿರುವ ಈ ಹೊತ್ತಲ್ಲಿ ದೇಶದ ಲಕ್ಷಾಂತರ ಹಳ್ಳಿಗಳು, ಹಟ್ಟಿಗಳು, ಬಸದಿಗಳು, ಗುಡ್ಡ ಬೆಟ್ಟಗಳ ಮೇಲಿನ ಹಾಗೂ ಕಾಡಿನ ನಡುವಿನ ಆದಿವಾಸಿಗಳ ಹಾಡಿಗಳಲ್ಲಿ ಅಂಗನವಾಡಿ ಎಂಬ ಚೈತನ್ಯ ಕೇಂದ್ರಗಳನ್ನು ತೆರೆದು ಗರ್ಭಿಣಿ ಮಹಿಳೆಯರನ್ನು ಪೋಷಿಸುವ ಲಕ್ಷಾಂತರ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಪರಿಶ್ರಮವೂ ಅವರ ಕಣ್ಣಿಗೆ ಕಾಣುತ್ತಿಲ್ಲ. ಅಂಗನವಾಡಿ ನೌಕರರು ತಮ್ಮ

ಪುಟ 15 ಕ್ಕೆ

ಮುಂಬರುವ ರಾಜಕೀಯ ಪರ್ಯಾಯ

ಪರ್ಯಾಯ ಧೋರಣೆಗಳನ್ನು ಆಧರಿಸಿರಬೇಕು

ಸೀತಾರಾಮ ಯೆಚೂರಿ

ಯುಪಿಎ-2 ಸರಕಾರ ಒಂದು ಮುಳುಗುತ್ತಿರುವ ಆರ್ಥಿಕವನ್ನು ಮೇಲೆತ್ತುವ ಹೆಸರಿನಲ್ಲಿ ನವ-ಉದಾರವಾದಿ ಸುಧಾರಣೆಗಳ ಹೊಸದೊಂದು ಅಲೆಯನ್ನು ಹರಿಯ ಬಿಡಲು ಕಟಿಬದ್ಧವಾಗಿರುವಂತೆ ಕಾಣುತ್ತದೆ. ಇಂತಹ ಒಂದು ದಾರಿ-ದಿಕ್ಕಿನ ದುಷ್ಪರಿಣಾಮ ಸರ್ವವಿಧಿತ. ಈಗ ಬದಲಿಸಬೇಕಾಗಿರುವುದು ಇಂತಹ ಒಂದು ದಾರಿ-ದಿಕ್ಕನ್ನೇ. ಎಡಪಕ್ಷಗಳ ರಾಜಕೀಯ ಸಮಾವೇಶ ಒಂದು ಪರ್ಯಾಯ ಧೋರಣೆಯ ದಿಕ್ಕಿನ ಆಧಾರದಲ್ಲಿ ಇಂತಹ ಒಂದು ಪಲ್ಲಟವನ್ನು ನಮ್ಮ ದೇಶದ ಜನತೆಯ ಮುಂದಿಟ್ಟಿದೆ. ಈಗ ಮೂಡಿಬರಬಹುದಾದ ಯಾವುದೇ ರಾಜಕೀಯ ಪರ್ಯಾಯ ಕೇವಲ ಒಂದು ಪರ್ಯಾಯ ಸರಕಾರವನ್ನು ಒದಗಿಸುವದಕ್ಕಷ್ಟೇ ಸೀಮಿತವಾಗಿರಲಾಗದು; ಅದು ಇಂತಹ ಪರ್ಯಾಯ ಧೋರಣೆಗಳನ್ನು ಜಾರಿಗೆ ತರುವತ್ತ ಗಮನ ಕೇಂದ್ರೀಕರಿಸುವಂತದ್ದಾಗಿರಬೇಕು.

ಎಡ ಪಕ್ಷಗಳು, ನವದೆಹಲಿಯಲ್ಲಿ ಜುಲೈ 1, 2013 ರಂದು ನಡೆದ ಒಂದು ರಾಷ್ಟ್ರೀಯ ರಾಜಕೀಯ ಸಮಾವೇಶದಲ್ಲಿ ಒಂದು ಪರ್ಯಾಯ ಧೋರಣೆಯ ದಿಕ್ಕಿಗಾಗಿ ಹೋರಾಟವನ್ನು ತೀವ್ರಗೊಳಿಸಲು ಸ್ಫೂರ್ತಿದಾಯಕ ಕರೆ ನೀಡಿವೆ. ಇಂತಹ ಕರೆಗೆ ಇದಕ್ಕಿಂತ ಹೆಚ್ಚು ಸೂಕ್ತವಾದ ಸಮಯ ಬೇರೆ ಇರಲಿಕ್ಕಿಲ್ಲ.

ಎರಡು ವರ್ಷಗಳ ಹಿಂದೆ ನವ-ಉದಾರವಾದಿ ಆರ್ಥಿಕ ಧೋರಣೆಗಳ ವಂದಿ-ಮಾಗಧರು ದೇಶದಲ್ಲಿ ಆರ್ಥಿಕ ಸುಧಾರಣೆಗಳು ಎರಡು ದಶಕಗಳನ್ನು ಪೂರೈಸಿದುದನ್ನು ಅದ್ದೂರಿಯಾಗಿ ಆಚರಿಸಿದರು. ಈ ಸುಧಾರಣೆಗಳು ಭಾರತವನ್ನು ಪರಿವರ್ತಿಸಿ ಅದನ್ನೊಂದು 'ಮೂಡಿ ಬರುತ್ತಿರುವ ಆರ್ಥಿಕ'ವೆಂದು ಜಾಗತಿಕ ಪೀಠದಲ್ಲಿ ಕುಳ್ಳಿರಿಸಿವೆ ಎಂದು ಸಂಭ್ರಮ ಪಟ್ಟರು. ಅಲ್ಲದೆ ಈ ಸುಧಾರಣೆಗಳು ಭಾರತಕ್ಕೆ ಜಿ-20ರೊಳಕ್ಕೆ ಪ್ರವೇಶಿಸಲು, ನಮ್ಮ ಪ್ರಧಾನ ಮಂತ್ರಿಗಳು ವಿಶ್ವದ ಶ್ರೀಮಂತ ಮತ್ತು ಬಲಿಷ್ಠ ಜಾಗತಿಕ ಮುಖಂಡರ ಜೊತೆಗೆ ಮೇಜವಾನಿಗಳಲ್ಲಿ ಅವರ ಭುಜಕ್ಕೆ ಭುಜ ತಗುಲಿಸಿ ನಿಲ್ಲಲು ಅವಕಾಶ ಕಲ್ಪಿಸಿವೆ ಎಂದೂ ಅವರು ಸಂಭ್ರಮಿಸಿದರು. ನಾವಂತೂ ಈ ಅಂಕಣದಲ್ಲಿ ನಮ್ಮ ದೇಶದ ಆರ್ಥಿಕ ದಿಕ್ಕು-ದೆಸೆಯ ಫಲಿತಾಂಶವಾಗಿ ಎರಡು ಭಾರತಗಳ ಸೃಷ್ಟಿಯಾಗಿದೆ, ಅವೆರಡರ ನಡುವಿನ ಕಂದರ ಬೆಳೆಯುತ್ತಲೇ ಇದೆ ಎಂದು ಮತ್ತೆ-ಮತ್ತೆ ಎಚ್ಚರ ನೀಡುತ್ತಲೇ ಬಂದಿದ್ದೇವೆ. ಅಸಮಾನತೆಗಳ ನಾಗಾಲೋಟದ ಬೆಳವಣಿಗೆ ಬಹುಪಾಲು ಭಾರತೀಯ ಜನತೆಯ ಕೊಳ್ಳುವ ಶಕ್ತಿಯನ್ನು ಸತತವಾಗಿ ಕುಂಠಿತಗೊಳಿಸುತ್ತಿದೆ ಎಂದೂ ನಾವು ಎಚ್ಚರಿಸಿದ್ದೆವು. ಇದು ಆಂತರಿಕ ಬೇಡಿಕೆಯನ್ನು ಕುಗ್ಗಿಸಿ ಭವಿಷ್ಯದ ಬೆಳವಣಿಗೆಯ ಸಾಧ್ಯತೆಗಳಿಗೆ ಅಡ್ಡಿಯುಂಟು ಮಾಡಿದೆ.

ದುರದೃಷ್ಟವಶಾತ್, ಈ ಸಂಭ್ರಮ ಮುಗಿದ ಎರಡು ವರ್ಷಗಳಲ್ಲಿ ಈ ಎಚ್ಚರಿಕೆಗಳು ನಿಜವಾಗುತ್ತಿವೆ. ಇತ್ತೀಚಿನ ಆರ್ಥಿಕ ನಿಧಾನಗತಿ ಭಾರತೀಯ ಆರ್ಥಿಕ ಇತ್ತೀಚಿನ ವರ್ಷಗಳಲ್ಲಿ ಕಾಣದ ಆರ್ಥಿಕ ಕುಸಿತವನ್ನು ತಂದಿದೆ. ಇದರ ಪರಿಣಾಮವಾಗಿ ಉತ್ಪಾದನೆ ಮತ್ತು ಕೈಗಾರಿಕೆಗಳು ಕುಂಠಿತವಾಗಿ, ಉದ್ಯೋಗಾವಕಾಶಗಳೂ ಕುಂಠಿತವಾಗುವಂತಾಗಿದೆ. ಇದು ಅದಾಗಲೇ ಬೆಲೆಯೇರಿಕೆಗಳು ಮತ್ತು ಸಬ್ಸಿಡಿ ಕಡಿತಗಳ ದ್ವಿಮುಖ ಒತ್ತಡಗಳಿಂದ ನರಳುತ್ತಿರುವ ಬಹುಪಾಲು ಭಾರತೀಯ ಜನತೆಯ ಸಂಕಟಗಳನ್ನು ಮತ್ತಷ್ಟು ಹೆಚ್ಚಿಸಿದೆ.

ಸುಧಾರಣೆಗಳ ಹೊಸ ಗುಟುಕು

ಜನತೆಯ ಆತಂಕಗಳನ್ನು ದೂರಮಾಡುವ, ಅವರ ಸಂಕಟಗಳನ್ನು ಹಗುರಗೊಳಿಸುವ ಬಗ್ಗೆ ಯೋಚಿಸುವ ಬದಲು, ಈ ಯುಪಿಎ-2 ಸರಕಾರ ಸುಧಾರಣೆಗಳ ಮತ್ತೊಂದು ಗುಟುಕು ಕುಡಿಸಲು ಸಿದ್ಧವಾಗುತ್ತಿದೆ; ಮುಳುಗುತ್ತಿರುವ ಆರ್ಥಿಕವನ್ನು ಪಾರು ಮಾಡುವ ಹೆಸರಿನಲ್ಲೇ ಕಾರ್ಪೊರೇಟುಗಳಿಗೆ ಇನ್ನಷ್ಟು ರಿಯಾಯ್ತಿಗಳನ್ನು ಒದಗಿಸಲು ಮುಂದಾಗುತ್ತಿದೆ. ಮಾಧ್ಯಮಗಳಲ್ಲಿ ವರದಿಯಾಗುತ್ತಿರುವ ಪತ್ರಿಕಾ ಹೇಳಿಕೆಗಳ ಪ್ರಕಾರ ನಿರ್ಣಯಗಳ ಒಂದು ಸರಣಿಯೇ ಇನ್ನೇನು ಪ್ರಕಟವಾಗಲಿದೆ.

"ಈ ಸುಧಾರಣೆಗಳದ್ದು ದ್ವಿಮುಖ ಒತ್ತು: ಚಾಲ್ತಿ ಖಾತೆ ಕೊರತೆ ಭಾರತೀಯ ಕರೆನ್ಸಿಯ ಮೌಲ್ಯದಲ್ಲಿ ಆತಂಕಕಾರಿ ಇಳಿಕೆಯನ್ನು ಉಂಟು ಮಾಡಿದೆ; ಅದರಲ್ಲಿ ಕಡಿತ ತರಲು ಹಣಕಾಸಿನ ಒಳಹರಿವನ್ನು ಹೆಚ್ಚಿಸುವುದು, ಮತ್ತು ಮೂಲರಚನೆಗಳಲ್ಲಿ ಹೂಡಿಕೆಗಳನ್ನು ತಡೆ ಹಿಡಿದಿರುವ ಅಡೆ-ತಡೆಗಳನ್ನು ನಿವಾರಿಸುವುದು" ಎಂದು ಇಂತಹ ವರದಿಗಳು ಹೇಳುತ್ತವೆ.

"ಹಲವು ವಲಯಗಳಲ್ಲಿ ವಿದೇಶಿ ನೇರ ಹೂಡಿಕೆ(ಎಫ್‌ಡಿಐ)ಗಳಿಗೆ ನಿಯಮಗಳನ್ನು ದೊಡ್ಡ ಪ್ರಮಾಣದಲ್ಲಿ ಸಡಿಲಿಸಲು ಹಣಕಾಸು ಮಂತ್ರಾಲಯದ ಮುತುವರ್ಜಿಯಿಂದ ರೂಪಿಸಿರುವ ಒಂದು ಯೋಜನೆಯನ್ನು ಗಟ್ಟಿಗೊಳಿಸಲು ಉನ್ನತ ಅಧಿಕಾರಿಗಳು ಜುಲೈ 1ರಂದು ಸಭೆ ಸೇರುತ್ತಾರೆ.

"ಇದಲ್ಲದೆ ಹಣಕಾಸು ಮಂತ್ರಾಲಯ ಹಣಕಾಸು ಮಂತ್ರಿಗಳು ಮತ್ತು ಹೂಡಿಕೆ ಬ್ಯಾಂಕರುಗಳು ಹಾಗೂ ಆರ್ಥಿಕ ತಜ್ಞರ ನಡುವೆ ಖಾಸಗಿ ಸಂವಾದದ ಆಧಾರದಲ್ಲಿ ಹಣಕಾಸು ಮಾರುಕಟ್ಟೆಗಳಿಗೆ ಉತ್ತೇಜನ ನೀಡಲು ಒಂದು ಕಾರ್ಯಯೋಜನೆಯನ್ನು ರೂಪಿಸುತ್ತದೆ.

"ಇದರಲ್ಲಿ ವಿದೇಶಿ ಪರಮ ಸಂಪತ್ತು ನಿಧಿಗಳು(ವೆಲ್ತ್ ಫಂಡ್ಸ್) ಭಾರತದಲ್ಲಿ ದೀರ್ಘಾವಧಿ ಹಣವನ್ನು ತೊಡಗಿಸಲು ಪ್ರೋತ್ಸಾಹ ನೀಡುವ ಆಶಯದಿಂದ ಹಣಕಾಸು ಉಪಕರಣಗಳನ್ನು ಪ್ರಕಟಿಸುವುದು ಕೂಡ ಸೇರಿದೆ.

"ಸರಕಾರ, ಸಂಸತ್ತು ಮಳೆಗಾಲದ ಅಧಿವೇಶನಕ್ಕೆ ಸಭೆ ಸೇರುವ ಮೊದಲು ಮತ್ತು ಈ ವರ್ಷದ ಕೊನೆಯಲ್ಲಿ ರಾಜ್ಯಗಳಲ್ಲಿ ಚುನಾವಣೆಗಳಿಗೆ ನೀತಿ ಸಂಹಿತೆ ತಡೆಯೊಡ್ಡುವ ಮೊದಲು ತನ್ನ ಮುಂದಿರುವ ಸೀಮಿತ ಕಿಟಕಿಯ ಸಂಪೂರ್ಣ ಪ್ರಯೋಜನ ಪಡೆಯಲು ಬಹಳ ಉತ್ಸುಕವಾಗಿದೆ" ಎಂದು ಈ ಪ್ರಕ್ರಿಯೆಯಲ್ಲಿ ಭಾಗಿಯಾಗಿರುವ ಒಬ್ಬ ಹಿರಿಯ ನೀತಿ ನಿರ್ಮಾತೃ ಇಕನಾಮಿಕ್ ಟೈಮ್ಸ್ (ಜುಲೈ 1)ಪತ್ರಿಕೆಗೆ ಹೇಳಿದ್ದಾರೆ.



ಪ್ರಕಾಶ್ ಕಾರತ್ ಮಾತನಾಡುತ್ತಿರುವುದು

ಎಫ್‌ಡಿಐ ಗೀಳು

ಇಂತಹ ಒಂದು ನಿಲುವಿನಲ್ಲಿ ಎರಡು ಸಮಸ್ಯೆಗಳಿವೆ. ಮೊದಲಿನದಂತೂ, ದೇಶದೊಳಕ್ಕೆ ವಿದೇಶಿ ಬಂಡವಾಳ ಹರಿದು ಬರುವಂತೆ ಆಕರ್ಷಿಸಲು ಸರಕಾರದ ಉತ್ಸುಕತೆ. ಇದಕ್ಕಾಗಿ ಅದು ಇನ್ನಷ್ಟು ರಿಯಾಯ್ತಿಗಳನ್ನು ಕೊಡಲು ಸಿದ್ಧವಿದೆ. ಬೇರೆ ಮಾತುಗಳಲ್ಲಿ ಹೇಳುವುದಾದರೆ, ಜನಗಳನ್ನು ಪಾರು ಮಾಡುವ ಬದಲು ಸರಕಾರ ದೇಶಿ ಮತ್ತು ವಿದೇಶಿ ಬಂಡವಾಳಗಳನ್ನು ಪಾರು ಮಾಡಲು ಹೊರಟಿದೆ, ಅದಕ್ಕಾಗಿ ಹೆಚ್ಚಿನ ರಿಯಾಯ್ತಿಗಳನ್ನು, ಆಮೂಲಕ ಅವರ ಲಾಭಗಳನ್ನು ಗರಿಷ್ಟ ಮಟ್ಟಕ್ಕೇರಿಸಿಕೊಳ್ಳಲು ಇನ್ನಷ್ಟು ಅವಕಾಶಗಳನ್ನು ಒದಗಿಸಲು ಮುಂದಾಗುತ್ತಿದೆ.

ಎರಡನೆಯದಾಗಿ, ಸಂಸತ್ತು ಸಭೆ ಸೇರುವ ಮೊದಲು ಇಂತಹ ಕಾರ್ಯಾಂಗದ ನಿರ್ಧಾರಗಳನ್ನು ಮಾಡುವ ತರಾತುರಿ ಸಂಸತ್ತು ಇವನ್ನು ಪರೀಕ್ಷಿಸಬಾರದು ಎಂಬ ಸರಕಾರದ ಹವಣಿಕೆಯನ್ನು ಮತ್ತು ಸಂಸತ್ತಿಗೆ ತಾನು ಉತ್ತರ ಕೊಡಬೇಕಾದುದನ್ನು ತಪ್ಪಿಸಿಕೊಳ್ಳುವ ಅದರ ಆತುರವನ್ನು ಸೂಚಿಸುತ್ತದೆ. ಸರಕಾರ ಈ ರೀತಿ ಸಂಸತ್ತಿಗೆ ಮತ್ತು ಚುನಾಯಿತ ಪ್ರತಿನಿಧಿಗಳ ಮೂಲಕ ಜನತೆಗೆ ತನ್ನ ಉತ್ತರದಾಯಿತ್ವದಿಂದ ತಪ್ಪಿಸಿಕೊಳ್ಳಲು ಬಿಡಬಾರದು. ಇದು ಜನತೆಯ ಬದುಕಿನ ಹಿತಗಳು ಮತ್ತು ಆರ್ಥಿಕದ ಮೂಲಭೂತ ಅಂಶಗಳ ಹಿತದೃಷ್ಟಿಯಿಂದ ಅತ್ಯಗತ್ಯ.

ಇನ್ನಷ್ಟು ವಿದೇಶಿ ಬಂಡವಾಳದ ಹರಿವನ್ನು ಆಕರ್ಷಿಸುವ ಈ ಗೀಳಿಗೆ ಕಾರಣ ಸರಕಾರವನ್ನು ಆವರಿಸಿರುವ ಭೀತಿ. ಚಾಲ್ತಿ ಖಾತೆ ಕೊರತೆ(ಸಿಎಡಿ-ಅದರಲ್ಲಿ ಮುಖ್ಯವಾಗಿ ಆಮದುಗಳು ಮತ್ತು ರಫ್ತುಗಳಲ್ಲಿನ ಅಂತರ) ವಿಪರೀತವಾಗಿ ಏರಿದೆ. ಇದರ ಫಲಿತಾಂಶವಾಗಿ, ಭಾರತ ಈಗ ಹೊಂದಿರುವ ಸುಮಾರು 260 ಬಿಲಿಯ ಡಾಲರುಗಳ ಮೀಸಲು ಹಣ ಆರು ತಿಂಗಳ ಆಮದುಗಳಿಗೆ ತೆರಲಷ್ಟೇ ಸಾಲುತ್ತದೆ. ಈ ಮೊದಲು, 2008ರಲ್ಲಿ 15 ತಿಂಗಳ ಆಮದುಗಳಿಗೆ ತೆರಬಹುದಾದಷ್ಟು ಮೀಸಲು ಹಣ ಇತ್ತು. ಇಂತಹ ತೀವ್ರ ಇಳಿಕೆ 1990ರ ಸನ್ನಿವೇಶವನ್ನು ನೆನಪಿಸಿ ಮೈನಡುಗುವಂತೆ ಮಾಡಿದೆ. ಡಾ.ಮನಮೋಹನ ಸಿಂಗ್ ಆಗ ಹಣಕಾಸು ಮಂತ್ರಿಗಳಾಗಿ ನವ-ಉದಾರವಾದಿ ಸುಧಾರಣೆಗಳನ್ನು ಆರಂಭಿಸಿದ್ದು ಆ ಸನ್ನಿವೇಶದಲ್ಲಿಯೇ.

ಇನ್ನಷ್ಟು ಹೊರೆಗಳು

"ಇದು (ಅಂದರೆ ವಿಪರೀತ ಚಾಲ್ತಿ ಖಾತೆ ಕೊರತೆ) ಎರಡು ವರ್ಷಗಳ ಕಾಲ ಒಂದು ರೀತಿಯಲ್ಲಿ ಮೇಲೇರಿದ ಕೊರತೆಗೆ ಹಣಕಾಸನ್ನು ಹೊಂದಿಸುವ ಸವಾಲನ್ನು ಇಟ್ಟಿದೆ" ಎಂದು ಪ್ರಧಾನ ಮಂತ್ರಿಗಳು 12ನೇ ಪಂಚವಾರ್ಷಿಕ ಯೋಜನೆಯ ದಸ್ತಾವೇಜಿನ ಮುನ್ನುಡಿಯಲ್ಲಿ ಹೇಳಿದ್ದಾರೆ.

ಪುಟ 10 ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ

ಜ್ಯೋತಿಬಸು ಮತ್ತು ಕೋಮು ಸೌಹಾರ್ದತೆ

ಜುಲೈ 8, 2013 ಭಾರತದ ಕಮ್ಯೂನಿಸ್ಟ್ ಚಳುವಳಿಯ ಧ್ರುವತಾರೆ ಕಾಂ. ಜ್ಯೋತಿಬಸು ಅವರ ನೂರನೇ ಹುಟ್ಟು ಹಬ್ಬ. ಧೀಮಂತ –ಪಥದಿಗ್ದರ್ಶಕ ನೇತಾರರ ಸಾಲಿನಲ್ಲಿ ನಿಲ್ಲುವ ಈ ಸಂಗಾತಿಯ ಹುಟ್ಟುಹಬ್ಬವನ್ನು ಇಡೀ ವರ್ಷ ಆಚರಿಸಲಾಗುವುದು. ಈ ಹಿನ್ನೆಲೆಯಲ್ಲಿ ಪ್ರಕಟಗೊಳ್ಳಲಿರುವ ಲೇಖನ ಮಾಲೆಯಲ್ಲಿ ಈಗ ಓದಿ ದೇಶದ ಕೋಮು ಸೌಹಾರ್ದತೆಗೆ ಕಾಂ. ಬಸು ಅವರು ನೀಡಿದ ಕೊಡುಗೆ ಕುರಿತು.


ನಿತ್ಯಾನಂದಸ್ವಾಮಿ

ಭಾರತದ ಹೆಮ್ಮೆಯ ಪುತ್ರ, ಶೋಷಿತ ವರ್ಗದ ಕಣ್ಮಣಿ, ಸಿಪಿಐ(ಎಂ)ನ 'ನವರತ್ನ'ಗಳಲ್ಲಿ ಒಬ್ಬರಾದ ಕಾಮ್ರೇಡ್ ಜ್ಯೋತಿಬಸು ಅವರು ನಮ್ಮನ್ನು ಅಗಲಿ 2013 ಜನವರಿ 30 ಕ್ಕೆ ಮೂರು ವರ್ಷಗಳಾಗುತ್ತವೆ. ಅವರ ಅಗಲುವಿಕೆಯಿಂದ ದೇಶದ ಪ್ರಜಾಸತ್ತಾತ್ಮಕ ಚಳುವಳಿಗೆ ತುಂಬಲಾಗದ ಹಾನಿ ಆಗಿದೆ. ಬಲಹೀನ ರಾಜ್ಯಗಳಲ್ಲಿ ಚಳುವಳಿಯನ್ನು ತುರ್ತಾಗಿ ಬಲಪಡಿಸದೆ ಹೋದರೆ ಬಲಿಷ್ಟ ರಾಜ್ಯಗಳಲ್ಲಿ ನಮ್ಮ ಚಳುವಳಿಯ ಸಾಧನೆಗಳನ್ನು ಉಳಿಸಿಕೊಳ್ಳುವುದು ಕಷ್ಟವಾಗುತ್ತದೆ ಎಂದು ಅವರು ನಮ್ಮನ್ನು ಎಚ್ಚರಿಸುತ್ತಾ ಬಂದಿದ್ದರು. ಅವರ ಮಾತುಗಳು ನಿಜವಾಗಿವೆ. ಆದರೆ ನಮ್ಮ ಚಳುವಳಿಗೆ ಕಾಮ್ರೇಡ್ ಜ್ಯೋತಿಬಸುರವರು ನೀಡಿದ ಕೊಡುಗೆಗಳನ್ನು ಚಳುವಳಿಯ ಚರಿತ್ರೆಯ ಪುಟಗಳಲ್ಲಿ ಚಿರಸ್ಥಾಯಿಯಾಗಿ ಉಳಿಯಲಿವೆ.

ಪಶ್ಚಿಮ ಬಂಗಾಳದ ಸಾಮಾನ್ಯ ಜನತೆಯಿಂದ ಅಪಾರವಾದ ಪ್ರೀತಿ ವಿಶ್ವಾಸವನ್ನು ಗಳಿಸಿದ್ದ ಕಾಮ್ರೇಡ್ ಜ್ಯೋತಿಬಸು ಅವರು 1952 ರಿಂದ ನಿರಂತರವಾಗಿ 11 ಬಾರಿ ರಾಜ್ಯ ವಿಧಾನಸಭೆಗೆ ಆಯ್ಕೆಯಾಗಿ ವಿಶ್ವ ದಾಖಲೆಯನ್ನು ನಿರ್ಮಿಸಿದ್ದರು. 1977 ರಲ್ಲಿ ಪ್ರಚಂಡ ಬಹುಮತದೊಂದಿಗೆ ಅಧಿಕಾರವಹಿಸಿಕೊಂಡ ಪ್ರಥಮ ಎಡರಂಗ ಸರ್ಕಾರದ ಮುಖ್ಯಮಂತ್ರಿಯಾಗಿ ಆಯ್ಕೆಯಾದ ಅವರು ನಿರಂತರ 5 ಅವಧಿಗೆ ಎಡರಂಗ ಸರ್ಕಾರಕ್ಕೆ ಸಮರ್ಥ ನಾಯಕತ್ವವನ್ನು ನೀಡಿದರು. ಈ ಅವಧಿಯಲ್ಲಿ ಪಶ್ಚಿಮ ಬಂಗಾಳದಲ್ಲಿ ಕೋಮು ಸೌಹಾರ್ದತೆಗೆ ಭದ್ರ ಬುನಾದಿಯನ್ನು ಹಾಕಿ, ಅಲ್ಪಸಂಖ್ಯಾತರಲ್ಲಿ ಭದ್ರತೆಯ ಭಾವನೆಯನ್ನು ಮೂಡಿಸುವಲ್ಲಿ ಯಶಸ್ವಿಯಾದ ಅವರು ಇಡೀ ದೇಶಕ್ಕೆ ಸೆಕ್ಯುಲರ್ ಮೌಲ್ಯಗಳ ಸಂಕೇತವಾದರು.

ಬಾಲ್ಯದಿಂದಲ್ಲೇ ಜ್ಯೋತಿಬಸು ಅವರು ಬಂಗಾಳದ ಕ್ರಾತಿಕಾರಿ ಸ್ವಾ ತ್ರ್ಯ ಹೋರಾಟಗಾರರಿಂದ ಪ್ರಭಾವಿತರಾಗಿದ್ದರು. ಅವರು ಲಂಡನ್‌ನಲ್ಲಿ ಓದುತ್ತಿದ್ದಾಗ ಮಾರ್ಕ್ಸ್‌ವಾದಿ ವಿಚಾರಧಾರೆಗೆ ಆಕರ್ಷಿತರಾದರು. ಅಷ್ಟರಲ್ಲಿ ಯುರೋಪಿನಲ್ಲಿ ಹಿಟ್ಲರನ ರೌದ್ರಾವತಾರ ಆರಂಭವಾಗಿತ್ತು. ಜ್ಯೋತಿಬಸು ಅವರು ಫ್ಯಾಸಿಸ್ಟ್ ವಿರೋಧಿ ಸಭೆಗಳಲ್ಲಿ ಭಾಗವಹಿಸುತ್ತಿದ್ದರು. ಸ್ವದೇಶಕ್ಕೆ ಮರಳಿದ ನಂತರ ಕಮ್ಯೂನಿಸ್ಟ್ ಪಕ್ಷದ ಪೂರ್ಣ ಕಾಲದ ಕಾರ್ಯಕರ್ತನಾಗಿ ದುಡಿಯಬೇಕು ಎಂಬ ತೀರ್ಮಾನದೊಂದಿಗೆ ಅವರು ಭಾರತಕ್ಕೆ ಮರಳಿದರು.

ಕಲ್ಕತ್ತಾ ಹೈಕೋರ್ಟ್‌ನಲ್ಲಿ ಬ್ಯಾರಿಸ್ಟರ್ ಆಗಿ ಜ್ಯೋತಿಬಸು ಅವರು ತಮ್ಮನ್ನು ನೊಂದಾಯಿಸಿಕೊಂಡರೂ, ಅವರು ಎಂದೂ ವಕೀಲ ವೃತ್ತಿಯಲ್ಲಿ ತೊಡಗಲಿಲ್ಲ. ಕಮ್ಯೂನಿಸ್ಟ್ ಪಕ್ಷದ ಸದಸ್ಯತ್ವ ಪಡೆದು ಅವರು ಪಕ್ಷದ ಪೂರ್ಣಕಾಲದ ಕಾರ್ಯಕರ್ತರಾಗಿ ಕೆಲಸ ಮಾಡಲು ಆರಂಭಿಸಿದರು. ಪಕ್ಷವು ಅವರಿಗೆ ಭೂಗತರಾಗಿ ಪಕ್ಷದ ಮುಖಂಡರ ಜೊತೆ ಸಂಪರ್ಕ ಇಟ್ಟುಕೊಳ್ಳುವುದು, ಪಕ್ಷ-ಕ್ಕೆ ನಿಧಿ ಸಂಗ್ರಹಿಸುವುದು, ಗುಪ್ತ ಸಭೆಗಳಲ್ಲಿ ಭಾಷಣ ಮಾಡುವುದು ಮೊದಲಾದ ಜವಾಬ್ದಾರಿಗಳನ್ನು ವಹಿಸಿತ್ತು.



ಅಷ್ಟರಲ್ಲಿ ಎರಡನೇ ಜಾಗತಿಕ ಯುದ್ದ ಸ್ಫೋಟಗೊಂಡಿತು. ಹಿಟ್ಲರ್ ಲಂಡನ್ ಮೇಲೆ ಬಾಂಬ್ ದಾಳಿ ಆರಂಭಿಸಿದ್ದ. ಬ್ರಿಟನ್ ಸಹ ಯುದ್ದ ಘೋಷಣೆ ಮಾಡಿತ್ತು. ಕಲ್ಕತ್ತಾದಲ್ಲಿ ಫ್ಯಾಸಿಸ್ಟ್ ವಿರೋಧಿ ಬರಹಗಾರರ ಮತ್ತು ಕಲಾವಿದರ ಸಂಘಟನೆ ರಚನೆಯಾಗಿತ್ತು. ಅದರ ಕಾರ್ಯದರ್ಶಿಯಾಗಿದ್ದ ಕಾಂ. ಜ್ಯೋತಿಬಸು ಅವರು ತುಂಬಾ ಕ್ರಿಯಾಶೀಲರಾಗಿದ್ದರು. ಹಿಟ್ಲರ್ ಸೋವಿಯತ್ ಯೂನಿಯನ್ ಮೇಲೆ ಆಕ್ರಮಣ ಮಾಡಿದಾಗ ಸಾಮ್ರಾಜ್ಯಶಾಹಿ ಯುದ್ದದ ಸ್ವರೂಪವೇ ಬದಲಾಯಿತು. ಆಗ ಅದು ಫ್ಯಾಸಿಸಂ ವಿರೋಧಿ ಜನತಾ ಯುದ್ದವಾಗಿ ಪರಿವರ್ತನೆ ಹೊಂದಿದೆ ಎಂಬ ಕಮ್ಯೂನಿಸ್ಟ್ ಪಕ್ಷದ ನಿಲುಮೆಯನ್ನು ಬಲವಾಗಿ ಪ್ರತಿಪಾದಿಸುವುದರಲ್ಲಿ ಕಾಂ. ಜ್ಯೋತಿಬಸು ಮುಂದಿದ್ದರು. ಹೀಗೆ ಆರಂಭದಿಂದಲೇ ಕಾಂ. ಬಸು ಅವರು ಎಲ್ಲಾ ವಿಧದ ಜಾತಿ, ಜನಾಂಗೀಯ ದ್ವೇಷವನ್ನು ವಿರೋಧಿಸುವ ಮನೋಭಾವವನ್ನು ಮೈಗೂಡಿಸಿಕೊಂಡಿದ್ದರು.

1944 ರಲ್ಲಿ ಪಕ್ಷವು ಕಾಂ. ಜ್ಯೋತಿಬಸು ಅವರಿಗೆ ರೈಲ್ವೆ ಕಾರ್ಮಿಕರ ನಡುವೆ ಕೆಲಸ ಮಾಡಲು ನಿರ್ದೇಶಿಸಿತು. ಅದು ಅಷ್ಟೊಂದು ಸುಲಭದ ಕೆಲಸ ಆಗಿರಲಿಲ್ಲ. ಕಾಂಗ್ರೆಸ್ ನೇತೃತ್ವದ ಸಂಘವೊಂದು ಅಸ್ತಿತ್ವದಲ್ಲಿತ್ತು. ಭಾರಿ ಅಡೆತಡೆಗಳನ್ನು ಎದುರಿಸಿ ಸಂಘವೊಂದನ್ನು ಹುಟ್ಟು ಹಾಕಲಾಯಿತು. ಕಾಂ. ಬಸು ಅದರ ಪ್ರಧಾನ ಕಾರ್ಯದರ್ಶಿಯಾದರು. ಮುಂದೆ 1946 ರಲ್ಲಿ ನಡೆದ ಚುನಾವಣೆಯಲ್ಲಿ ಕಾಂ. ಬಸು ಅವರು ರೈಲ್ವೆ ಕ್ಷೇತ್ರದಿಂದ ಶಾಸರಾಗಿ ಆಯ್ಕೆಯಾದರು. ಮುಸ್ಲಿಂ ಲೀಗ್ ಬಹುಮತ ಪಡೆದು ಅಧಿಕಾರವಹಿಕೊಂಡಿತು. ಕಾಂಗ್ರೆಸ್ ವಿರೋಧ ಪಕ್ಷವಾಯಿತು. ಕಾಂ. ಬಸು ಸೇರಿದಂತೆ 3 ಜನ ಶಾಸಕರು ಪ್ರತ್ಯೇಕ ಗುಂಪಾಗಿ ಕಾರ್ಯನಿರ್ವಹಿಸಿದರು.

ಚುನಾವಣೆ ಬಹುತೇಕವಾಗಿ ಕೋಮು ಆಧಾರದಲ್ಲಿ ನಡೆದಿತ್ತು. ಕಾಂಗ್ರೆಸ್ ಸದಸ್ಯರೆಲ್ಲರೂ ಹಿಂದುಗಳು. ಎಲ್ಲಾ ಲೀಗ್ ಶಾಸಕರು ಮುಸಲ್ಮಾನರು. ಕಮ್ಯೂನಿಸ್ಟ್ ಶಾಸಕರು ಮಾತ್ರ ಕೋಮು ಐಕ್ಯತೆಯ ವಕ್ತಾರರಾಗಿದ್ದರು. ಬ್ರಿಟಿಷ್ ಆಡಳಿತಗಾರರು ಕೋಮು ವಿಭಜನೆಯ ವಿಷ ಬೀಜವನ್ನು ಬಿತ್ತಿ ಬೆಳೆಯುತ್ತಿದ್ದರು. ದೇಶವನ್ನು ಕೋಮು ಆಧಾರದಲ್ಲಿ ವಿಭಜಿಸಿ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ಕೈಗಳಿಗೆ ಹಸ್ತಾಂತರಿಸಲು ಸಿದ್ದತೆಗಳು ನಡೆದಿದ್ದವು.

ಬ್ರಿಟಿಷರ ನೇರ ಕುಮ್ಮಕ್ಕಿನಿಂದಾಗಿ ಹಿಂದುಗಳ ಮತ್ತು ಮುಸಲ್ಮಾನರ ನಡುವಿನ ಕೋಮು ದ್ವೇಷ ಬೆಳೆಯುತ್ತಾ ಹೋಯಿತು. 1946 ರ ಆಗಸ್ಟ್ ತಿಂಗಳಲ್ಲಿ ಭೀಕರವಾದ ಕೋಮುದಂಗೆ ಭುಗಿಲೇಳಲು ಕಾರಣವಾಯಿತು. ಕಮ್ಯೂನಿಸ್ಟ್ ಪಕ್ಷ ದೇಶದ ವಿಭಜನೆಯನ್ನು ವಿರೋಧಿಸಿತ್ತು. ಮತ್ತು ತನ್ನ ಸೀಮಿತ ಶಕ್ತಿಯನ್ನು ಬಳಸಿಕೊಂಡು ಹಿಂದೂ–ಮುಸ್ಲಿಂ ಐಕ್ಯತೆಗಾಗಿ ಶ್ರಮಿಸುತ್ತಿತ್ತು. ಬಹುಸಂಖ್ಯಾತ ಹಿಂದೂಗಳಿಗೂ ಹಾಗೂ ಮುಸ್ಲೀಮರಿಗೂ ದೇಶದ ವಿಭಜನೆ ಬೇಕಾಗಿರಲಿಲ್ಲ. ಆದರೆ ಕಾಂಗ್ರೆಸ್ ಹಾಗೂ ಲೀಗ್‌ನಲ್ಲಿದ್ದ ಪ್ರತಿಗಾಮಿ ಶಕ್ತಿಗಳು ಬ್ರಿಟಿಷರ ಕುಮ್ಮಕ್ಕಿನಿಂದ ಪ್ರಚೋದಿತರಾಗಿ ದಂಗೆಯನ್ನು ಆರಂಭಿಸಿದವು. ಕಲ್ಕತ್ತಾ ನಗರದಲ್ಲಿ ವ್ಯಾಪಕವಾದ ಹಿಂಸಾಚಾರ ದೊಂಬಿ ಹಾಗೂ ಲೂಟಿ ನಡೆಯಿತು. 20,000 ಕ್ಕೂ ಹೆಚ್ಚು ಜನ ಅಮಾಯಕರು ಕೊಲ್ಲಲ್ಪಟ್ಟರು.

ಪಕ್ಷದ ನಿರ್ದೇಶನಕ್ಕೆ ಅನುಗುಣವಾಗಿ ಕಾಂ. ಜ್ಯೋತಿಬಸು ಮತ್ತು ಇತರ ಸಂಗಾತಿಗಳು ತಮ್ಮ ಜೀವನ ಹಂಗು ತೊರೆದು ಗಲಭೆ ಪೀಡಿತ ಪ್ರದೇಶಗಳಿಗೆ ಧಾವಿಸಿದರು. ರೈಲ್ವೆ ಕಾಲೋನಿಯಲ್ಲಿ ಹಾಗೂ ಇತರ ಪ್ರದೇಶಗಳಿಗೆ ಭೇಟಿ ನೀಡಿದ ಕಾಂ. ಬಸು ರವರು ಗಲಭೆಕೋರರಿಂದ ಹಿಂದೂಗಳ ಹಾಗೂ ಮುಸಲ್ಮಾನರು ಪರಸ್ಪರ ರಕ್ಷಣೆ ಒದಗಿಸುವಂತೆ ಮನವಿ ಮಾಡಿದರು. ಪಕ್ಷದ ಆಫೀಸುಗಳಲ್ಲಿ ಹಿಂದೂಗಳಿಗೆ ಹಾಗೂ ಮುಸಲ್ಮಾನರಿಗೆ ಆಶ್ರಯ ನೀಡಲಾಯಿತು. ಪಕ್ಷದ ಮುತುವರ್ಜಿಯಿಂದಾಗಿ ಹಿಂದೂಗಳಿಂದ ಮುಸಲ್ಮಾನರಿಗೆ ಹಾಗೂ ಮುಸಲ್ಮಾನರಿಂದ ಹಿಂದೂಗಳಿಗೆ ರಕ್ಷಣೆ ಸಿಗುವಂತಾಯಿತು. ಪಕ್ಷದ ಕಾರ್ಯಕರ್ತರು ಸ್ಥಳೀಯ ಶಾಂತಿ ಸಮಿತಿಗಳನ್ನು ರಚಿಸಿ ಕೋಮು ಸೌಹಾರ್ದತೆಯ ಮರುಸ್ಥಾಪನೆಗಾಗಿ ಹಾಗೂ ಗಲಭೆಯಲ್ಲಿ ಸಂತ್ರಸ್ತರಾದವರಿಗೆ ನೆರವು ಒದಗಿಸುವಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸಿದರು. ಒಂದು ಸರ್ವ ಪಕ್ಷೀಯ ಕೇಂದ್ರ ಶಾಂತಿ ಸಮಿತಿ ರಚನೆಗಾಗಿ ಪಕ್ಷ ಆಗ್ರಹಿಸಿತು. ಗಾಂಧೀಜಿಯವರು ಬಂದಾಗ ಕಾಂ. ಜ್ಯೋತಿಬಸು ಅವರು ಕಾಂ. ಭೂಪೇಶ್ ಗುಪ್ತಾರೊಂದಿಗೆ ಹೋಗಿ ಅವರನ್ನು ಭೇಟಿಯಾದರು. ಗಾಂಧೀಜಿಯವರು ಸಹ ಕೇಂದ್ರೀಯ ಶಾಂತಿ ಸಮಿತಿಯನ್ನು ರಚಿಸಿ ಸರ್ವಪಕ್ಷೀಯ ಶಾಂತಿ-ಸೌಹಾರ್ದತಾ ರ್‍ಯಾಲಿಗಳನ್ನು ನಡೆಸಲು ಸಲಹೆ ನೀಡಿದರು. ಆದರೆ ಹಿಂದೂ ಮಹಾ ಸಭಾದ ಮುಖಂಡರಾಗಿದ್ದ ಡಾ। ಶ್ಯಾಂ ಪ್ರಸಾದ್ ಮುಖರ್ಜಿಯವರು ಕಮ್ಯೂನಿಸ್ಟರ ಜೊತೆ ಸಮಿತಿಯಲ್ಲಿ ಭಾಗವಹಿಸಲು ನಿರಾಕರಿಸಿದರು. ಪರಿಣಾಮವಾಗಿ ಕೇಂದ್ರೀಯ ಶಾಂತಿ ಸಮಿತಿ ರಚನೆಯ ಪ್ರಸ್ತಾವವು ಪ್ರಸ್ತಾವವಾಗಿಯೇ ಉಳಿಯಿತು. ವಿಧಾನಸಭೆಯಲ್ಲಿಯೂ ಕಾಂಗ್ರೆಸ್ ಮತ್ತು ಲೀಗ್ ನಡುವೆ ಆರೋಪ, ಪ್ರತ್ಯಾರೋಪಗಳ ಪಕ್ರಿಯೆ ಮುಂದುವರೆಯಿತು. ಕಾಂ. ಬಸು ಅವರು ಮಾತ್ರ ಗಲಭೆಗಳ ಹಿಂದೆ ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ಪಾತ್ರವನ್ನು ಸ್ಪಷ್ಟವಾಗಿ ಬಯಲಿಗೆಳೆಯುತ್ತಾ ಹಿಂದೂ ಮುಸಲ್ಮಾನ ನಡುವಿನ ಐಕ್ಯತೆಯ ಮಹತ್ವವನ್ನು ಬಲವಾಗಿ ಪ್ರತಿಪಾದಿಸಿದರು. ಕಮ್ಯೂನಿಸ್ಟ್ ಪಕ್ಷವು ದೇಶದ ವಿಭಜನೆಯನ್ನು ಬಯಸದಿದ್ದರೂ ಅದನ್ನು ತಡೆಯುವ ಸಾಮರ್ಥ್ಯವಾಗಲಿ,

ಪುಟ 10 ಕ್ಕೆ

'ಮುಂದುವರಿದ' ಜಿಲ್ಲೆಯಲ್ಲಿ...

ಪುಟ 5 ರಿಂದ

ಯಾವಾಗಲೂ ಮಾತನಾಡಲೇ ಇಲ್ಲ. ಅದರಲ್ಲೂ ವಿಶ್ವ ವಿದ್ಯಾಲಯದ ಆಡಳಿತದ ಒತ್ತಡಕ್ಕೆ ಮಣಿದು ತನ್ನ ಕಾರ್ಯಕ್ರಮವನ್ನು ರದ್ದುಗೊಳಿಸಿದ ಕೇರಳದ ಕಾಂಗ್ರೆಸ್ ಮುಖ್ಯಮಂತ್ರಿಯ ನಿಲುಮೆ ಖಂಡನೀಯ.

ಬಜರಂಗದಳ-ಅಪಹಾಸ್ಯದ ಪ್ರತಿಭಟನೆ

ಪ್ರಕರಣ ನಡೆದು 6 ದಿನಗಳ ನಂತರ 26-6-2013 ರಂದು ಬಜರಂಗದಳ ಮಣಿಪಾಲದಲ್ಲಿ ಪ್ರತಿಭಟನೆ ನಡೆಸಿದೆ. ಈ ಪ್ರತಿಭಟನೆಯಲ್ಲಿ ಹಲವು ಕುತೂಹಲಕಾರಿ ಅಂಶಗಳನ್ನು ಗಮನಿಸಬೇಕು. ಆರೋಪಿ ಯೋಗೀಶ್‌ನ ಸಹೋದರ ಈ ಪ್ರತಿಭಟನೆಯಲ್ಲಿ ಭಾಗವಹಿಸಿದ್ದಾರೆ.

ಮಾತ್ರವಲ್ಲ, ಸ್ವತಃ ಆರೋಪಿ ಯೋಗೀಶ್ ಬಜರಂಗದಳ ಕಾರ್ಯಕರ್ತನಾಗಿದ್ದಾನೆ. 2005 ರಲ್ಲಿ ರೌಡಿ ಶೀಟರ್ ಪಟ್ಟಿಗೆ ಸೇರಿದ್ದ ಈತ ಹಲವು ಕೋಮುಗಲಭೆಗಳಲ್ಲೂ ಭಾಗವಹಿಸಿದ್ದಾನೆ. ಆತನ ವಿರುದ್ಧ ಐದು ಪ್ರಕರಣಗಳು ದಾಖಲಾಗಿವೆ.

ವಿಪರ್ಯಾಸವೆಂದರೆ, ಪೋಲೀಸರು ಯೋಗೀಶನನ್ನು ಬಂಧಿಸಲಿದ್ದಾರೆ ಎಂಬ ಖಚಿತ ಮಾಹಿತಿಯ ನಂತರ 26 ರಂದು ಬಜರಂಗದಳದ ಪ್ರತಿಭಟನೆಯ ನಾಟಕವಾಗಿದೆ. ಪ್ರತಿಭಟನೆಯ ಸಂದರ್ಭದಲ್ಲಿ 27ನೇ ತಾರೀಕಿನ ಸಂಜೆಯೊಳಗೆ ಆರೋಪಿಯನ್ನು ಬಂಧಿಸದಿದ್ದಲ್ಲಿ 28 ರಂದು ಮಣಿಪಾಲ ಬಂದ್ ನಡೆಸುವುದಾಗಿ ಘೋಷಿಸಿತ್ತು ಮತ್ತು ಆರೋಪಿಗಳು ಯಾವ ಧರ್ಮಕ್ಕೆ ಸೇರಿದ್ದರೂ ಅವರನ್ನು ಬಂಧಿಸಬೇಕು ಎಂದು ಹೇಳಿತ್ತು.

ಸಿಪಿಐ(ಎಂ) ಮುಖಂಡರ ಭೇಟಿ

ಘಟನೆಯು ಗಮನಕ್ಕೆ ಬರುತ್ತಿದ್ದಂತೆ ಸಿಪಿಐ(ಎಂ) ಉಡುಪಿ ಜಿಲ್ಲಾ ಸಮಿತಿ ಘಟನೆಯನ್ನು ಖಂಡಿಸಿ, ತಪ್ಪಿತಸ್ಥರನ್ನು ಕೂಡಲೇ ಬಂಧಿಸಬೇಕೆಂದೂ, ಇದರಲ್ಲಿ ವಿಶ್ವ ವಿದ್ಯಾಲಯದ ಭದ್ರತಾ ವೈಫಲ್ಯವೇ ಪ್ರಮುಖ ಕಾರಣವೆಂದು ಸ್ಪಷ್ಟವಾಗಿ ಪ್ರತಿಪಾದಿಸಿತು. 24 ರಂದು ಉಡುಪಿ ನಗರದ ಬಸ್ ಸ್ಟಾಂಡ್ ಬಳಿ ಬೃಹತ್ ಪ್ರತಿಭಟನೆ, ಜೂನ್ 28 ರಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಹಾಗೂ ಕೇಂದ್ರ ಸಮಿತಿ ಸದಸ್ಯರಾದ ಜಿ.ವಿ.ಶ್ರೀರಾಮರೆಡ್ಡಿ, ಸಿಪಿಐ(ಎಂ) ಕೇಂದ್ರ ಸಮಿತಿಯ ಸದಸ್ಯ ಹಾಗೂ ಕೇರಳದ ಮಾಜಿ ಆರೋಗ್ಯ ಸಚಿವೆ ಪಿ.ಕೆ. ಶ್ರೀಮತಿ ಟೀಚರ್, ಸಂಸತ್ ಸದಸ್ಯರಾದ ಎಂ.ಬಿ. ರಾಜೇಶ್, ಶಾಸಕ ಹಾಗೂ ಡಿವೈಎಫ್ಐ ಮುಖಂಡ ಟಿ.ವಿ. ರಾಜೇಶ್, ಉಡುಪಿ ಜಿಲ್ಲಾ ಸಮಿತಿ ಕಾರ್ಯದರ್ಶಿ ಕೆ. ಶಂಕರ್ ಮೊದಲಾದವರ ನಿಯೋಗವು ಮಣಿಪಾಲ ಆಸ್ಪತ್ರೆಯ 'ಮೆಡಿಕಲ್ ಸೂಪರಿಂಟೆಂಡೆಂಟ್' ಅವರನ್ನು ಭೇಟಿಯಾಗಿ ಪ್ರಕರಣದ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿ, ಭದ್ರತಾ ವೈಫಲ್ಯಗಳ ಬಗ್ಗೆ ಮನದಟ್ಟು ಮಾಡಿತು. ಇದೇ ಸಂದರ್ಭದಲ್ಲಿ ವಿದ್ಯಾರ್ಥಿನಿಯ ಪೋಷಕರನ್ನು ಭೇಟಿ ಮಾಡುವ ಇಚ್ಛೆಯನ್ನು ನಿಯೋಗ ವ್ಯಕ್ತಪಡಿಸಿದ್ದು ಮಾತ್ರವಲ್ಲದೆ, ಮಹಿಳೆಯಾಗಿರುವ ಮಾಜಿ ಆರೋಗ್ಯ ಸಚಿವೆ ಶ್ರೀಮತಿ ಟೀಚರ್ ಮಾತ್ರ ಭೇಟಿ ಮಾಡುತ್ತಾರೆಂದು ಸ್ಪಷ್ಟಪಡಿಸಿತು. ಅವರು ಒಪ್ಪಿದಲ್ಲಿ ಮಾತುಕತೆಗೆ ಏರ್ಪಾಟು ಮಾಡುವುದಾಗಿ ನಾಟಕವಾಡಿದ ವೈದ್ಯಾಧಿಕಾರಿಗಳು, ಪೋಲೀಸರು ಬರುವುದು 1 ಗಂಟೆ ತಡವಾಗುತ್ತದೆಂದೂ, ಪೋಷಕರು ಕಾಲೇಜಿನ ಡೀನ್ ಬಳಿ ಇರುವುದಾಗಿಯೂ ತಿಳಿಸಿದ್ದರು. ಅಲ್ಲಿಂದ ನಿಯೋಗ ಡೀನ್ ಅವರನ್ನು ಭೇಟಿ ಮಾಡಿದಾಗ ಮೊದಲ ಪೋಷಕರು ಇಲ್ಲಿಗೆ ಬಂದೇ ಇಲ್ಲ ಎಂ ಹೇಳಿದರು. ವೈದ್ಯಾಧಿಕಾರಿಗಳು ಹೇಳಿದುದ ಅವರಿಗೆ ಹೇಳಿದಾಗ ಆಗಲೇ ಬಂ ಹೋಗಿದ್ದಾರೆ ಎಂಬ ಖಾತರಿ ಉ ಬಂದಿದೆ.

ವಿಶ್ವವಿದ್ಯಾಲಯವು ಪ್ರಕರಣವ ಮುಚ್ಚಿಹಾಕಲು ಪ್ರಯತ್ನ ನಡೆಸುತ್ತಿ ಎಂಬುದಕ್ಕೆ ಇದೊಂದೇ ನಿದರ್ಶನ ಸಾಕು

ನಂತರ ಪತ್ರಿಕಾಗೋಷ್ಠಿಯನ್ನು ಉದ್ದೇಶಿ ಮಾತನಾಡಿದ ಕಾಂ. ಜಿ.ವಿ. ಶ್ರೀರಾಮರ ಮಣಿಪಾಲ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ಭದ್ರತೆಇಲ್ಲ. ಪ್ರತ್ಯೇಕ ಕ್ಯಾಂಪ ಇಲ್ಲ. ಆವರಣ ಗೋಡೆಗಳಿಲ್ಲ. ಅಂದ ವಿಶ್ವವಿದ್ಯಾಲಯಕ್ಕೆ ಇರಬೇಕಾದ ಅರ್ಹತೆಗ ಇಲ್ಲವಾಗಿದೆ. ಇದರ ಮಾನ್ಯತೆಯನ್ನು ರದ ಮಾಡಬೇಕು ಎಂದು ಆಗ್ರಹಿಸಿದರು.

ಜೂನ್ 27 ರಂದು ಕಾಸರಗೋದ ಸಂಸತ್ ಸದಸ್ಯ ಪಿ. ಕರುಣಾಕರನ್‌ರವರ ವೈದ್ಯಾಧಿಕಾರಿಗಳು, ಪೋಲೀಸ ವರಿಷ್ಠಾಧಿಕಾರಿಗಳು ಹಾ ಜಿಲ್ಲಾಧಿಕಾರಿಗಳನ್ನು ಭೇಟಿಮಾಡಿದ್ದರು.

ಜ್ಯೋತಿಬಸು ...

ಪುಟ 8 ರಿಂದ

ಪ್ರಭಾವವಾಗಲೀ ಪಕ್ಷಕ್ಕೆ ಇರಲಿಲ್ಲ. ಹೀಗಾಗಿ ಪಕ್ಷವು ದೇಶದ ವಿಭಜನೆಯನ್ನು ಬೇರೆ ದಾರಿಯಿಲ್ಲದೆ ಒಪ್ಪಿಕೊಳ್ಳಬೇಕಾಯಿತು. ಆದರೆ ದೇಶದ ವಿಭಜನೆಯ ನಂತರವೂ ಕಮ್ಯೂನಿಸ್ಟ್ ಪಕ್ಷವು ಕೋಮುವಾದಿ ಶಕ್ತಿಗಳ ವಿರುದ್ಧ ರಾಜಿ ಇಲ್ಲದ ಹೋರಾಟವನ್ನು ನಡೆಸುತ್ತಾ ಬಂದಿದ್ದು ಬಂಗಾಳದಲ್ಲಿ ಕಾಂ. ಜ್ಯೋತಿಬಸು ಅದರ ದೃಢ ಪ್ರತಿಪಾದಕರಾಗಿದ್ದರು.

1977 ರಲ್ಲಿ ಸಿಪಿಐ(ಎಂ) ನೇತೃತ್ವದ ಎಡರಂಗ ಸರ್ಕಾರ ಅಧಿಕಾರಕ್ಕೆ ಬಂತು. ಕಾಂ. ಜ್ಯೋತಿಬಸು ಎಡರಂಗದ ಘಟಕ ಪಕ್ಷಗಳ ಸರ್ವಸಮ್ಮತಿಯ ನಾಯಕರಾಗಿ ಆಯ್ಕೆ ಆಗುವ ಮೂಲಕ ಮುಖ್ಯಮಂತ್ರಿಯಾದರು. 1979 ರಲ್ಲಿ ಮತ್ತೊಮ್ಮೆ ದೇಶದ ಹಲವು ಕಡೆಗಳಲ್ಲಿ ಕೋಮುವಾದಿ ಶಕ್ತಿಗಳು ಹೆಡೆ ಎತ್ತಿದವು. ಅಲಿಘಡ ಮತ್ತು ಜಮ್‌ಶೆಡ್‌ಪುರದಲ್ಲಿ ವ್ಯಾಪಕ ಗಲಭೆಗಳಾದವು. ಆರ್‌ಎಸ್‌ಎಸ್ ಈ ಗಲಭೆಗಳಿಗೆ ಕುಮ್ಮಕ್ಕು ನೀಡಿತು.



ಇದಕ್ಕಿದ್ದಂತೆ ಆಚಾರ್ಯ ವಿನೋಭಾ ಬಾವೆ ಅವರು ಬಂಗಾಳ ಮತ್ತು ಕೇರಳದಲ್ಲಿ ಗೋ ಹತ್ಯೆ ತಡೆಯಲು ಆಗ್ರಹಿಸಿ ಉಪವಾಸ ಸತ್ಯಾಗ್ರಹ ಆರಂಭಿಸಿದರು. ಇದರಿಂದಾಗಿ ಎರಡೂ ರಾಜ್ಯಗಳಲ್ಲಿ ಕೋಮುದ್ವೇಷದ ಕಿಚ್ಚನ್ನು ಹಚ್ಚಿದಂತಾಯಿತು. ಆದರೆ ಬಂಗಾಳದಲ್ಲಿ ಕಾಂ. ಬಸು ನೇತೃತ್ವದ ಎಡರಂಗ ಸರ್ಕಾರ ತನ್ನ ಧೋರಣೆಯನ್ನು ಸ್ಪಷ್ಟಪಡಿಸುತ್ತಾ ಬಹುಸಂಖ್ಯಾತ ಸಮುದಾಯದ ಆಹಾರ ಪದ್ಧತಿಯನ್ನು ಅಲ್ಪಸಂಖ್ಯಾತರ ಮೇಲೆ ಹೇರಲು ಸಾಧ್ಯವಿಲ್ಲ ಎಂದು ಪ್ರಕಟಿಸಿತು.

ರಾಜ್ಯದಲ್ಲಿ ಕೋಮು ಸೌಹಾರ್ದತೆಯ ವಾತಾವರಣವನ್ನು ನಾಶ ಮಾಡಲು ಆಗಾಗ ಪ್ರಯತ್ನಗಳು ನಡೆಯುತ್ತಿದ್ದವು. ಆದ-ರೆ ಕೈಗೊಳ್ಳುತ್ತಿದ್ದ ದೃಢವಾದ ಕ್ರಮಗಳಿಂದ ಕೋಮುವಾದಿ ಶಕ್ತಿಗಳ ಬೆಳವಣಿಗೆಯನ್ನು ಪರಿಣಾಮಕಾರಿಯಾಗಿ ತಡೆಯಲು ಸಾಧ್ಯವಾಯಿತು.

1984 ಅಕ್ಟೋಬರ್ 31 ರಂದು ಶ್ರೀಮತಿ ಇಂದಿರಾಗಾಂಧಿಯವರು ಹಂತಕರ ಗುಂಡಿಗೆ ಬಲಿಯಾಗಿ ನಿಧನರಾದರು. ಮುಖ್ಯಮಂತ್ರಿ ಕಾಂ. ಜ್ಯೋತಿಬಸು ಮರುದಿನವೇ ನವದೆಹಲಿಗೆ ಧಾವಿಸಿದರು. ದೆಹಲಿಯಲ್ಲಿ ಸಾವಿರಾರು ಅಮಾಯಕ ಸಿಖ್ಖರ ಹತ್ಯೆಯಾಗಿತ್ತು. ಈ ಕೊಲೆಗಳ ಹಿಂದೆ ಕಾಂಗ್ರೆಸ್ ನಾಯಕರ ಕೈವಾಡ ಇರುವುದು ನಂತರ ಬಯಲಿಗೆ ಬಂತು. ಸಿಖ್ಖರನ್ನು ಗುರಿಯಾಗಿಸುವುದರಲ್ಲಿ ಆರ್‌ಎಸ್‌ಎಸ್ ಕಾಂಗ್ರೆಸ್‌ನ್ನು ಬೆಂಬಲಿಸಿತ್ತು. ಪಶ್ಚಿಮ ಬಂಗಾಳದಲ್ಲಿ ಅಂತಹ ಅಹಿತಕರ ಘಟನೆಗಳು ನಡೆಯದಂತೆ ಸಿಖ್ ಸಮುದಾಯದ ಜನರಿಗೆ ರಕ್ಷಣೆ ಒದಗಿಸುವಲ್ಲಿ ಕಾಂ.ಬಸು ನೇತೃತ್ವದ ಸರ್ಕಾರ ಯಶಸ್ವಿಯಾಯಿತು.

9ನೇ ಲೋಕಸಭಾ ಚುನಾವಣೆ (1989) ಯಲ್ಲಿ ಕಾಂಗ್ರೆಸ್ ಹೀನಾಯ ಸೋಲು ಅನುಭವಿಸಿತು. 52 ಸ್ಥಾನಗಳನ್ನು ಗೆದ್ದ ಎಡಪಕ್ಷಗಳು 162 ಸ್ಥಾನಗಳನ್ನು ಪಡೆದ ರಾಷ್ಟ್ರೀಯ ರಂಗ ಬೆಂಬಲಿಸಿದವು. ಬಿಜೆಪಿ ಸಹ ಅನಿವಾರ್ಯವಾಗಿ ರಾಷ್ಟ್ರೀಯ ರಂಗವನ್ನು ಬೆಂಬಲಿಸಿತು. ವಿ.ಪಿ. ಸಿಂಗ್ ಪ್ರಧಾನ ಮಂತ್ರಿಯಾಗಿ ಆಯ್ಕೆಯಾದರು. ಒಂದು ವರ್ಷದೊಳಗೆ ಬಿಜೆಪಿ ತನ್ನ ಕೊಳಕು ಕೋಮುವಾದಿ ಕುತಂತ್ರಗಳನ್ನು ಆರಂಭಿಸಿತು. ಎಲ್.ಕೆ. ಅಡ್ವಾಣಿ ಕೈಗೊಂಡ ರಥಯಾತ್ರೆಯಿಂದ ಕೋಮುದ್ವೇಷದ ವಾತಾವರಣ ಬಡಿದೆಬ್ಬಿಸಲ್ಪಟ್ಟಿತು. ಕಾಂಗ್ರೆಸ್‌ನ್ನು ತಿರಸ್ಕರಿಸಿ ಹೊಸ ಸರ್ಕಾರವನ್ನು ಅಧಿಕಾರಕ್ಕೆ ತಂದಿದ್ದ ಜನತೆಗೆ ತಮ್ಮ ಆಶೋತ್ತರಗಳನ್ನು ಈಡೇರಿಸಿಕೊಳ್ಳಲು ಅವಕಾಶವೇ ಸಿಗದಂತಾಯಿತು. ಆಡ್ವಾಣಿ ಹೋದ ಹೋದಲ್ಲೆಲ್ಲಾ ಕೋಮು ಗಲಭೆಗಳಾದವು. ಆಡ್ವಾಣಿ ರಥ ಬಂಗಾಲದಲ್ಲಿಯೂ ಹಾದು ಹೋಯಿತು. ಆದರೆ ಬಂಗಾಳದ ಜನತೆ ಅವರ ಕೊಳಕು ಆಟವನ್ನು ತಿರಸ್ಕರಿಸಿತು.

ಬಿಜೆಪಿ ಕೋಮು ದ್ವೇಶದ ಜ್ವಾಲಾಮುಖಿಯಾಗಿ ಬೆಳೆಯುತ್ತಾ ಹೋಯಿತು. ಪಿ.ವಿ. ನರಸಿಂಹರಾವ್ ನೇತೃತ್ವದ ಕಾಂಗ್ರೆಸ್‌ನ 'ಮೃದು ಹಿಂದುತ್ವ' ಧೋರಣೆ ಬಿಜೆಪಿಯ ನೆರವಿಗೆ ಬಂತು. ಆಯೋಧ್ಯೆಯಲ್ಲಿ ದೇವಸ್ಥಾನ ನಿರ್ಮಿಸುವ ಬಿಜೆಪಿ-ವಿಹೆಚ್‌ಪಿಯ ಯೋಜನೆ ಗುಟ್ಟಿನ ವಿಷಯವಾಗಿರಲಿಲ್ಲ. ಅವರ ಭರವಸೆಗಳನ್ನು ನಂಬಬೇಡಿ ಎಂದು ಪ್ರಧಾನಿ ನರಸಿಂಹ ರಾವ್ ಅವರಿಗೆ 'ರಾಷ್ಟ್ರೀಯ ಸಮಗ್ರತಾ ಕೌನ್ಸಿಲ್' ಸಭೆಯಲ್ಲಿ ಕಾಂ. ಜ್ಯೋತಿಬಸು ಅವರು ಸ್ಪಷ್ಟ ಎಚ್ಚರಿಕೆಯನ್ನು ನೀಡಿದ್ದರು. ಆದರೆ ಆದ್ಯಾವುದನ್ನೂ ಪ್ರಧಾನಿ ನರಸಿಂಹ ರಾವ್ ಗಂಭೀರವಾಗಿ ಪರಿಗಣಿಸದಿರು ಮೂಲಕ ಬಿಜೆಪಿ ಷಡ್ಯಂತ್ರ ಫಲಿಸುವಂ ಮಾಡಿದರು. 300 ವರ್ಷಗಳಿಗೂ ಹೆ ಹಳೆಯದಾದ ಬಾಬ್ರಿ ಮಸೀದಿಯನ ಆರ್‌ಎಸ್‌ಎಸ್ ಕರಸೇವಕರು ಹಾಡ ಹಗಲಲ್ಲೇ ಧ್ವಂಸಗೊಳಿಸಿದರು. ಇಡೀ ವಿಶ್ವ ಮುಂದೆ ಭಾರತ ತಲೆ ತಗ್ಗಿಸುವಂತಾಯಿತು

ಅದೊಂದು ಭೀಕರ ಅನುಭವ. ದೇ ವಿಭಜನೆಯ ನಂತರ ಅಂತಹ ದಂಗೆಯನ ದೇಶ ಕಂಡಿರಲಿಲ್ಲ. ಮುಂಬೈ ಒಂದರಲ್ಲ ಸಾವಿರಾರು ಜನರ ಹತ್ಯೆಯಾಯಿತು ಎರಡು ತಿಂಗಳುಗಳ ಕಾಲ, ಉತ್ತ ಪ್ರದೇಶ, ಮಧ್ಯಪ್ರದೇಶ, ರಾಜಾಸ್ತಾನ ಗುಜರಾತ್, ಮಹಾರಾಷ್ಟ್ರ ಮತ್ತು ಕರ್ನಾಟ ರಾಜ್ಯಗಳಲ್ಲಿ ಸರಣೀಯ ಗಲಭೆಗಳ ಸಂಭವಿಸಿದವು. ಅಲ್ಪಸಂಖ್ಯಾತರು ದಾಳಿಗೆ ತತ್ತರಿಸಿ ಹೋದವರು ಇದುವರೆ ಚೇತರಿಸಿಕೊಂಡಿಲ್ಲ. ಪಶ್ಚಿಮ ಬಂಗಾಳದ ಮುಖ್ಯವಾಗಿ ಕಲ್ಕತ್ತ ನಗರದಲ್ಲಿ ಗಲಭೆಯನು ಉಂಟು ಮಾಡಲು ಪ್ರಯತ್ನ ನಡೆಯಿತು ಆದರೆ ಕಾಂ.ಬಸು ಅವರ ಸರ್ಕಾರದ ದೃಢವಾದ ಕ್ರಮಗಳಿಂದಾಗಿ ಕೋಮುವಾದಿ ಶಕ್ತಿಗಳಿಗೆ ಹೆಡೆ ಎತ್ತಲು ಸಾಧ್ಯವಾಗಲಿಲ್ಲ.

ಪಶ್ಚಿಮ ಬಂಗಾಳದಲ್ಲಿ ಎಡರಂ ಸರ್ಕಾರ ಅಧಿಕಾರದಲ್ಲಿ ಇರುವವರೆಗೂ ಕೋಮು ಸೌಹಾರ್ದತೆಗೆ ಧಕ್ಕೆ ಆಗಿರಲಿಲ್ಲ ಕೋಮುವಾದಿ ಶಕ್ತಿಗಳಿಂದ ದುಡಿಯುವ ಜನತೆಯ ಐಕ್ಯತೆಗೆ ಉಂಟಾಗುವ ಧಕ್ಕೆಯನು ಜನತೆಗೆ ಮನವರಿಕೆ ಮಾಡಿಕೊಡುವಲ್ಲಿ, ಅವರ ಪ್ರಜ್ಞೆಯನ್ನು ಎತ್ತರಿಸುವಲ್ಲಿ ಸಿಪಿಐ(ಎಂ)ನ ಪಾತ್ರ ಗಣನೀಯವಾದದ್ದು. ಇಡೀ ದೇಶಕ್ಕೆ ಮಾದರಿಯಾದುದು. ಕಾಮ್ರೇಡ್ ಜ್ಯೋತಿಬಸು ಅವರು ಕೋಮು ಸೌಹಾರ್ದತೆಗೆ ನೀ ಕೊಡುಗೆಗಾಗಿ ದೇಶವೇ ಅವರಿಗೆ ಚಿರಋಣಿ

ಜನಶಕ್ತಿ
ಕನ್ನಡ ವಾರಪತ್ರಿಕೆ

ಹೈದರಾಬಾದ್ ಕರ್ನಾಟಕದ ಅಭಿವೃದ್ಧಿ – ಕಲಂ 371 ಜೆ ಪ್ರಶ್ನೆ :

'ಅಗತ್ಯ ಮೀಸಲು ಮತ್ತು ಹಣಕಾಸು ನೀಡಿ– ಅನುದಾನ ದುರುಪಯೋಗ ತಪ್ಪಿಸಿ'– ಮಾರುತಿ ಮಾನ್ಪಡೆ

ಹೈದ್ರಾಬಾದ್ ಕರ್ನಾಟಕ ಪ್ರದೇಶದ ಅಭಿವೃದ್ಧಿಯ ಆಶಯದೊಂದಿಗೆ ತರಲಾಗಿರುವ ಸಂವಿಧಾನದ ಕಲಂ 371 'ಜೆ' ರ ಜಾರಿಗಾಗಿ ರಚಿಸಲಾಗಿರುವ ರಾಜ್ಯ ಸರ್ಕಾರದ ಸಚಿವ ಹೆಚ್.ಕೆ. ಪಾಟೀಲರ ನೇತೃತ್ವದ ಉಪ ಸಮಿತಿಗೆ ಸಿಪಿಐ(ಎಂ) ಪಕ್ಷವು ತನ್ನ ಪ್ರಸ್ತಾವನೆಗಳನ್ನು ಸಲ್ಲಿಸಿದೆ. ಗುಲ್ಬರ್ಗಾದಲ್ಲಿ ಈ ಸಂಬಂಧದ ಸಭೆಯಲ್ಲಿ ಸಿಪಿಐ(ಎಂ) ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ. ಮಾರುತಿ ಮಾನ್ಪಡೆಯವರು ಚರ್ಚೆಯಲ್ಲಿ ಪರಿಣಾಮಕಾರಿಯಾಗಿ ಮಧ್ಯ ಪ್ರವೇಶಿಸಿ ಮಂಡಿಸಿದ ವಿಚಾರಗಳ ಮುಖ್ಯ ಅಂಶಗಳು ಹೀಗಿವೆ.

ಭಾರತ ಸರ್ಕಾರವು ಹಿಂದುಳಿದ ಹೈದ್ರಾಬಾದ್ ಕರ್ನಾಟಕ ಪ್ರದೇಶದ ಅಭಿವೃದ್ಧಿಗೆ ಹಾಗೂ ಉದ್ಯೋಗದಲ್ಲಿ ಮಿಸಲಾತಿಗೆ ಸಂವಿಧಾನದಲ್ಲಿ ಕಲಂ 371 ಕ್ಕೆ 'ಜೆ' ತಿದ್ದುಪಡಿ ತಂದಿದೆ. ಈ ತಿದ್ದುಪಡಿ ಅನುಸರಿಸಿ ಕರ್ನಾಟಕ ಸರ್ಕಾರ ನಿಯಮಾವಳಿಗಳ ರಚನೆಗಾಗಿ ಸಮಾಲೋಚನಾ ಸಭೆ ನಡೆಯಿತು. ಅಲ್ಲಿ ಈ ಕೆಳಕಂಡ ಅಂಶಗಳನ್ನು ಮಂಡಿಸಲಾಯಿತು.

1.ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿ ಸ್ಥಳೀಯರಿಗೆ ಸರ್ಕಾರಿ ಉದ್ಯೋಗ ಮೀಸಲಾತಿಯನ್ನು ಶೇ. 75 ರಷ್ಟಕ್ಕೆ ನಿಗದಿಪಡಿಸಬೇಕು. ಕರ್ನಾಟಕ ರಾಜ್ಯದಾದ್ಯಂತ ಹೈದ್ರಾಬಾದ್ ಕರ್ನಾಟಕ ಪ್ರದೇಶದವರಿಗೆ ಶೇ. 25 ರಷ್ಟು ಮೀಸಲು ಇಡಬೇಕು ಎಂದು ಮಾರುತಿ ಮಾನ್ಪಡೆಯವರು ಪ್ರತಿಪಾದಿಸಿದರು.

2. ಉದಾರೀಕರಣ, ಜಾಗತೀಕರಣ, ಖಾಸಗೀಕರಣ, ನೀತಿಗಳ ಜಾರಿಗಳ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರವು ದಿನೇ ದಿನೇ ಹೊರಗುತ್ತಿಗೆ, ಗುತ್ತಿಗೆ ನೀಡುವುದರ ಮೂಲಕ ರಾಜ್ಯದಲ್ಲಿ 5 ಲಕ್ಷಕ್ಕಿಂತ ಮೇಲ್ಪಟ್ಟು ಸರ್ಕಾರಿ ಹುದ್ದೆಗಳನ್ನು ರದ್ದುಪಡಿಸಿದೆ. ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿ ಈಗಾಗಲೇ ಒಂದು ಲಕ್ಷ ಹುದ್ದೆಗಳನ್ನು ರದ್ದುಪಡಿಸಲಾಗಿದೆ. ಸರ್ಕಾರಿ ಹುದ್ದೆಗಳನ್ನು ಈ ರೀತಿ ರದ್ದುಪಡಿಸುತ್ತಿರುವಾಗ ಮೀಸಲಾತಿಗೆ ಅರ್ಥವಿಲ್ಲದಂತಾಗಿದೆ ಎಂದು ಮಾರುತಿ ಮಾನ್ಪಡೆಯವರು ವಾದ ಮಂಡಿಸಿದರು. ಅದಕ್ಕಾಗಿ ರದ್ದುಪಡಿಸಿರುವ ಹುದ್ದೆಗಳನ್ನು ಬ್ಯಾಕ್ ಲಾಗ್ ಹುದ್ದೆಗಳೆಂದು ಪರಿಗಣಿಸಬೇಕು ಎಂದು ಒತ್ತಾಯಿಸಿದರು.

3.ಅಭಿವೃದ್ಧಿ ಅಂದರೆ ರಸ್ತೆ, ಕಟ್ಟಡ ಮಾತ್ರವಲ್ಲ ಮಾನವನ ಏಳಿಗೆ. ಬದುಕು ಹಸನು ಮಾಡುವುದು. ಡಾ। ನಂಜುಂಡಪ್ಪನವರು ಅಭಿವೃದ್ಧಿ ಅಧ್ಯಯನ ಮಾಡಲು "ಸಂಯುಕ್ತ ಸುಸ್ಥಿತಿ ಸೂಚ್ಯಾಂಕ" ಈ ದುಸ್ಥಿತಿ ನಿವಾರಣೆಗೆ ನಂಜುಡಪ್ಪನವರು ತಮ್ಮ ವರದಿಯಲ್ಲಿ ಶಿಫಾರಸ್ಸು ಮಾಡಿದ್ದಾರೆ. ದುಸ್ಥಿತಿ ನಿವಾರಣೆಗೆ ಹಿಂದಿನ ಸರ್ಕಾರ ಗಮನ ನೀಡಿಲ್ಲ. ಮುಂದೆಯು ಕೂಡ ಹೈದ್ರಾಬಾದ್ ಕರ್ನಾಟಕ ಜನರ ದುಸ್ಥಿತಿ ನಿವಾರಣೆಗೆ ಅದ್ಯತೆ ನೀಡಬೇಕು. ಮಾನವ ಅಭಿವೃದ್ಧಿಗೆ, ಅಭಿವೃದ್ಧಿ ಕಾರ್ಯಗಳಿಗೆ ಹಣ ಸಾಲುವುದಿಲ್ಲ. ಕೇಂದ್ರ ಸರ್ಕಾರವು ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿಗಾಗಿ ಅಗತ್ಯವಾದ ಹಣ ಒದಗಿಸಬೇಕು. ಕರ್ನಾಟಕ ರಾಜ್ಯ ಸರ್ಕಾರವು ಅಭಿವೃದ್ಧಿಗಾಗಿ ಕೇಂದ್ರದಿಂದ ಹಣ ಬಿಡುಗಡೆಗಾಗಿ ಒತ್ತಾಯಿಸಬೇಕೆಂದು ಸರ್ಕಾರಕ್ಕೆ ಅವರು ಒತ್ತಾಯಪಡಿಸಿದರು.

4.ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿ ಮಾನವ ಅಭಿವೃದ್ಧಿ ತೀರ ಕೆಳಮಟ್ಟದಲ್ಲಿದೆ. ದಕ್ಷಿಣ ಆಫ್ರಿಕಾದ ಉಗಾಂಡ ರಾಜ್ಯದ ಮಾನವ ಅಭಿವೃದ್ಧಿಗೆ ಸರಿಸಮಾನವಾಗಿದೆ. ಮನುಷ್ಯ ಕೇಂದ್ರೀಕೃತ ಅಭಿವೃದ್ಧಿಯನ್ನು ಕಡೆಗಣಿಸಲಾಗಿದೆ ಎಂದು ಟೀಕಿಸಿದರು. ಮಾನವ ಅಭಿವೃದ್ಧಿ ಹೆಚ್ಚಳಕ್ಕಾಗಿ ಉದ್ಯೋಗ, ಶಿಕ್ಷಣ, ಲಿಂಗಭೇಧ ತಾರತಮ್ಯ, ಜಾತಿಭೇಧ ತಾರತಮ್ಯ, ನಿವಾರಣೆಗೆ ಹೆಚ್ಚು ಹಣ ಖರ್ಚುಮಾಡಬೇಕೆಂದು ಒತ್ತಾಯಿಸಿದರು.

5. ಈಗಾಗಲೆ ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಡಾ। ನಂಜುಡಪ್ಪನವರ ನೇತೃತ್ವದಲ್ಲಿ ಪ್ರಾದೇಶಿಕ ಅಸಮಾನತೆ ನಿವಾರಣೆಗಾಗಿ ನೀಡಿದ ಶಿಫಾರಸ್ಸುಗಳ ವರದಿ ಜಾರಿ ಹಿನ್ನೆಲೆಯಲ್ಲಿ ಸುಮಾರು ಸಾವಿರ ಕೋಟಿ ಗಿಂತ ಹೆಚ್ಚು ಹಣ ಖರ್ಚು ಮಾಡಿದ್ದರೂ ಆ ಪ್ರದೇಶದಲ್ಲಿ ಏನೂ ಅಭಿವೃದ್ಧಿ ಸಾಧಿಸಲಾಗಿಲ್ಲ. ಶಾಸಕರು, ಗುತ್ತಿಗೆದಾರರು, ಅಧಿಕಾರಿಗಳು ಮಾತ್ರ ಅಭಿವೃದ್ಧಿ ಸಾಧಿಸಿದ್ದಾರೆಂದು ಮಾರುತಿ ಮಾನ್ಪಡೆಯವರು 'ಅಭಿವೃದ್ಧಿ'ಯ ನಿಜ ಹೂರಣವನ್ನು ತೆರೆದಿಟ್ಟರು.

6.ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿ 31 ತಾಲ್ಲೂಕುಗಳಿದ್ದು ಅವುಗಳಲ್ಲಿ 10 ತಾಲ್ಲೂಕುಗಳು ಮಾತ್ರ ನೀರಾವರಿ ಸೌಲಭ್ಯವನ್ನು ಹೊಂದಿವೆ. ಉಳಿದ 21 ತಾಲ್ಲೂಕುಗಳು ಬರಗಾಲಪೀಡಿತ ಪ್ರದೇಶಗಳಾಗಿವೆ. ನೀರಾವರಿಗಾಗಿ ನೀರಿನ ಹಂಚಿಕೆಯಲ್ಲಿ ಕೃಷ್ಣ ಬಿ. ಸ್ಕೀಮ್‌ನ ನೀರಿನ ಹಂಚಿಕೆಯಲ್ಲಿ ತಾರತಮ್ಯ ಮಾಡಲಾಗಿದೆ ಎಂದು ಖಂಡಿಸಲಾಯಿತು. ನೀರಿನ ಹಂಚಿಕೆ ಸರಿಪಡಿಸಲು ಮತ್ತೊಮ್ಮೆ ಚರ್ಚೆ ಕೈಗೆತ್ತಿಕೊಳ್ಳಬೇಕು. ಬಿಜೆಪಿ ಸರ್ಕಾರದ ಅವಧಿಯಲ್ಲಿ ಮಾಡಿದ ಅನ್ಯಾಯ ಸರಿಪಡಿಸಲು ಮುಂದಾಗಬೇಕೆಂದು ಮಾನ್ಪಡೆಯವರು ಒತ್ತಾಯಿಸಿದರು.

ಮೇಲ್ಕಾಣಿಸಿದ ಪ್ರಶ್ನೆಗಳ ಹಿನ್ನೆಲೆಯಲ್ಲಿ ಸರ್ಕಾರದ ಉಪ ಸಮಿತಿಯ ಅಧ್ಯಕ್ಷರಾದ ಹೆಚ್.ಕೆ. ಪಾಟೀಲರು ಹಾಗೂ ಕಾನೂನು ಸಚಿವರಾದ ಜಯಚಂದ್ರ ಪ್ರತಿಕ್ರಿಯಿಸಿದರು. ಹಲವಾರು ಗಂಭೀರ ಪ್ರಶ್ನೆಗಳನ್ನು ತಾವು ಎತ್ತಿದ್ದೀರಿ. ಇದನ್ನು ನಮ್ಮ ವರದಿ ಭಾಗವಾಗಿ ಅಳವಡಿಸಿಕೊಳ್ಳುತ್ತೇವೆ ಎಂದರು. ಇದಲ್ಲದೇ ಇನ್ನೊಮ್ಮೆ ತಮ್ಮ ಜೊತೆ ಚರ್ಚಿಸುವೆವು ಎಂದು ಅವರು ತಮ್ಮ ಇಚ್ಛೆ ವ್ಯಕ್ತ ಪಡಿಸಿದರು.

ಸಿಪಿಐ(ಎಂ) ಪಕ್ಷ ನಿರಂತರವಾಗಿ ಹೈದರಾಬಾದ್ ಕರ್ನಾಟಕದ ಅಭಿವೃದ್ಧಿಗಾಗಿ ಜನರ ಪರವಾಗಿ ದನಿ ಎತ್ತಲಿದೆ. ಅಗತ್ಯ ಚರ್ಚೆ–ಸಮಾಲೋಚನೆಗೆ ಸಿದ್ದವಿರುತ್ತದೆ ಎಂದು ಪಕ್ಷದ ಪರವಾಗಿ ವಿಚಾರ ಮಂಡಿಸಿದ ಮಾರುತಿ ಮಾನ್ಪಡೆಯವರು ತಿಳಿಸಿದರು.

ದಲಿತರ ಬಂಧು, ಶ್ರೀ ಕುದ್ಮಲ್ ರಂಗರಾವ್

ಆಗಿನ ಮಂಗಳೂರು ಜಿಲ್ಲೆ, ಈಗಿನ ದಕ್ಷಿಣ ಕನ್ನಡ ಜಿಲ್ಲೆಯ ಕುದ್ಮಲ್ ರಂಗರಾವ್ ಒಬ್ಬ ನಿಸ್ವಾರ್ಥ ಸಮಾಜ ಸೇವಕರಾಗಿದ್ದು, ತಮ್ಮ [illegible] ವರ್ಷಗಳ ಜೀವನದ ಉದ್ದಕ್ಕೂ ದಲಿತರ ಮತ್ತು ಕೊರಗ ಸಮುದಾಯದ ಉದ್ದಾರಕ್ಕಾಗಿ ಶ್ರಮಿಸಿ, ತಮ್ಮ ಸ್ವಂತ ಖರ್ಚಿನಿಂದ ಡಿಪ್ರೆಸ್ಡ್ ಕ್ಲಾಸ್ ಮಿಷನ್ ಎಂಬ ಸಂಸ್ಥೆಯನ್ನು ಸ್ಥಾಪಿಸಿ ದಲಿತ ಮತ್ತು ಕೊರಗ ಸಮುದಾಯದ ಉದ್ಧಾರಕ್ಕೆ ಕಾರಣರಾದರು.

ಶ್ರೀ ರಂಗರಾಯ ಅವರು 29 ಜೂನ್ 1859ರಲ್ಲಿ ಕುದ್ಮಲ್ (ಈಗಿನ ಕಾಸರಗೋಡು ತಾಲ್ಲೂಕ್, ಕೇರಳ ರಾಜ್ಯ) ಎಂಬಲ್ಲಿ ತಂದೆ ಶ್ರೀ ದೇವಪ್ಪಯ್ಯ ಮತ್ತು ತಾಯಿ ಶ್ರೀಮತಿ ಗೌರಿರವರ ಹಿರಿಯ ಮಗನಾಗಿ ಹುಟ್ಟಿದರು. ಶ್ರೀ ದೇವಪ್ಪಯ್ಯ ಗುಮಾಸ್ತರಾಗಿ ಉದ್ಯೋಗದಲ್ಲಿದ್ದು, ರಂಗರಾಯ ಮತ್ತು ಅವರ ಆರು ಜನ ಸಹೋದರರಿಗೆ ವಿದ್ಯೆ ಕಲಿಸಿದರು.

ತಮ್ಮ ಹದಿನಾರನೆಯ ವಯಸ್ಸಿನಲ್ಲಿ ತಂದೆಯನ್ನು ಕಳೆದುಕೊಂಡು, ಮುಂದಿನ ಜೀವನಕ್ಕಾಗಿ ಮಂಗಳೂರಿಗೆ ಬಂದು, ಅಲ್ಲಿ ಅಧ್ಯಾಪಕ ವೃತಿಯನ್ನು ತಿಂಗಳ ವೇತನ ಎಂಟು ರೂಪಾಯಿಯಂತೆ ತಮ್ಮ ವೃತ್ತಿ ಜೀವನವನ್ನು ಪ್ರಾರಂಭ ಮಾಡಿದರು. ನಂತರ ಮೆಟ್ರಿಕ್ಯುಲೇಷನ್ ಪಾಸ್ ಆಗಿ ಮುಂದೆ ಕಾನೂನು ಪದವೀಧರರಾಗಿ ಮಂಗಳೂರು ಜಿಲ್ಲೆಯ ಕೋರ್ಟಿನಲ್ಲಿ ವಕೀಲಿ ವೃತ್ತಿಯನ್ನು ಪ್ರಾರಂಭ ಮಾಡಿದರು. ಅವರು ಶುಲ್ಕವಿಲ್ಲದೆ ದಲಿತರ ಮತ್ತು ಕೊರಗರ ಪರವಾಗಿ ವಕಾಲತನ್ನು ವಹಿಸಿ ದಲಿತರ ವಕೀಲರೆಂದೇ ಪ್ರಸಿದ್ಧರಾದರು. ತಮ್ಮ ಸ್ವಂತ ದುಡಿಮೆಯಿಂದ ದಲಿತರಿಗಾಗಿ ಮೊದಲನೆಯ ಶಾಲೆಯನ್ನು ರಂಗರಾಯರು 1892ರಲ್ಲಿ ಉರ್ವಾ ಚಿಲಿಂಬಿಯಲ್ಲಿ ತೆ–ರೆದರು. ಅಲ್ಲಿಂದ ಮಂಗಳೂರು ನಗರದ ಕಂಕನಾಡಿ ಮತ್ತು ಬೋಳಾರಿನಲ್ಲಿಯೂ ಒಂದೊಂದು ಪ್ರಾಥಮಿಕ ಶಾಲೆಯನ್ನು ಸ್ಥಾಪಿಸಿ ಪರ ಊರಿನಿಂದ ಬರುವ ದಲಿತ ಹೆಣ್ಣುಮಕ್ಕಳಿಗಾಗಿ ವಿದ್ಯಾರ್ಥಿ ನಿಲಯವನ್ನು ಕಟ್ಟಿಸಿ ಕೊಟ್ಟರು. 1897ರಲ್ಲಿ ಕೊಡಿಯಾಲ ಬೈಲು ಮಂಗಳೂರಿನಲ್ಲಿ ದಲಿತರಿಗೆ ಡಿಪ್ರೆಸ್ಡ್ ಕ್ಲಾಸ್ ಮಿಷನ್, ತೆರೆದರು. ಈ ಡಿಪ್ರೆಸ್ಡ್ ಕ್ಲಾಸ್ ಮಿಷನ್ ಮೂಲಕ ಮಂಗಳೂರಿನ ದೇರೆಬೈಲು ದೊಡ್ಡಲದ ಕಾಡು, ಕಾಪಿಕಾಡು, ಕೊಡದೇಲು ಮತ್ತು ಉಡುಪಿ ಹಾಗೂ ಮತ್ತೂರು ತಾಲ್ಲೂಕಿನಲ್ಲಿ ಕೊರಗ ಜನಾಂಗದವರಿಗೆ ಜಮೀನನ್ನು ಕೊಡಿಸಿದರು.

ನಂತರ ತನ್ನ ಕಾರ್ಯಕ್ಷೇತ್ರವನ್ನು ವಿಸ್ತರಿಸಿ, ಜಿಲ್ಲೆಯ ಬನ್ನಂಜೆ, ವಿದ್ಯಾವರ, ಪಣಂಬೂರು, ತಣ್ಣೀರು ಬಾವಿ, ಬೈಕಂಪಡಿ, ಬ್ರಹ್ಮಾವರ, ಮುಲ್ಕಿಗಳಲ್ಲಿಯೂ ಜಮೀನನ್ನು ವಿತರಿಸಿದರು. ಉಡುಪಿ ತಾಲ್ಲೂಕಿನ ಕುಂಜಿಬೆಟ್ಟು ಎಂಬಲ್ಲಿ ಸುಮಾರು ಏಳೂವರೆ ಎಕರೆ ಜಮೀನನ್ನು ಬೆನಗಲ್ ರಾಘವೇಂದ್ರ ರಾಯರು ಡಿ.ಸಿ.ಎಂ. ಸಂಸ್ಥೆಗೆ ದಾನ ಮಾಡಿದ್ದನ್ನು ರಂಗರಾಯರು ದಲಿತರಿಗೆ ವಿತರಣೆ ಮಾಡಿದರು. ಶ್ರೀ ರಂಗರಾಯರಿಗೆ ಆರು ಜನ ಮಕ್ಕಳಿದ್ದರು. ದೇವರಾಜ್, ಅಮೃತರಾವ್ ಮತ್ತು ಸಂಜೀವರಾವ್ ಎಂಬ ಮೂರು ಜನ ಗಂಡು ಮಕ್ಕಳು, ಲಲಿತಬಾಯಿ, ರಾಧಾಬಾಯಿ ಮತ್ತು ಶಾಂತಬಾಯಿ ಎಂಬ ಮೂರು ಜನ ಹೆಣ್ಣುಮಕ್ಕಳಿದ್ದರು. 1912ರಲ್ಲಿ ಅವರ ಮಗಳು ರಾಧಾಬಾಯಿರವರು ತಮಿಳುನಾಡಿನ ಸೇಲಂ ಜಿಲ್ಲೆಯ ಡಾ. ಪರಮಶಿವಂ ಸುಬ್ಬರಾಯಮ್ ಅವರ ಜೊತೆ ಅಂತರ್ಜಾತಿ ವಿವಾಹವಾದರು. ಈ ಅಂತರ್ಜಾತಿ ವಿವಾಹದ ಪೌರೋಹಿತ್ಯವನ್ನು ಚಕ್ರವರ್ತಿ ರಾಜಗೋಪಾಲಾಚಾರಿರವರು ವಹಿಸಿದ್ದು ಕಂಡುಬರುತ್ತದೆ.

ಡಾ. ಸುಬ್ಬರಾಯಂ ಮದ್ರಾಸ್ ರೆಸಿಡೆನ್ಸಿಯಲ್ಲಿ ಮುಖ್ಯಮಂತ್ರಿಗಳಾಗಿದ್ದು, ಪಂ. ಜವಹರಲಾಲ್ ನೆಹರು ಅವರ ಮಂತ್ರಿಮಂಡಲದಲ್ಲಿ ಸಂಪರ್ಕ ಖಾತೆ ಸಚಿವರಾಗಿದ್ದು, ಇಂಡೋನೇಷಿಯಾ ದೇಶಕ್ಕೆ ರಾಯಭಾರಿಯಾಗಿದ್ದಲ್ಲದೆ ಕಡೆಗೆ ಮಹಾರಾಷ್ಟ್ರ ರಾಜ್ಯದ ರಾಜ್ಯಪಾಲರಾಗಿ 1962ರಲ್ಲಿ ನಿಧನ ಹೊಂದಿದರು.

ಈ ದಂಪತಿಗಳ ಮಕ್ಕಳಾದ ಜನರಲ್ ಪಿ.ಪಿ. ಕುಮಾರ್ ಮಂಗಳಂ ಮಿಲಿಟರಿ ಅಧಿಕಾರಿಯಾಗಿದ್ದರು ಮತ್ತು ಅವರ ತಂಗಿ ಶ್ರೀಮತಿ ಪಾರ್ವತಿ ಕೃಷ್ಣನ್, 3 ಅವಧಿಗೆ ಸಿ.ಪಿ.ಐ. ಪಕ್ಷದ ಕೊಯಂಬತ್ತೂರು ಲೋಕಸಭಾ ಸದಸ್ಯರಾಗಿದ್ದರು. 1916ರಲ್ಲಿ ಜನಿಸಿದ್ದ ಕಿರಿಯ ಇವರ ಸಹೋದರ ಶ್ರೀ ಮೋಹನ್ ಕುಮಾರ ಮಂಗಳಂ ರವರು ಕೇಂಬ್ರಿಜ್‌ನಲ್ಲಿ ವ್ಯಾಸಂಗ ಮಾಡುತ್ತಿದ್ದಾಗ ಮಾರ್ಕ್ಸ್‌ವಾದಕ್ಕೆ ಆಕರ್ಷಿತರಾಗಿದ್ದರು. 1939ರಲ್ಲಿ ಭಾರತಕ್ಕೆ ಹಿಂತಿರುಗಿದ ಅವರು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದರು. 1967ರ ವರೆಗೂ ಅವರು ಸಿಪಿಐ ಸದಸ್ಯರಾಗಿದ್ದರು. ಅನಂತರ ಕಾಂಗ್ರೆಸ್ ಸೇರಿದ ಅವರು ಶ್ರೀಮತಿ ಇಂದಿರಾಗಾಂಧಿ ರವರ ಸಚಿವ ಸಂಪುಟದಲ್ಲಿ ಉಕ್ಕು ಮತ್ತು ಗಣಿ ಖಾತೆಯಲ್ಲಿ ಸಚಿವರಾಗಿದ್ದರು.

1929ರಲ್ಲಿ 30ನೇ ಜನವರಿಯಂದು ಶ್ರೀ ರಂಗರಾಯರು ನಿಧನ ಹೊಂದಿದರು. ಇವರ ಸಮಾಧಿ ಮಂಗಳೂರು ನಗರದ ಬಾವುಟಗುಡ್ಡೆಯಲ್ಲಿದೆ.

ನೀತಿಗಳ ದಿಕ್ಕು...

ಪುಟ 2 ರಿಂದ

ಆದರೆ ಅದೇ ಸಂದರ್ಭದಲ್ಲಿ ಕೇಂದ್ರ ಸರ್ಕಾರ ಭೂ ಸ್ವಾಧೀನಕ್ಕೆ ಸಂಬಂಧಿಸಿ 1894ರ ಭೂ ಸ್ವಾಧೀನ ಕಾಯ್ದೆಗೆ ತಿದ್ದುಪಡಿಗಳನ್ನು ತರುತ್ತಿರುವುದನ್ನು ರಾಜ್ಯ ಗಮನಕ್ಕೆ ತೆಗೆದುಕೊಳ್ಳಲು ಸಾಧ್ಯವಾಗಬೇಕು. ಅಲ್ಲದೇ ರೈತರ ಭೂಮಿಯನ್ನು ಬಲವಂತವಾಗಿ ಸ್ವಾಧೀನ ಮಾಡಿಕೊಳ್ಳುವುದನ್ನು, ಅಗತ್ಯಕ್ಕಿಂತ ಹೆಚ್ಚು ಭೂ ಸ್ವಾಧೀನ ಪಡಿಸಿಕೊಳ್ಳುವುದನ್ನು ಕೈಬಿಡಬೇಕು. ರೈತರಿಗೆ ಗರಿಷ್ಠ ಪರಿಹಾರ ನೀಡಬೇಕು. ಕೂಲಿಕಾರರ, ಕುಶಲಕರ್ಮಿಗಳು ಮತ್ತಿತರ ಬಡ ಕುಟುಂಬಗಳಿಗೂ ಪರಿಹಾರ ನೀಡಬೇಕು.

ಗೃಹ ನಿರ್ಮಾಣಗಳಂತಹ ಯೋಜನೆಗಳಿಗೆ ರೈತರ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳುವಾಗ ಈಗ ಸದ್ಯ ನೀಡುತ್ತಿರುವ ಅಭಿವೃದ್ಧಿಪಡಿಸಲಾದ ಭೂಮಿಯ ಶೇ. 40ರ ಬದಲಿಗೆ ಶೇ. 50ರಷ್ಟು ಭೂಮಿಯನ್ನು ನೀಡಬೇಕು. ಕೈಗಾರಿಕಾ ಅಥವಾ ವಾಣಿಜ್ಯ ಉದ್ದೇಶಗಳಿಗಾಗಿ ಸ್ವಾಧೀನ ಪಡಿಸಿಕೊಳ್ಳುವ ಸಂದರ್ಭಗಳಲ್ಲಿ ರೈತರಿಗೆ ಒಪ್ಪಿಗೆಯಾದ ಪರಿಹಾರದ ಜೊತೆಗೆ ಈ ಭೂಮಿ ಪರಿವರ್ತನೆಯಿಂದ ಮಾಲೀಕರಿಗೆ ಬರುವ ಲಾಭದಲ್ಲಿ ನಿಗದಿತ ಪ್ರಮಾಣದ ಲಾಭವೂ ಭೂಮಿಯನ್ನು ಕಳೆದುಕೊಂಡ ರೈತ ಕುಟುಂಬಗಳಿಗೆ ನಿರಂತರವಾಗಿ ಸಿಗುವಂತೆ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸೂಚಿಸಿದರು.

ಭೂ ಸುಧಾರಣಾ ಕಾಯ್ದೆ ಬಲಪಡಿಸುವುದು

ರಾಜ್ಯದಲ್ಲಿ ದೇವರಾಜ ಅರಸು ಅವರ ಕಾಲದಲ್ಲಿ ಜಾರಿಗೆ ತರಲಾಗಿರುವ ಜನಪರ ಭೂ ಸುಧಾರಣಾ ಕಾಯ್ದೆಯನ್ನು ಮತ್ತಷ್ಟು ಬಲಪಡಿಸಬೇಕು. ಕೃಷಿ ಭೂಮಿ ಒಡೆತನವನ್ನು ಕಂಪೆನಿಗಳಿಗೆ ವರ್ಗಾವಣೆ ಮಾಡುವ, ಭೂಮಿ ಮಿತಿಯನ್ನು ಹೆಚ್ಚಳ ಮಾಡುವ ಇತ್ಯಾದಿ ಪ್ರತಿಗಾಮಿ ತಿದ್ದುಪಡಿಗಳನ್ನು ತರಲು ಅಂತಿಮ ಸಿದ್ಧತೆಗಳನ್ನು ನಡೆಸಿಕೊಂಡಿದ್ದ ಹಿಂದಿನ ರಾಜ್ಯ ಸರ್ಕಾರದ ಎಲ್ಲಾ ಪ್ರಯತ್ನಗಳನ್ನು ಪೂರ್ಣವಾಗಿ ಕೈಬಿಡಬೇಕು ಎಂದು ಆಗ್ರಹಿಸಿದರು.

2. ರೇಷನ್ ವ್ಯವಸ್ಥೆಯ ಬಗ್ಗೆ

ರೂ. 1-00ರ ದರದಲ್ಲಿ 30 ಕೆ.ಜಿ. ಅಕ್ಕಿಯನ್ನು ನೀಡುವ ರಾಜ್ಯ ಸರ್ಕಾರದ ಘೋಷಣೆಯನ್ನು ಪ್ರಾಂತ ರೈತ ಸಂಘ ಸ್ವಾಗತಿಸುತ್ತದೆ ಎಂದ ಬಯ್ಯಾರೆಡ್ಡಿಯವರು, ಅದೇ ಸಂದರ್ಭದಲ್ಲಿ ಎ.ಪಿ.ಎಲ್. ಕುಟುಂಬಗಳಿಗೆ ನೀಡಲಾಗುತ್ತಿದ್ದ ಅಕ್ಕಿಯನ್ನು ನಿಲ್ಲಿಸುವ ಘೋಷಣೆಯನ್ನು ವಾಪಸ್ಸು ಪಡೆಯಬೇಕೆಂದು ಒತ್ತಾಯಿಸಿದರು. ಉದ್ದೇಶಿತ ಕೇಂದ್ರ ಸರ್ಕಾರದ "ಆಹಾರ ಭದ್ರತಾ ಕಾಯ್ದೆ"ಯ ಅಡಿಯಲ್ಲಿ ಬಿ.ಪಿ.ಎಲ್ ಮತ್ತು ಎ.ಪಿ.ಎಲ್. ಎನ್ನುವ ತಾರತಮ್ಯವನ್ನು ಮಾಡದೇ ಎಲ್ಲರಿಗೂ 35 ಕೆ.ಜಿ. ರೇಷನನ್ನು ನೀಡುವಂತಹ ಸಾರ್ವತ್ರಿಕ ರೇಷನ್ ವ್ಯವಸ್ಥೆಯನ್ನು ಜಾರಿಗೆ ತರಬೇಕೆಂದು ಕೇಂದ್ರ ಸರ್ಕಾರದ ಮೇಲೆ ರಾಜ್ಯ ಸರ್ಕಾರ ಒತ್ತಡ ತರಬೇಕು. ಅಲ್ಲಿಯವರೆಗೂ ರಾಜ್ಯದಲ್ಲಿ ರೇಷನ್ ಅಂಗಡಿಗಳನ್ನು ಬಲಪಡಿಸಿ, ಅಕ್ಕಿ ಗೋಧಿ, ಸಕ್ಕರೆ ಜೊತೆಗೆ ಸಬ್ಸಿಡಿ ದರದಲ್ಲಿ ಬೇಳೆ, ಎಣ್ಣೆ, ಸಾಬೂನು ಇತ್ಯಾದಿ ದಿನನಿತ್ಯದ ಅಗತ್ಯ ವಸ್ತುಗಳನ್ನು ಪೂರೈಸುವಂತೆ ಕ್ರಮವಹಿಸಬೇಕು ಎಂದು ಒತ್ತಾಯಿಸಿದರು.

ಜೊತೆಗೆ ಸಫಲ್ ಸಂಸ್ಥೆಯ ಅಡುಗೆ ಎಣ್ಣೆ, ಮೈಸೂರು ಸ್ಯಾಂಡಲ್ ಸೋಪ್ ಮುಂತಾದ ಸಾರ್ವಜನಿಕ ಸಂಸ್ಥೆಗಳ ಸಾಮಾಗ್ರಿಗಳನ್ನು ರಿಯಾಯಿತಿ ದರದಲ್ಲಿ ನೀಡುವಂತಾಗಬೇಕು ಎಂದು ಪ್ರತಿಪಾದಿಸಿದರು.

3. ಉದ್ಯೋಗ ಖಾತರಿ ಯೋಜನೆ

ಗ್ರಾಮೀಣ ಅಭಿವೃದ್ಧಿಯ ಜೊತೆಗೆ, ಗ್ರಾಮೀಣ ಬಡವರು, ಕೃಷಿ ಕೂಲಿಕಾರರ ವಲಸೆಯನ್ನು ತಪ್ಪಿಸಿ, ಆಯಾಯ ಗ್ರಾಮಗಳಲ್ಲಿ ಕನಿಷ್ಠ 100 ದಿನ ಕೂಲಿ ಕೊಡುವ ಈ ಮಹತ್ವದ ಯೋಜನೆಯನ್ನು ದಾರಿ ತಪ್ಪಿಸಲಾಗಿದೆ. ಇದನ್ನು ಸರಿಯಾದ ದಾರಿಗೆ ತರಬೇಕು. ಜಾರಿ ಮಾಡುವುದರಲ್ಲಿ ಇರುವ ಆಡಳಿತಾತ್ಮಕ ಸಮಸ್ಯೆಗಳನ್ನು ಸರಿಪಡಿಸಬೇಕು. ಬಾರಿ ಮುಖ್ಯವಾಗಿ ಕೆಲಸ ಕೇಳಿದ ಕೂಡಲೇ ಕೆಲಸ ಕೊಡುವ, ಮಾಡಿದ ಕೆಲಸಕ್ಕೆ ಕನಿಷ್ಠ ವಾರಕ್ಕೊಮ್ಮೆಯಾದರೂ ಕೂಲಿ ಪಾವತಿ ಮಾಡುವ ವ್ಯವಸ್ಥೆಯನ್ನು ಜಾರಿಗೆ ತರಬೇಕು. ಕೃಷಿಗೆ ಸಂಬಂಧಿಸಿದ ಇನ್ನು ಕೆಲವು ಕೆಲಸಗಳನ್ನು ಅಂದ–ರೆ ಪೈರು ನಾಟಿ, ಕಟಾವು ಮುಂತಾದ ಕೃಷಿ ಕೆಲಸಗಳನ್ನು ಇದರ ಅಡಿಯಲ್ಲಿ ತರಬೇಕು. ಇದರ ಜೊತೆಗೆ, ಅಗತ್ಯ ವಸ್ತುಗಳ ವಿಪರೀತ ಬೆಲೆ ಏರಿಕೆಯ ಹಿನ್ನೆಲೆಯಲ್ಲಿ ರೇಗಾ ದಿನದ ಕೂಲಿಯನ್ನು ಕನಿಷ್ಠ 250–00ರೂ.ಗೆ ಏರಿಸಲು ಕ್ರಮ ಕೈಗೊಳ್ಳಬೇಕು. ವರ್ಷದಲ್ಲಿ 100 ದಿನ ಮಾತ್ರ ಕೆಲಸ ಎನ್ನುವ ಮಿತಿಯನ್ನು ಅಗತ್ಯವಿರುವ ಪ್ರದೇಶಗಳಲ್ಲಿ ಸಡಿಲಿಸಲು ಅವಕಾಶವಿರಬೇಕು ಎಂದೂ ಬಯ್ಯಾರೆಡ್ಡಿಯವರು ಪ್ರತಿಪಾದಿಸಿದರು.

4. ನೀರಾವರಿ ಯೋಜನೆಗಳ ಜಾರಿಯ ಬಗ್ಗೆ

ರಾಜ್ಯದಲ್ಲಿ ಕೃಷ್ಣ ಮತ್ತು ಕಾವೇರಿ ಕಣಿವೆಯಲ್ಲಿ ನಮ್ಮ ಪಾಲಿಗೆ ಬಂದಿರುವ ನೀರನ್ನು ಸಮರ್ಥವಾಗಿ ಬಳಸಲು ಅಗತ್ಯವಿರುವ ಯೋಜನೆಗಳನ್ನು ಅದಷ್ಟು ಬೇಗ ರೂಪಿಸಬೇಕು. ಇದಕ್ಕಾಗಿ ಬೇಕಿರುವ ಸಾವಿರಾರು ಕೋಟಿ. ರೂ.ಗಳನ್ನು ಕ್ರೋಢೀಕರಿಸಲು ಬಜೆಟ್ ಸಹಾಯದ ಜೊತೆಗೆ ಈ ಜವಾಬ್ದಾರಿಯನ್ನು ರಾಜ್ಯದ ನೀರಾವರಿ ನಿಗಮಗಳಿಗೆ ವಹಿಸಬೇಕು. ವಿಶೇಷವಾಗಿ ಪಶ್ಚಿಮಘಟ್ಟಗಳಿಂದ ಸಮುದ್ರಕ್ಕೆ ಹರಿದು ಹೋಗುತ್ತಿರುವ ಹೇರಳವಾದ ನೀರಿನಲ್ಲಿ ಒಂದಿಷ್ಟು ಭಾಗವನ್ನು ನಿರಂತರ ಬರಗಾಲ ಪೀಡಿತ ಜಿಲ್ಲೆಗಳಾದ ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು, ತುಮಕೂರು, ಚಿತ್ರದುರ್ಗ, ಇತ್ಯಾದಿ ಜಿಲ್ಲೆಗಳಿಗೆ ಹರಿಸಲು ಅಗತ್ಯವಿರುವ ನೀರಾವರಿ ಯೋಜನೆಗಳನ್ನು ನೀರಾವರಿ ತಜ್ಞ ಡಾ. ಪರಮಶಿವಯ್ಯನವರ ವರದಿ ಆಧಾರಿತವಾಗಿ ರೂಪಿಸಬೇಕು. ಶಾಶ್ವತ ನದಿ ನೀರಾವರಿ ಇಲ್ಲದೆ ಅನಿವಾರ್ಯವಾಗಿ ಕೊಳವೆ ಬಾವಿಗಳ ಮೂಲಕ ಲಕ್ಷಾಂತರ ಪಂಪ್‌ಸೆಟ್ ರೈತರು ಸಾವಿರಾರು ಕೋಟಿ ರೂ. ಬಂಡವಾಳದೊಂದಿಗೆ ಕೃಷಿಯಲ್ಲಿ ತೆ–ಡಗಿದ್ದಾರೆ. ಈ ಪ್ರದೇಶದಲ್ಲಿ ಅಂತರ್ಜಲದ ಸಮಸ್ಯೆ ಬಾರಿ ಗಂಭೀರವಾಗಿದ್ದು, ಇದನ್ನು ಅಭಿವೃದ್ಧಿಪಡಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂದರು. ಅಲ್ಲದೇ ರಾಜ್ಯ ಸರ್ಕಾರವು ಪರಮಶಿವಯ್ಯ ವರದಿ ಕುರಿತು ಮಾತೇ ಆಡದೇ ಅದಕ್ಕೆ ಬದಲಿ ಎಂಬಂತೆ 'ಎತ್ತಿನ ಹೊಳೆ' ಯೋಜನೆಯ ಜಾರಿ ಬಗ್ಗೆ ಮಾತನಾಡುತ್ತಿರುವುದಕ್ಕೆ ಆಕ್ಷೇಪ ವ್ಯಕ್ತಪಡಿಸಿದರು. ಪರಮಶಿವಯ್ಯ ವರದಿ ಕುರಿತು 'ವಿಸ್ತುತ ಯೋಜನಾ ವರದಿ'–ಡಿಪಿಆರ್‌ಗೆ ಆದೇಶಿದ ನಂತರ ಸರ್ಕಾರ ಏನೂ ಮಾಡಿಲ್ಲ ಎಂದು ಗಮನ ಸೆಳೆದರು. ರಾಜ್ಯದಲ್ಲಿ ಸಾವಿರಾರು ಕೆರೆಗಳಲ್ಲಿ ಹೂಳೆತ್ತಿಸುವ ಹಾಗೂ ನೀರು ತುಂಬಿಸುವ ಯೋಜನೆಯನ್ನು ಪರಿಣಾಮಕಾರಿಯಾಗಿ ತ್ವರಿತಗತಿಯಲ್ಲಿ ಜಾರಿ ಮಾಡಬೇಕು ಎಂದು ಅವರು ವಿಚಾರ ಮಂಡಿಸಿದರು.

5. ಕೃಷಿ ಸಾಲದ ಬಗ್ಗೆ

ರಾಜ್ಯದಲ್ಲಿ 2001ರ ಜನಗಣತಿಯಂತೆ 70,79,388 ಹಿಡುವಳಿದಾರರಿದ್ದಾರೆ. ಇವರಲ್ಲಿ ಗ್ರಾಮೀಣ ಬ್ಯಾಂಕ್ ಹಾಗೂ ಎಲ್ಲಾ ಬ್ಯಾಂಕುಗಳಿಂದ ವ್ಯವಸಾಯಕ್ಕಾಗಿ ಪಡೆದಿರುವ ಸಾಲಪಡೆದವರ ಸಂ–ಖ್ಯೆ 23,75,157 ಮತ್ತು ಇದರಲ್ಲಿ 2–3 ಖಾತೆಗಳ ಹೆಸರಿನಲ್ಲಿ ಪ್ರತ್ಯಕ್ಷ ಹಾಗೂ ಅಪ್ರತ್ಯಕ್ಷ ರೀತಿಯಲ್ಲಿ ಸಾಲ ಪಡೆದವರು ಸೇರಿ, ಅಂದರೆ ಸಾಲ ಪಡೆದರವರು ಶೇ. 28ರಷ್ಟು ಮಾತ್ರ. ಉಳಿದ ಶೇ. 72ರಲ್ಲಿ ಸಾಲ ಬೇಕಾಗುವವರು ಅನಿವಾರ್ಯವಾಗಿ ವಾರ್ಷಿಕ ಶೇ. 36–120ರಷ್ಟು ಬಡ್ಡಿಯನ್ನು ತೆತ್ತು, ಖಾಸಗಿ ಸಾಹುಕಾರರಿಂದ ಸಾಲವನ್ನು ಪಡೆಯಬೇಕಾಗಿದೆ.

2004ರಲ್ಲಿ ಯು.ಪಿ.ಎ.–1 ಅಧಿಕಾರಕ್ಕೆ ಬಂದ ಸಂದರ್ಭದಲ್ಲಿ ದೇಶದಲ್ಲಿ ಕೃಷಿ ಸಾಲಕ್ಕಾಗಿ ನೀಡಲಾಗುತ್ತಿದ್ದ ಹಣದ ಮೊತ್ತ ಸುಮಾರು 85,000 ಕೋಟಿ ರೂ. ಈಗ ಸದ್ಯ ಈ ಮೊತ್ತವನ್ನು 9 ಲಕ್ಷ ಕೋಟಿರೂ.ಗಳಿಗೆ ಏರಿಕೆ ಮಾಡಲಾಗಿದ್ದರೂ, ಗ್ರಾಮೀಣ ಬಡವರು. ದಲಿತರು, ರೈತರಿಗೆ ಬ್ಯಾಂಕುಗಳ ಮೂಲಕ ಸಾಲ ಸಿಗುವ ಸ್ಥಿತಿಯಲ್ಲಿ ಬಾರಿ ದೊಡ್ಡ ಬದಲಾವಣೆ ಏನೂ ಆಗಿಲ್ಲ. ಕೃಷಿಗೆ ನೀಡಲಾಗುತ್ತಿರುವ ಹಣ ಸಾವಿರ ಸಾವಿರ ರೂ.ಗಳ ಮೊತ್ತದ ರೂಪದಲ್ಲಿ ಬಡವರಿಗೆ ಸಿಗುವ ಬದಲಿಗೆ ಲಕ್ಷ ಲಕ್ಷಗಳ ಹಾಗೂ ಕೋಟಿ ಕೋಟಿ ರೂ.ಗಳ ಮೊತ್ತದಲ್ಲಿ ಸಾಲಗಳನ್ನು ಶ್ರೀಮಂತರು ಮತ್ತು ಅನುಕೂಲಸ್ಥ ದೊಡ್ಡವರಿಗೆ ನೀಡಲಾಗುತ್ತಿದೆ. ಈ ಪರಿಸ್ಥಿತಿಯನ್ನು ಬದಲಾಯಿಸಲು ರಾಜ್ಯ, ಜಿಲ್ಲಾ, ತಾಲ್ಲೂಕು ಮಟ್ಟದ ಬ್ಯಾಂಕರ್ಸ್‌ಗಳ ಸಭೆಗಳ ತೀರ್ಮಾನಗಳು ಸಮಗ್ರವಾಗಿ ಬದಲಾವಣೆಯಾಗಬೇಕು. ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಕಟ್ಟು ನಿಟ್ಟಿನ ಕ್ರಮಗಳನ್ನು ಕೈಗೊಳ್ಳಬೇಕು.

ರಾಜ್ಯದಲ್ಲಿ ಶೂನ್ಯ ಬಡ್ಡಿ ದರದಲ್ಲಿ ಸಹಕಾರಿ ಬ್ಯಾಂಕ್‌ಗಳ ಮೂಲಕ ನೀಡುತ್ತಿರುವ ಸಾಲವು ಸಹ ಹೊಸ ಹೊಸ ವಿಭಾಗಗಳಿಗೆ ಸಿಗುವಂತೆ ಮಾಡಬೇಕು. ನಿರ್ದಿಷ್ಟವಾಗಿ ದಿವಾಳಿಯ ಅಂಚಿನಲ್ಲಿರುವ ಕೋಲಾರ–ಚಿಕ್ಕಬಳ್ಳಾಪುರ ಡಿ.ಸಿ.ಸಿ. ಬ್ಯಾಂಕಿನಂತಹ ಜಿಲ್ಲಾ ಸಹಕಾರಿ ಬ್ಯಾಂಕುಗಳನ್ನು ಪುನಶ್ಚೇತನ ಮಾಡಿ, ರೈತರಿಗೆ ಸಾಲದ ಲಭ್ಯ ಸಿಗುವಂತೆ ಮಾಡಬೇಕು ಎಂದು ಒತ್ತಾಯಿಸಿದರು.

6. ರಾಜ್ಯ ಕೃಷಿ ಉತ್ಪನ್ನ ಬೆಲೆ ನಿಗದಿ ಆಯೋಗ ರಚನೆಯ ಬಗ್ಗೆ :

ತಮ್ಮ ಚುನಾವಣೆಯ ಪೂರ್ವ ಭರವಸೆಯಂತೆ ಕೃಷಿ ಉತ್ಪನ್ನಗಳಿಗೆ ಬೆಂಬ[ಲ] ಬೆಲೆ ನಿಗದಿ ಮಾಡಲು ರಾಜ್ಯ ಕೃ[ಷಿ] ಉತ್ಪನ್ನ ಬೆಲೆ ನಿಗದಿ ಆಯೋಗ ರಚ[ನೆ] ಮಾಡಬೇಕು. ರೈತರು, ರೈತ ಸಂಘಟನೆಗಳ[ಿಗೆ] ಪ್ರಾತಿನಿಧ್ಯವನ್ನು ನೀಡಬೇಕು. ಬೆಂಬ[ಲ] ಬೆಲೆ ನಿಗದಿ ಪಡಿಸುವ ಸಂದರ್ಭದಲ್ಲಿ ಡ[ಾ.] ಎಂ.ಎಸ್. ಸ್ವಾಮಿನಾಥನ್‌ರವರ ಅ ಧ್ಯಕ್ಷತೆ[ಯ] 'ರೈತರ ರಾಷ್ಟ್ರೀಯ ಆಯೋಗ' ವರದಿಯ ಶಿಫಾರಸ್ಸುಗಳನ್ನು ಜಾರಿ ಮಾಡ[ಲು] ಸಾಧ್ಯವಾಗಬೇಕು.

7. ಬೆಳೆ ವಿಮೆ ಯೋಜನೆಯ ಕುರಿತು :

ಪ್ರತಿಯೊಂದು ರೆವಿನ್ಯೂ ಹಳ್ಳಿಯನ[್ನು] ಒಂದು ಘಟಕವನ್ನು ಪರಿಗಣಿಸಿ ರೈತರನ[್ನು] ಪ್ರಾಕೃತಿಕ ವಿಕೋಪಗಳಿಂದ ಮತ್ತು ಬೆ[ಳೆ] ವಿಫಲತೆಯ ಇತರ ಕಾರಣಗಳಿಂದ ರಕ್ಷಿಸಲ[ು] ಎಲ್ಲಾ ಬೆಳೆಗಳಿಗೆ ಕನಿಷ್ಠ ಪ್ರೀಮಿಯಂ ದರದ[ಲ್ಲಿ] ಒಂದು ಸಮಗ್ರ ಮತ್ತು ನೆರವು ಧನ ಪಡೆದ ಬೆಳೆ ವಿಮಾ ಯೋಜನೆಗಳನ್ನು ಕೇಂ[ದ್ರ] ಸರ್ಕಾರ ಜಾರಿಗೆ ತರಬೇಕು. ಈಗಿರುವ ಬೆ[ಳೆ] ವಿಮಾ ಯೋಜನೆಯನ್ನು ರೈತರಿಗೆ ಮತ[್ತು] ಕೃಷಿ ಕೂಲಿಕಾರರಿಗೆ ಪ್ರಯೋಜನವಾಗುವಂ[ತೆ] ತೀವ್ರವಾಗಿ ಪುನರ್‌ರಚಿಸಬೇಕು ಎಂ[ದು] ಪ್ರತಿಪಾದಿಸಿದರು.

ರಾಜ್ಯ ರೈತ ಸಂಘದ ಪರವಾ[ಗಿ] ಕೋಡಿಹಳ್ಳಿ ಚಂದ್ರಶೇಖರ್‌ರವರು ಮತ[್ತು] ಮತ್ತೊಂದು ಬಣದ ಪರವಾಗಿ ಚು[ಕ್ಕಿ] ನಂಜುಂಡಸ್ವಾಮಿಯವರು ಹಲವು ರೈತರ ಸಭೆಯಲ್ಲಿ ಮಾತನಾಡಿದ್ದಾರೆ. ಚುಕ್ಕಿಯವರ[ು] ರಾಜ್ಯವನ್ನು 'ಬಿ.ಟಿ. ಮುಕ್ತ ರಾಜ್ಯ'ವನ್ನಾ[ಗಿ] ಘೋಷಿಸಬೇಕು ಎಂದು ಒತ್ತಾಯಿಸಿದರು. ಈ ವಿಷಯದ ಬಗೆಗೆ ಪ್ರತಿಕ್ರಿಯಿಸಿದ ಬಯ್ಯಾರೆಡ್ಡಿಯವರು ಆಧುನಿಕ ತಂತ್ರಜ್ಞಾನದ ಪ್ರಯೋಜನವನ್ನು ಕೃಷಿಯಲ್ಲಿ ಅಳವಡಿಸಲು[,] ಅದರ ಲಾಭ ಪಡೆದುಕೊಳ್ಳಲು ಪ್ರಾಂ[ತ] ರೈತ ಸಂಘದ ವಿರೋಧವಿಲ್ಲ. ಆದರ[ೆ] ಆತಂಕಗಳು ವ್ಯಕ್ತವಾಗಿರುವ ಬಿ.ಟಿ. ಬದನೆ ಮುಂತಾದ ಪ್ರಶ್ನೆಗಳಲ್ಲಿ ವೈಜ್ಞಾನಿಕವಾದ ಸಂಶೋಧನೆಯನ್ನುಮತ್ತುಪ್ರಾಯೋಗಿಕವಾದ ಪರಿಶೀಲನೆ ಆಧರಿಸಿ ತೀರ್ಮಾನ ಕೈಗೊಳ್ಳಬೇಕು ಎಂದು ಪ್ರತಿಪಾದಿಸಿದರು[.] ಪ್ರಾಂತ ರೈತ ಸಂಘದ ಬೆಂಗಳೂರು ಜಿಲ್ಲಾ ಮುಖಂಡರಾದ ಚಂದ್ರತೇಜಸ್ವಿಯವರು ಸಭೆಯಲ್ಲಿ ಪಾಲ್ಗೊಂಡಿದ್ದರು.


ಸಭೆಯ ನಂತರ

ಸಭೆಯ ನಂತರ ರಾಜ್ಯ ಸರ್ಕಾರ ಒಂದು ಪ್ರಮುಖ ಎನ್ನಬಹುದಾದ ತೀರ್ಮಾನ ಕೈಗೊಂಡಿದೆ. ಅದು ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆಗೆ ಅವಕಾಶ ನೀಡುವ ತೀರ್ಮಾನ. ಇದು ರಾಜ್ಯ ಸರ್ಕಾರ ಸಾಗಬಹುದಾದ ನೀತಿ ನಿರ್ದೇಶನದ ಒಂದು ಸೂಚನೆ ಖಂಡಿತ ಹೌದು. ಹೀಗಾಗಿ ಜನಚಳುವಳಿಗಳು ವ್ಯಕ್ತಿಗತವಾಗಿ ಯಾವುದೇ ಮುಖಂಡರು, ಮುಖ್ಯಮಂತ್ರಿಗಳ ಮೇಲೆ ಭ್ರಮೆ ಇರಿಸಿಕೊಳ್ಳುವುದು ಸಾಧ್ಯವಿಲ್ಲ ಎಂದು ಇದು ಮತ್ತೆ ಮತ್ತೆ ಹೇಳುತ್ತಿದೆ. ಅವಕಾಶ ಇರುವಾಗ ಸಭೆಗಳಲ್ಲಿ ವಿಷಯ ಮಂಡಿಸುವುದು, ಅದರ ಜೊತೆಗೆ ಪ್ರಬಲ ಜನಾಂದೋಲನದ ಒತ್ತಡ ಹೇರುವುದು ಇದೊಂದೇ ದಾರಿ ಇರುವುದು.

ಜನಶಕ್ತಿ
ಕನ್ನಡ ವಾರಪತ್ರಿಕೆ

ಪೆಟ್ರೋಲ್-ಡೀಸೆಲ್ ಬೆಲೆಗಳು ಏರುತ್ತಿವೆ, ರೂಪಾಯಿ ಮೌಲ್ಯ ಕುಸಿಯುತ್ತಿದೆ

ರೂಪಾಯಿ ಮೌಲ್ಯ ತೀವ್ರವಾಗಿ ಕುಸಿಯುತ್ತಿದೆ. ಜೂನ್ 26 ರಂದು ಅದು ಮೊತ್ತ ಮೊದಲ ಬಾರಿಗೆ ಡಾಲರಿಗೆ 60ರೂ.ಗಿಂತಲೂ ಕೆಳಗಿಳಿದಿದೆ. ನಂತರ ತುಸು ಚೇತರಿಸಿಕೊಂಡರೂ ಈ ವಾರ ಮತ್ತೊಮ್ಮೆ ಆ ಗೆರೆಗಿಂತ ಕೆಳಗಿಳಿದಿದೆ. ರೂಪಾಯಿ ಬೆಲೆಯನ್ನೇ ಹಿಂಬಾಲಿಸುವ ಶೇರು ಸೂಚ್ಯಂಕವೂ ತೀವ್ರವಾಗಿ ಏರುಪೇರುಗೊಳ್ಳುತ್ತಿದೆ. ಇದು ನಮ್ಮ ದೇಶದ ಆರ್ಥಿಕಕ್ಕೆ ಅಪಾಯದ ಸೂಚನೆ ಎಂದು ಆರ್ಥಿಕ ತಜ್ಞರು ಎಚ್ಚರಿಸುತ್ತಿದ್ದಾರೆ.



ರೂಪಾಯಿ ಮೌಲ್ಯ ಇಳಿಕೆ ವಿದೇಶಿ ವಿನಿಮಯವನ್ನು ಬಳಸುವವರು, ಅಂ-ದರೆ ಆಮದುಗಾರರನ್ನು, ವಿದೇಶಗಳಿಗೆ ಹೋಗುವವರನ್ನು ಮಾತ್ರ ತಟ್ಟುವುದಲ್ಲ. ಅದು ಹಣದುಬ್ಬರದ ಮೇಲೆ ನೇರ ಮತ್ತು ಪರೋಕ್ಷ ಪರಿಣಾಮ ಬೀರಿ ಜನಸಾಮಾನ್ಯರನ್ನೂ ಬಹುವಾಗಿ ತಟ್ಟುತ್ತದೆ. ಆದರೆ ಯುಪಿಎ-2 ಸರಕಾರ ಈ ಬಗ್ಗೆ ಅಷ್ಟಾಗಿ ತಲೆ ಕೆಡಿಸಿಕೊಂಡಂತಿಲ್ಲ. ಅಮೆರಿಕಾದ ಆರ್ಥಿಕದಲ್ಲಿ ಚೇತರಿಕೆ ತರುವ ಪ್ರಯತ್ನಗಳನ್ನು ಅಲ್ಲಿಯ ಕೇಂದ್ರೀಯ ಬ್ಯಾಂಕ್ ಮಾಡುತ್ತಿರುವುದರಿಂದಾಗಿ ಹೂಡಿಕೆದಾರರ 'ಬಿಸಿ ಹಣ' ಮತ್ತೆ ಅಮೆರಿಕಾದತ್ತ ಹೊರಳುತ್ತಿದೆ; ವಿಶೇಷವಾಗಿ ಭಾರತವೂ ಸೇರಿದಂತೆ 'ಮೂಡಿ ಬರುತ್ತಿರುವ ಮಾರುಕಟ್ಟೆ'ಗಳಿಂದ. ಇದರಿಂದಾಗಿ ಡಾಲರಿಗೆ ಎದುರಾಗಿ ಎಲ್ಲ ಕರೆನ್ಸಿಗಳ ಬೆಲೆಗಳೂ ಇಳಿದಿವೆ. ಇದರ ಭಾಗವಾಗಿ ರೂಪಾಯಿಯ ಮೌಲ್ಯವೂ ಇಳಿದಿದೆಯಷ್ಟೇ ಎಂಬುದು ಹಣಕಾಸು ಮಂತ್ರಾಲಯದ ಸಮಜಾಯಿಷಿ.


ಆದರೆ ಇದು ಪೂರ್ಣ ಸತ್ಯವಲ್ಲ ಎನ್ನುತ್ತಾರೆ ಆರ್ಥಿಕ ತಜ್ಞರು. ಏಕೆಂದರೆ ರೂಪಾಯಿ ಮೌಲ್ಯ ಅಮೆರಿಕಾದ ಕರೆನ್ಸಿ ಧೋರಣೆ ಬಹಳ ಸಡಿಲವಾಗಿದ್ದಾಗಲೂ ಇಳಿಯುತ್ತಿತ್ತು. ಕಳೆದ ಎರಡು ವರ್ಷಗಳಿಂದ ಈ ಇಳಿಕೆಯ ಪ್ರವೃತ್ತಿ ಕಾಣುತ್ತಿದೆ, ಈಚೆಗೆ ಅದು ತೀವ್ರಗೊಂಡಿದೆಯಷ್ಟೇ. ಅಲ್ಲದೆ ಅದರ ಮೌಲ್ಯ ಇಳಿಯುತ್ತಿರುವುದು ಡಾಲರಿಗೆ ಎದುರಾಗಿ ಮಾತ್ರವಲ್ಲ, ಬ್ರಿಟಿಶ್ ಪೌಂಡ್ ಮತ್ತು ಜಪಾನೀ ಯೆನ್‌ನ ಎದುರು ಅದು ಇನ್ನಷ್ಟು ಮೌಲ್ಯ ಕಳಕೊಳ್ಳುತ್ತಿದೆ. ಅದರ ಪ್ರಮಾಣ ಬೇರೆ 'ಮೂಡಿ ಬರುತ್ತಿರುವ ಮಾರುಕಟ್ಟೆ'ಗಳ ದೇಶಗಳಿಗೆ ಮತ್ತು ಏಶ್ಯಾದ ದೇಶಗಳಿಗೆ ಹೋಲಿಸಿದಾಗಲೂ ಬಹಳ ಹೆಚ್ಚಿದೆ ಎಂಬ ಸಂಗತಿಯತ್ತ ಗಮನ ಸೆಳೆಯುತ್ತಾರೆ ಪ್ರಸಿದ್ಧ ಆರ್ಥಿಕ ತಜ್ಞೆ ಡಾ. ಜಯತಿ ಘೋಷ್.

ಈ ಇಳಿಕೆಗೆ ಕಾರಣವೇನು? ಯುಪಿಎ-2 ಸರಕಾರದ ಹಣಕಾಸು ಮಂತ್ರಾಲಯ ಏನೇ ಹೇಳಲಿ. ಇದಕ್ಕೆ ಅಮೆರಿಕಾದ ಕರೆನ್ಸಿ ಧೋರಣೆ ಅಥವ ಜಾಗತಿಕ ಆರ್ಥಿಕ ಶಕ್ತಿಗಳು ಕಾರಣವಲ್ಲ. ಇದು ಆಂತರಿಕ ಹಣಕಾಸು ನಿರ್ವಹಣೆಯಲ್ಲಿನ ವಿಫಲತೆಯೇ ಕಾರಣ ಎನ್ನುತ್ತಾರೆ ಜಯತಿ ಘೋಷ್‌ರವರು. ವ್ಯಾಪಾರ ಕೊರತೆ, ಅಂದರೆ ರಫ್ತಿಗಿಂತ ಆಮದಿನ ಪ್ರಮಾಣ ವಿಪರೀತ ಹೆಚ್ಚಿದೆ; ಜಿಡಿಪಿಯ 7ಶೇ.ದಷ್ಟಿದೆ.ಇದು ಬಹಳ ಹೆಚ್ಚು, ಆಮದು ವಿಪರೀತ ಹೆಚ್ಚಲು ಒಂದು ಕಾರಣ ಚಿನ್ನದ ಆಮದಿನಲ್ಲಿ ವಿಪರೀತ ಹೆಚ್ಚಳ. ಇದು ಯುಪಿಎ-2 ಸರಕಾರ-ಕ್ಕೆ ಗೊತ್ತಿದ್ದರೂ ಅದರ ಮೇಲೆ ಆಮದು ಸುಂಕ ಹಾಕಲು ಹಿಂಜರಿಯುತ್ತಲೇ ಬಂತು. ಈಗ ಬಹಳ ವಿಳಂಬವಾಗಿ, ಅದೂ ಬಹಳ ಅಲ್ಪ ಪ್ರಮಾಣದ ಸುಂಕವನ್ನು ಹಾಕಲಾಗಿದೆ.

ಅಲ್ಲದೆ ಮತ್ತೆ-ಮತ್ತೆ ಪೆಟ್ರೋಲ್, ಡೀಸೆಲ್‌ಗಳ ದರ ಏರಿಕೆಗಳು ಈ ಸಮಸ್ಯೆಯ ಬೆಂಕಿಗೆ ತುಪ್ಪ ಸುರಿಯುತ್ತಿವೆ. ಒಂದೇ ತಿಂಗಳೊಳಗೆ ಮೂರು ಬಾರಿ ಪೆಟ್ರೋಲ್ ದರಗಳನ್ನು ಏರಿಸಲಾಗಿದೆ. ಹೆಚ್ಚಳ 5ರೂ.ಗಳಿಗಿಂತಲೂ ಹೆಚ್ಚು, ಮಾಸಿಕ ಡೀಸೆಲ್ ದರ ಏರಿಕೆಯಂತೂ ನಡೆದೇ ಇದೆ. ಇದಕ್ಕೆ ಸಾರ್ವತ್ರಿಕವಾಗಿ ಪ್ರತಿಭಟನೆಗಳು ವ್ಯಕ್ತವಾದರೂ ಸರಕಾರ ತನ್ನ ದಿವಾಳಿಕೋರ ನೀತಿಗಳನ್ನೇ ಮುಂದುವರೆಸುವ ಹವಣಿಕೆಯಲ್ಲಿದೆ. ಯುಪಿಎ-2 ಸರಕಾರ ತನ್ನ ದೋಷಪೂರ್ಣ ಆರ್ಥಿಕ ನೀತಿಗಳಿಗೆ ಜನಸಾಮಾನ್ಯರು ಬೆಲೆ ತೆರುವಂತೆ ಮಾಡುತ್ತಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೋ ಖಂಡಿಸಿದೆ.

ಅಮೆರಿಕಾಕ್ಕೆ ಈ ಮಟ್ಟದ 'ಜೀ ಹುಜೂರ್'

ಅಮೆರಿಕಾದ ಇಂಟರ್ನೆಟ್ ಬೇಹುಗಾರಿಕೆ ಈಗ ಮತ್ತೊಮ್ಮೆ ಸುದ್ದಿಯಲ್ಲಿದೆ. ಈ ಬೇಹುಗಾರಿಕೆ ಯೋಜನೆಯಲ್ಲಿ ಗುಪ್ತ ಮಾಹಿತಿಗಳನ್ನು ಅದು ದೇಶವಾರಾಗಿ ಸಂಗ್ರಹಿಸುತ್ತಿದೆ ಎಂದು ಪ್ರಕಟಿಸಿದ್ದ ಲಂಡನ್‌ನ ಪ್ರಸಿದ್ಧ ದೈನಿಕ 'ಗಾರ್ಡಿಯನ್'ನಲ್ಲಿ, ಅದು ಗುರಿಯಿಟ್ಟ ದೇಶಗಳಲ್ಲಿ ಭಾರತ ಐದನೇ ಸ್ಥಾನದಲ್ಲಿದೆ ಎಂಬ ಸುದ್ದಿ, ಜತೆಗೆ ಮೊದಲ ಐದು ಸ್ಥಾನಗಳಲ್ಲಿ ಅದರ ಪ್ರಬಲ ಪ್ರತಿಸ್ಪರ್ಧಿಗಳಾದ ಚೀನಾ ಮತ್ತು ರಶ್ಯಾ



ಇಲ್ಲ, ಆದರೆ ಭಾರತ ಇದೆಯೆಂಬುದು ಬಯಲಾಗಿತ್ತು. ಈಗ ವಾಶಿಂಗ್ಟನ್‌ನಲ್ಲಿರುವ ಭಾರತದ ರಾಯಭಾರ ಕಚೇರಿಯೂ ಇದಕ್ಕೆ ತುತ್ತಾಗಿದೆ ಎಂಬ ಸಂಗತಿ ಬಯಲಿಗೆ ಬಂದಿದೆ. ಒಟ್ಟು 37 ದೇಶಗಳ ಪೈಕಿ ಭಾರತದ ಹೆಸರೂ ಇದೆ.

ಮೊದಲ ಸುದ್ದಿ ಪ್ರಕಟವಾದಾಗ ಯುಪಿಎ-2 ಸರಕಾರದ ವಿದೇಶಾಂಗ ಸಚಿವಾಲಯದ ವಕ್ತಾರರು ಅದನ್ನು ಬಲವಾಗಿ ಪ್ರತಿಭಟಿಸದಿದ್ದರೂ ಗೋಪ್ಯತೆಯ ಹಕ್ಕಿನ ಉಲ್ಲಂಘನೆ ನಮಗೆ ಒಪ್ಪಿಗೆಯಿಲ್ಲ ಎಂದು ಗೊಣಗು ದನಿಯಲ್ಲಿ ಉಸುರಿದ್ದರು. ಈಗ ನಮ್ಮ ರಾಯಭಾರಿ ಕಚೇರಿಯೂ ಇಂತಹ ಉಲ್ಲಂಘನೆಗೆ ಗುರಿಯಾಗಿದೆ ಎಂದು ಬಯಲಾದಾಗ ಸ್ವತಃ ವಿದೇಶಾಂಗ ಮಂತ್ರಿಗಳಿಗೆ ಆ ಬಗ್ಗೆ ಆತಂಕವೇ ಇಲ್ಲ ಎಂಬುದೂ ಬಯಲಾಗಿದೆ. ಬದಲಿಗೆ ಅವರು ಅದನ್ನು ಸಮರ್ಥಿಸಿಕೊಂಡಿದ್ದಾರೆ! ಅದು ಬೇಹುಗಾರಿಕೆಯಲ್ಲ, ಬರುವ ಕರೆಗಳು ಯಾವ ವಿಧದವು ಎಂಬ ಕಂಪ್ಯೂಟರ್ ಅಧ್ಯಯನ ಮತ್ತು ವಿಶ್ಲೇಷಣೆಯಷ್ಟೇ ಎಂದಿದ್ದಾರೆ! ಇದೇ ವೇಳೆಗೆ ಭಾರತಕ್ಕೆ ಭೇಟಿ ನೀಡಿ ಮರಳಿರುವ ಅಮೆರಿಕಾದ ವಿದೇಶಾಂಗ ಕಾರ್ಯದರ್ಶಿಗಳು ಈ ಭೇಟಿಯ ಬಗ್ಗೆ 'ತೃಪ್ತಿ' ವ್ಯಕ್ತ ಪಡಿಸುತ್ತ ಭಾರತವು ಅಮೆರಿಕಾದ ಒಂದು ಮಹತ್ವದ ಆಯಕಟ್ಟಿನ ಭಾಗೀದಾರ ಎಂದು ಪ್ರಶಂಸಿಸಿದ್ದಾರೆ. ಇದು

ಪುಟ 15 ಕ್ಕೆ

ನೈಸರ್ಗಿಕ ಅನಿಲ ಬೆಲೆ ದುಪ್ಪಟ್ಟು ತರ್ಕಹೀನ

ಕೊನೆಗೂ ಯುಪಿಎ-2 ಸರಕಾರ ಎಲ್ಲ ತರ್ಕಬದ್ಧ ವಿರೋಧಗಳನ್ನು ಬದಿಗೆ ತಳ್ಳಿ ನೈಸರ್ಗಿಕ ಅನಿಲದ ಬೆಲೆಯನ್ನು ದ್ವಿಗುಣಗೊಳಿಸಿದೆ- ಒಂದು ಎಂಎಂಬಿಟಿಯುಗೆ 4.2 ಡಾಲರುಗಳಿಂದ 8 ಡಾಲರುಗಳಿಗೆ ಏರಿಸಿ ಒಂದೆಡೆ ರಸಗೊಬ್ಬರ ಮತ್ತು ವಿದ್ಯುತ್ ಉತ್ಪಾದಕರ ಮತ್ತು ಆಮೂಲಕ ಅವುಗಳ ಬಳಕೆದಾರರ ಹೊರೆಯನ್ನೂ ದ್ವಿಗುಣಗೊಳಿಸಿದರೆ, ಇನ್ನೊಂದೆಡೆ ರಿಲಯಂಸ್‌ನಂತಹ ಖಾಸಗಿ ದೈತ್ಯ ಕಾರ್ಪೊರೇಟ್ ಕುಳಗಳನ್ನು ಸಂತೃಪ್ತಗೊಳಿಸಿದೆ. ಹಿಂದಿನ ಸಂಚಿಕೆಯಲ್ಲಿ ಹೇಳಿರುವಂತೆ ರಂಗರಾಜನ್ ಸಮಿತಿಯ ಶಿಫಾರಸುಗಳು ಅಸಂಬದ್ಧವೆಂಬ ಅಭಿಪ್ರಾಯ ವ್ಯಾಪಕವಾಗಿದೆ. ಸ್ವತಃ ಯುಪಿಎ ಭಾಗೀದಾರ ಪಕ್ಷಗಳು ಮತ್ತು ಸಂಪುಟದೊಳಗಿನ ಸಹಯೋಗಿಗಳಿಗೂ ಈ ಬಗ್ಗೆ ಬಲವಾದ ಸಂದೇಹಗಳಿದ್ದವು.

ಇದು ಯುಪಿಎ-2 ಸರಕಾರದ ನಿರ್ಣಯವಲ್ಲ, ರಿಲಯಂಸ್‌ನಿಂದ ರಿಲಯಂಸ್‌ಗಾಗಿ ರಿಲಯಂಸ್‌ನ ನಿರ್ಧಾರ ಎಂದು ಭಾರತ ಸರಕಾರದ ವಿದ್ಯುತ್ ಮತ್ತು ಇಂಧನ ಇಲಾಖೆಯ ಮಾಜಿ ಪ್ರಧಾನ ಸಲಹೆಗಾರರು ವರ್ಣಿಸಿದ್ದಾರೆ. ಈ ಏರಿಕೆಗಾಗಿ ಕೊಟ್ಟಿರುವ ಕಾರಣಗಳೆಲ್ಲ ಶುದ್ಧ ಪೊಳ್ಳು ಎಂದಿರುವ ಅವರು 4.2, 6.4 ಮುಂತಾದ ಅಂಕಿಗಳು ಜಗತ್ತಿನಲ್ಲಿ ಎಲ್ಲೂ ಸಾಬೀತಾಗದ ರಿಲಯಂಸ್ ಅಂಕಿಗಳಷ್ಟೇ, ಸಾಮಾನ್ಯ ಭಾಷೆಯಲ್ಲಿ ಹೇಳುವುದಾದರೆ ಇದು 'ಚೀಟಿಂಗ್-ಡಬಲ್ ಚೀಟಿಂಗ್' ಎಂದಿದ್ದಾರೆ.

ಕಳೆದ ಆರು ವರ್ಷಗಳಿಂದ ಈ ಬಗ್ಗೆ ಸತತವಾಗಿ ಯುಪಿಎ ಸರಕಾರದ, ಪ್ರಧಾನ ಮಂತ್ರಿಗಳ ಗಮನವನ್ನು ಸೆಳೆದಿರುವ ಸಿಪಿಐ(ಎಂ) ಸಂಸತ್ ಸದಸ್ಯ ತಪನ್ ಸೇನ್ ಇದು ಕಾಂಟ್ರಾಕ್ಟರುಗಳ ಕಾನೂನುಬಾಹಿರ ಚಟುವಟಿಕೆಗಳಿಗೆ ಕಾನೂನಿನ ಮೊಹರು ಒತ್ತುವ ಕ್ರಮ ಎಂದಿದ್ದಾರೆ. ಅವರು ಪ್ರಧಾನ ಮಂತ್ರಿಗಳಿಗೆ ಬರೆದಿರುವ ಇನ್ನೊಂದು ಪತ್ರದಲ್ಲಿ ದೇಶದ ಸೊತ್ತಾದ ಈ ನೈಸರ್ಗಿಕ ಸಂಪನ್ಮೂಲ ಕುರಿತಂತೆ ಕೇವಲ ಕಾಂಟ್ರಾಕ್ಟರುಗಳಿಗೆ ಪಕ್ಷಪಾತ ತೋರುವ ಪ್ರವೃತ್ತಿಯತ್ತ ತಾನು ಕಳೆದ ಆರು ವರ್ಷಗಳಿಂದ ಹೇಳುತ್ತಾ ಬಂದಿರುವುದನ್ನು ನೆನಪಿಸಿದ್ದಾರೆ. ನೈಸರ್ಗಿಕ ಅನಿಲದಂತಹ ಒಂದು ನೈಸರ್ಗಿಕ ಸಂಪನ್ಮೂಲವನ್ನು ಈ ರೀತಿ ಕಾರ್ಪೊರೇಟ್‌ಗಳಿಗೆ ಸೂಪರ್ ಲಾಭಗಳನ್ನು ಏರಿಸಿಕೊಳ್ಳಲಿಕ್ಕಾಗಿ ಒಪ್ಪಿಸಿ ಬಿಡಲು ಸಾಧ್ಯವಿಲ್ಲ. ದೇಶದ ಹಿತಗಳಿಗೆ ಮಾರಕವಾದ ಈ ನಿರ್ಣಯವನ್ನು ಅಮಾನತ್ತಿನಲ್ಲಿಡಬೇಕು. ಸಂಸತ್ತಿನ ಎರಡೂ ಸದನಗಳಲ್ಲಿ ಈ ಬಗ್ಗೆ ಆಮೂಲಾಗ್ರ ಚರ್ಚೆ ನಡೆಯಬೇಕೆಂದು ಅವರು ಆಗ್ರಹಿಸಿದ್ದಾರೆ.

ಸಿಪಿಐ(ಎಂ) ಕೂಡ ಇದೇ ಆಗ್ರಹವನ್ನು ಮುಂದಿಟ್ಟಿದೆ. ಕೆಜಿ ಬೇಸಿನ್‌ನಲ್ಲಿ ನೈಸರ್ಗಿಕ ಅನಿಲದ ಉತ್ಪಾದನೆಯನ್ನು ಬೇಕೆಂದೇ ಕಡಿತ ಮಾಡಿ ದೇಶವನ್ನು ಬ್ಲಾಕ್‌ಮೇಲ್ ಮಾಡುತ್ತಾ ಬಂದಿರುವ ರಿಲಯಂಸ್ ಕಂಪನಿಗೆ ಮಾತ್ರವೇ ಇದೊಂದು ಫಲದಾಯಕ ನಿರ್ಧಾರ. ಒಂದು ಅಂದಾಜಿನ ಪ್ರಕಾರ ಒಂದು ಡಾಲರ್ ಬೆಲೆಯೇರಿಕೆಯಿಂದ ಈ ಕಂಪನಿಗೆ ಕನಿಷ್ಠ 7.4 ಕೋಟಿ ಡಾಲರುಗಳಷ್ಟು ಲಾಭ ಹೆಚ್ಚುತ್ತದೆ. ಅಂ-ದರೆ ಈಗಿನ ನಾಲ್ಕು ಡಾಲರ್ ಹೆಚ್ಚಿಸುವ ನಿರ್ಣಯದಿಂದ ಅದಕ್ಕೆ ಸುಮಾರು 30 ಕೋಟಿ ಡಾಲರುಗಳ ಹೆಚ್ಚುವರಿ ಲಾಭ ದಕ್ಕುತ್ತದೆ. ಪಡಿತರ ವ್ಯವಸ್ಥೆಯನ್ನು ಸಾರ್ವತ್ರೀಕರಿಸಿ ದೇಶದ 'ಆಮ್ ಆದ್ಮಿ'ಯ ಬದುಕನ್ನು ಉಳಿಸಲು ತನ್ನ ಬಳಿ ಸಬ್ಸಿಡಿ ನೀಡಲು ಹಣವಿಲ್ಲ ಎನ್ನುವ ಸರಕಾರ ಈ ಅತಿ ಶ್ರೀಮಂತ ಕಾರ್ಪೊರೇಟ್‌ಗೆ ಇಷ್ಟೊಂದು ಬೃಹತ್ ಪ್ರಮಾಣದ ಹೆಚ್ಚುವರಿ ಲಾಭ ಒದಗಿಸಲು ಮುಂದಿನ ಐದು ವರ್ಷಗಳಲ್ಲಿ 71,250 ಕೋಟಿ ರೂ.ಗಳ ಸಬ್ಸಿಡಿ ನೀಡಲು ಸಿದ್ಧವಿದೆ ಎಂದು ಬಲವಾಗಿ ಟೀಕಿಸಿದೆ.

ಜಗದಗಲ

ಶರತ್‌ಚಂದ್ರ

ಇನ್ನೊಬ್ಬ ಸರ್ವಾಧಿಕಾರಿಯನ್ನು ಇಳಿಸಿದ ಈಜಿಪ್ಟ್ ಜನ

ಈಜಿಪ್ಟಿನ ಜನ ಇನ್ನೊಮ್ಮೆ ತಮ್ಮ ಶಕ್ತಿ ಪ್ರದರ್ಶಿಸಿದ್ದಾರೆ. ಇನ್ನೊಬ್ಬ ಸರ್ವಾಧಿಕಾರಿಯನ್ನು ಅಧಿಕಾರದಿಂದ ಕೆಳಗಿಳಿಸಿದ್ದಾರೆ. ಈಗಾಗಲೇಅಧ್ಯಕ್ಷ ಮೋರ್ಸಿಯ ಸರ್ವಾಧಿಕಾರಿ ನೀತಿಗಳನ್ನು ಜನ ವಿರೊಧಿಸಿ ಬೃಹತ್ ಪ್ರತಿಭಟನೆಗಳನ್ನು ನಡೆಸಿದ್ದರು. ಆತನ ರಾಜೀನಾಮೆಗೆ ಒತ್ತಾಯಿಸಿ ಎರಡುವರೆ ಕೋಟಿ ಜನ ಸಹಿ ಸಂಗ್ರಹವಾಗಿತ್ತು. ಮೋರ್ಸಿ ಮತ್ತು 'ಮುಸ್ಲಿಂ ಬ್ರದರ್‌ಹುಡ್' ರಾಜಕೀಯ ಪಕ್ಷದ ಎಕೆಪಿ ಪಕ್ಷ ಚುನಾವಣೆ ಗೆದ್ದಿದ್ದು ಚುನಾವಣಾ ಅಕ್ರಮಗಳಿಂದ ಮತ್ತು ಮೋಸದಿಂದ. ಇಸ್ಲಾಮಿಕ್ ಸಂವಿಧಾನವನ್ನು ಜನರ ವಿರೋಧವನ್ನು ಲೆಕ್ಕಿಸದೆ ಹೇರಲಾಗಿದೆ. ಮಹಿಳೆಯರ, ಅಲ್ಪಸಂಖ್ಯಾತರ, ಕಾರ್ಮಿಕರ ಮಾನವ ಹಕ್ಕುಗಳ ಮೇಲೆ ದಿನೇ ದಿನೇ ದಾಳಿ ಮಾಡಲಾಗುತ್ತಿದೆ. ಮೋರ್ಸಿ ಸರ್ಕಾರ ಮುಬಾರಕ್ ಸರ್ಕಾರಕ್ಕಿಂತಲೂ ಹೆಚ್ಚು ಸರ್ವಾಧಿಕಾರಿ ದರ್ಪ ತೋರಿಸುತ್ತಿದೆ, ಎಂಬುದು ಸಾಮಾನ್ಯ ಜನರ ಆಕ್ರೋಶಕ್ಕೆ ಕಾರಣವಾಗಿತ್ತು. ಸರ್ಕಾರಿ ವಿರೋಧಿ ಪ್ರದರ್ಶನಗಳ ಮೇಲೆ ಸರ್ಕಾರಿ ಮತ್ತು ಆಳುವ ಪಕ್ಷದ ಬಾಡಿಗೆ ಕಾರ್ಯಕರ್ತರು ಸಶಸ್ತ್ರ ದಾಳಿ ಮಾಡುತ್ತಿದ್ದರು. ಆಳುವ ಪಕ್ಷ ಕೋಮು ಘರ್ಷಣೆ ಪ್ರಚೋದಿಸಲು ಪ್ರಯತ್ನಿಸಿತು.

ಜೂನ್ ಕೊನೆಯ ದಿನಗಳಲ್ಲಿ ಮೋರ್ಸಿ ರಾಜೀನಾಮೆಗೆ ಒತ್ತಾಯಿಸಿ ದೇಶದಾದ್ಯಂತ ಬೃಹತ್ ಪ್ರದರ್ಶನಗಳು ನಡೆದವು. ಈಜಿಪ್ಟಿನ ಕಾಲು ಭಾಗ ಜನ ಬೀದಿಗಿಳಿದಿದ್ದಾರೆ ಎಂದು ಪೋಲಿಸ್ ಮೂಲಗಳೇ ಹೇಳಿದ್ದವು. 'ತಹ್ರೀರ್ ಚೌಕ' ಮನಃ ರಣರಂಗವಾಯಿತು. ಮನಃ ಯುವಶಕ್ತಿಯ ಪ್ರದರ್ಶನವಾಯಿತು. ಉದಾರವಾದಿಗಳು, ಎಡ ಶಕ್ತಿಗಳು, ಸೆಕ್ಯುಲರ್ ಶಕ್ತಿಗಳು, ಅಲ್ಪಸಂಖ್ಯಾತರು, ಮಾನವ ಹಕ್ಕು ಪ್ರತಿಪಾದಕರು ಒಕ್ಕೊರಲಿನಿಂದ ಮೋರ್ಸಿ ತಕ್ಷಣ ತೊಲಗಬೇಕು, ಆ ವರೆಗೂ 'ತಹ್ರೀರ್ ಚೌಕ' ಬಿಡುವುದಿಲ್ಲ ಎಂದು ಸವಾಲು ಹಾಕಿದರು. ವಿರೋಧ ಶಕ್ತಿಗಳ ಈ ಒಕ್ಕೊರಲಿನ ಬೇಡಿ-ಕೆ ಮನ್ನಿಸಿ ಕನಿಷ್ಟ ಮಾತುಕತೆಗೆ ಕರೆಯುವ ಬದಲು, ಮೋರ್ಸಿ ಇದು 'ಆಂತರಿಕ ಯುದ್ಧ'ಕ್ಕೆ ಎಡೆ ಮಾಡಿಕೊಡಬಹುದು ಎಂದು ಪದೇ ಪದೇ ಎಚ್ಚರಿಸಿದ್ದರು. 'ಮುಸ್ಲಿಂ ಬ್ರದರ್‌ಹುಡ್' ಕಾರ್ಯಕರ್ತರನ್ನು ಬೀದಿ ಕಾಳಗಕ್ಕೆ ಇಳಿಸಲಾಯಿತು. ಆದರೆ ಮೋರ್ಸಿ ವಿರೋಧಿ ರಂಗ ಅಣಿ ನೆರೆಸಿದ ಲಕ್ಷಾಂತರ ಜನರ ಆಕ್ರೋಶದ ಮುಂದೆ ಕೆಲವು ಸಾವಿರ ಇಸ್ಲಾಮಿಕ್ ಕಾರ್ಯಕರ್ತರ ಆಟ ನಡೆಯಲಿಲ್ಲ. ಸರ್ಕಾರಿ ಮತ್ತು ಆಳುವ ಪಕ್ಷದ ಬೆಂಬಲವಿದ್ದರೂ ಅವರು ಹಿಮ್ಮೆಟ್ಟಬೇಕಾಯಿತು.

ಬೀದಿಯಲ್ಲಿ ಜನರ ಆಕ್ರೋಶ ಕಂಡ ಮಿಲಿಟರಿ ಅಧ್ಯಕ್ಷ ಮೋರ್ಸಿ ಮತ್ತು ಎಲ್ಲಾ ರಾಜಕೀಯ ಪಕ್ಷಗಳು/ ಚಳುವಳಿಗಳು/ ಸಂಘಟನೆಗಳ ಸಭೆ ಕರೆದು ಒಂದು ಒಪ್ಪಂದಕ್ಕೆ ಬರುವಂತೆ 48 ಗಂಟೆಗಳ ಗಡುವು ನೀಡಿತು.



ಆಳುವ ಪಕ್ಷ ಈ ಸಭೆಗೆ ಬರಲು ಒಪ್ಪಲಿಲ್ಲ. 'ತಹ್ರೀರ್ ಚೌಕ' ಮತ್ತು ದೇಶದ ಹಲವಾರು ಪಟ್ಟಣಗಳ ಪ್ರಮುಖ ಚೌಕಗಳಿಂದ ಜನ ಮೋರ್ಸಿ ತೊಲಗುವವರೆಗೆ ಕದಲುವುದಿಲ್ಲ ಎಂದರು. ಈ ಸನ್ನಿವೇಶ ಬಳಸಿ ಅದ-ಧ್ಯಕ್ಷ ಮೋರ್ಸಿ ಮತ್ತು ಅವರ ಸರ್ಕಾರವನ್ನು ಮಿಲಿಟರಿ ಜನರಲ್ ಸಿಸಿ ರದ್ದು ಮಾಡಿದರು. ಮೋರ್ಸಿ ಸರ್ಕಾರ ಜಾರಿಗೆ ತಂದಿದ್ದ ಸಂವಿಧಾನವನ್ನೂ ಅಮಾನತ್ತಿನಲ್ಲಿ ಇಡಲಾಗಿದೆ. ಮೋರ್ಸಿ ಅವರನ್ನು ಗೃಹಬಂಧನದಲ್ಲಿ ಇಡಲಾಗಿದೆ. ಆಳುವ ಪಕ್ಷದ ಹಲವು ನಾಯಕರು ಕಾರ್ಯಕರ್ತರನ್ನು ಬಂಧಿಸಲಾಗಿದೆ. ಆಳುವ ಪಕ್ಷದ ಟಿವಿ ಮುಂತಾದ ಮಾಧ್ಯಮಗಳ ಮೇಲೆ ನಿರ್ಬಂಧ ಹೇರಲಾಗಿದೆ.



ಆದರೆ ಇದನ್ನು ಮಿಲಿಟರಿ ಕ್ಷಿಪ್ರಕ್ರಾಂತಿ ಎಂದು ಕರೆಯುವ ಹಾಗಿಲ್ಲ. ಯಾಕೆಂದರೆ ಮಿಲಿಟರಿ ನೇರವಾಗಿ ಅಧಿಕಾರ ವಹಿಸಿಕೊಂಡಿಲ್ಲ. ಬದಲಾಗಿ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶ ಅದ್ಲಿ ಅಲ್-ಮನ್ಸೂರ್ ಅವರನ್ನು ಮಧ್ಯಂತರ ಅಧ್ಯಕ್ಷರಾಗಿ ನೇಮಿಸಲಾಗಿದೆ. ಇದಕ್ಕೆ (ಮಾಜಿ) ಆಳುವ ಪಕ್ಷ ಎಕೆಪಿ ಬಿಟ್ಟು ಎಲ್ಲರ ಒಮ್ಮತವಿತ್ತು. ಅಧ್ಯಕ್ಷ ಮೋರ್ಸಿ ಅವರ ಸರ್ಕಾರ ರದ್ದು ಮಾಡಿದ ಮತ್ತು ಹೊಸ ಸರ್ಕಾರದ ನೇಮಕಾತಿ ಘೋಷಿಸಿದ ಪತ್ರಿಕಾ ಸಮ್ಮೇಳನದಲ್ಲೂ ಎಲ್ಲಾ ರಾಜಕೀಯ ಶಕ್ತಿಗಳ ಪ್ರತಿನಿಧಿಗಳು ಮತ್ತು ಪ್ರಮುಖ ಧಾರ್ಮಿಕ ನಾಯಕರೂ ಹಾಜರಿದ್ದರು. ಇದಲ್ಲದೆ ಹೊಸ ಸಂವಿಧಾನ ರೂಪಿಸಲು ಮತ್ತು ಅಧ್ಯಕ್ಷೀಯ ಹಾಗೂ ಪಾರ್ಲಿಮೆಂಟರಿ ಚುನಾವಣೆ ನಡೆಸಲು ಎಲ್ಲರ ಸಲಹೆ ತೆಗೆದುಕೊಂಡು ವೇಳಾ ಪಟ್ಟಿಯನ್ನು ಸಿದ್ಧಪಡಿಸುವುದಾಗಿ ಹೇಳಲಾಗಿದೆ.

ಮಿಲಿಟರಿ 'ಆಂತರಿಕ ಯುದ್ಧ' ತಡೆಯಲು ಮಧ್ಯಪ್ರವೇಶ ಮಾಡಿದ್ದರೂ, ಅದಕ್ಕೆ ರಾಜಕೀಯ ಪಾತ್ರ ಹಾಗೂ ಅವಕಾಶ ಮನಃ ಸಿಕ್ಕಿದೆ ಎಂಬುದು ಆತಂಕಕಾರಿ ವಿಷಯವೇ. ಆದರೂ, ಒಟ್ಟಾರೆಯಾಗಿ ಇದು ಈಜಿಪ್ಟಿನಲ್ಲಿ ನೈಜ ಪ್ರಜಾಸತ್ತೆಯನ್ನು ಸ್ಥಾಪಿಸುವ ನಿಟ್ಟಿನಲ್ಲಿ ಜನತೆಯ ವಿಜಯ ಎಂದೇ ಹೇಳಬೇಕು. ಅದರಲ್ಲೂ ಈಜಿಪ್ಟಿನ ಮಿಲಿಟರಿಗೆ ಅಮೆರಿಕದ ಮಿಲಿಟರಿ ಮತ್ತು ಸರ್ಕಾರದ ಜತೆ ಇರ ನಿಕಟ ಸಂಬಂಧವೇ ಈ ಆತಂಕಕ್ಕೆ ಕಾರ ಅಮೆರಿಕ ಮತ್ತು ಯುರೋ ಶಕ್ತಿರಾಷ್ಟ್ರಗ ಈ ಕ್ಷಿಪ್ರ ಬದಲಾವಣೆ ಆಶ್ಚರ್ಯ ಮ ಶಾಕ್ ಉಂಟು ಮಾಡಿದೆ. ಇದು ಈಜಿ ಬೆಳವಣಿಗೆಗಳ ಬಗ್ಗೆ ಅವರ ಹೇಳಿಕೆಯ ಸ್ಪಷ್ಟ. ಆದರೆ ಈಜಿಪ್ಟಿನ ಬೆಳವಣಿಗೆಗಳ 'ಮಿಲಿಟರಿ ಕ್ಷಿಪ್ರಕ್ರಾಂತಿ' ಎಂದು ಕರೆದಿ ಆದರೆ ನಾಗರಿಕ ಶಕ್ತಿಗಳಿಗೆ ಅಧಿಕ ವರ್ಗಾಯಿಸಿ ಪ್ರಜಾಸತ್ತೆ ಸ್ಥಾಪನೆಯ ಮುಂದುವರೆಯಬೇಕೆಂದು ಕರೆ ಕೊಟ್ಟಿವೆ.

ತುರ್ಕಿ, ಈಜಿಪ್ಟ್ ಮತ್ತು ಇತರ ಹ ದೇಶಗಳಲ್ಲಿ 'ಪ್ರಜಾಸತ್ತಾತ್ಮಕ ಶಕ್ತಿ'ಗಳ ಹದ್ದು ಬಸ್ತಿನಲ್ಲಿಡಲು, ಮಿಲಿಟರಿ ಬದ ಇಸ್ಲಾಮಿಕ್ ಶಕ್ತಿಗಳು ಉತ್ತಮ ಸಂಗಾತಿಗ ಎಂದು ಅವರು ಮನಗಂಡಿದ್ದರು. ಆದ ರಿಂದ ತಮ್ಮ ತಂತ್ರ ಬದಲಾಯಿ ಇಸ್ಲಾಮಿಕ್ ಶಕ್ತಿಗಳೊಡನೆ ಒಡಂಬಡಿ ಮತ್ತು ಜಂಟಿ ಕಾರ್ಯಾಚರಣೆಯ ಆರಂಭಿಸಿದ್ದರು. ಈಜಿಪ್ಟಿನ ಜನತೆಯ ಕ್ಷಿಪ್ರ ಕಾರ್ಯಾಚರಣೆ ಅದಕ್ಕೆ ತೊಡಕಾಗಿ ಬದಲಾದ ಸನ್ನಿವೇಶದಲ್ಲಿ ಎಕೆಪಿ ಮ 'ಮುಸ್ಲಿಂ ಬ್ರದರ್‌ಹುಡ್' ಯಾವ ನಿಲು ತೆಗೆದುಕೊಳ್ಳುವುದು ಎಂಬುದರ ಮೇಲ ಈಜಿಪ್ಟಿನ ಪ್ರಜಾಸತ್ತೆಯತ್ತ ಮುನ್ನ ಅವಲಂಬಿಸಿದೆ. ಎಕೆಪಿ ತನಗೆ ಅಧಿಕಾ ಸಿಕ್ಕಿದಾಗ ಮಾಡಿದ ತಪ್ಪುಗಳನ್ನು ಅಥ ಮಾಡಿಕೊಂಡು, ಎಲ್ಲರನ್ನೂ ಒಳಗೊಳ್ಳ ಪ್ರಜಾಸತ್ತೆಯ ಚೌಕಟ್ಟಿನಲ್ಲಿ ಕೆಲಸ ಮಾಡ ನಿರ್ಧಾರ ಕೈಗೊಂಡರೆ ಅದಕ್ಕೂ ಪ್ರಜಾಸತ್ತೆ ಒಳಿತು. ಈಗಾಗ ಅದರ ತಪ್ಪುಗಳಿಂದಾ ತನ್ನ ಬೆಂಬಲಿಗರನು ಕಳೆದುಕೊಂಡಿರುವ ಸಾಧ್ಯ ಇದೆ. ಅದರ ಹುಳುಕುಗಳು ಅ ಅಧಿಕಾರದಲ್ಲಿ ಇದ್ದ ಒಂದ ವರ್ಷದಲ್ಲಿ ಬಯಲಾಗಿ ಚುನಾವಣೆಯಲ್ಲಿ ಎಕೆಪಿಯನ್ ಬೆಂಬಲಿಸಿದ ಒಂದು ದೊ ವಿಭಾಗ ಅದು ಸಾಮ್ರಾಜ್ಯಶಾಹಿ ವಿರೋಧಿ, ಪ್ರಜಾಸತ್ತೆಯ ಪರ ದೊಡ್ಡ ಸಂಘಟಿ ಶಕ್ತಿ ಎಂಬ ನಂಬಿಕೆಯಿಂದ ಎಂಬುದನ ಅದು ನೆನಪಿನಲ್ಲಿ ಇಟ್ಟುಕೊಳ್ಳಬೇಕು ಬದಲಾಗಿ, ಅದು ಪ್ರಜಾಸತ್ತೆಯ ಮುನ್ನಡೆಯನ್ನು ಹಿಂಸಾತ್ಮಕ ತಡೆಯಲು ಪ್ರಯತ್ನಿಸಿದರೆ ಇನ್ನಷ್ಟು ಬೆಂಬ ಕಳೆದುಕೊಳ್ಳಬೇಕಾಗಬಹುದು.

ಜನಶಕ್ತಿ
ಕನ್ನಡ ವಾರಪತ್ರಿಕೆ

ರೂಪಾಯಿ ಮೌಲ್ಯ.....

ಪುಟ 13 ರಿಂದ

ಕಾಕತಾಳಿಯವಿರಲಿಕ್ಕಿಲ್ಲ.

ರಾಯಭಾರಿ ಕಚೇರಿಯ ಬೇಹುಗಾರಿಕೆಗೊಳಗಾದ ದೇಶಗಳಲ್ಲಿ ಜರ್ಮನಿ ಸೇರಿದಂತೆ ಪಶ್ಚಿಮ ಯುರೋಪಿನ ಅದರ ನಿಕಟ 'ಭಾಗೀದಾರ' ದೇಶಗಳ ಹೆಸರುಗಳೂ ಇವೆ. ಆದರೆ ಅವುಗಳ ಪ್ರತಿಕ್ರಿಯೆ ಸಂಪೂರ್ಣ ಭಿನ್ನವಾಗಿದೆ- ಅವರೆಲ್ಲರೂ ಪ್ರತಿಭಟಿಸಿದ್ದಾರೆ. "ಭಾಗೀದಾರರು ಪರಸ್ಪರ ಬೇಹುಗಾರಿಕೆ ನಡೆಸುವುದಿಲ್ಲ" ಎಂದು ಯುರೋಪಿಯನ್ ಒಕ್ಕೂಟದ ಕಮಿಶನರ್ ನೇರವಾಗಿಯೇ ಹೇಳಿದ್ದಾರೆ. ಈ ತಿಂಗಳು ಅಮೆರಿಕಾ-ಯುರೋಪ್ ವ್ಯಾಪಾರ ಒಪ್ಪಂದವಾಗಲಿದ್ದು ಆ ಬಗ್ಗೆ ಮಾತುಕತೆಗಳು ಅಂತಿಮ ಹಂತದಲ್ಲಿವೆ. ಈ ಕುರಿತು ಪ್ರಸ್ತಾಪಿಸುತ್ತ ಅವರು " ನಮ್ಮ ಭಾಗೀದಾರರು ಮಾತುಕತೆ ನಡೆಸುತ್ತಿರುವ ನಮ್ಮವರ ಕಚೇರಿಗಳ ಚಟುವಟಿಕೆಗಳ ಬೇಹುಗಾರಿಕೆ ನಡೆಸುತ್ತಿದ್ದಾರೆ ಎಂಬ ಬಗ್ಗೆ …ವಾದರೂ ಸಂದೇಹವಿದ್ದರೂ ನಾವು ಈ ಅಟ್ಲಾಂಟಿಕ್ ಸಾಗರದಾಚೆಗಿನ ಒಂದು ದೊಡ್ಡ ಮಾರುಕಟ್ಟೆಯ ಬಗ್ಗೆ ಚೌಕಾಶಿ ನಡೆಸಲು ಸಾಧ್ಯವಿಲ್ಲ" ಎಂದು ಕಟುವಾಗಿ ಹೇಳಿದ್ದಾರೆ.

ಜರ್ಮನ್ ವಿದೇಶಾಂಗ ಇಲಾಖೆ ಅಮೆರಿಕನ್ ರಾಯಭಾರಿಯನ್ನು ಕರೆಸಿಕೊಂಡು ಈ ಬಗ್ಗೆ ಒಂದು ಅಧಿಕೃತ ದೂರನ್ನು ಕೊಟ್ಟಿದೆ. ಭಾರತ ಮಾತ್ರವೇ 'ಕಾಲುಗಳ ನಡುವೆ ಬಾಲ ಮುದುರಿಕೊಂಡು ಅಮೆರಿಕಾವನ್ನು ಸಮರ್ಥಿಸಿಕೊಳ್ಳಲು ಪ್ರಯತ್ನಿಸಿದೆ' ಎಂದು ಒಬ್ಬ ವಿಶ್ಲೇಷಕರು ಹೇಳಿದ್ದಾರೆ. ಫ್ರಾನ್ಸ್ ಕೂಡ ಪ್ರತಿಭಟನೆಯನ್ನು ವ್ಯಕ್ತಪಡಿಸಿದೆ.

ವಾಸ್ತವವಾಗಿ, ರಾಯಭಾರ ಸಂಬಂಧಗಳ ಕುರಿತ 1961ರ ವಿಯೆನ್ನಾ ಅಧಿನಿರ್ಣಯದ 22ನೇ ಕಲಮನ್ನು ಅಮೆರಿಕಾ ಈ ಕೃತ್ಯದ ಮೂಲಕ ಉಲ್ಲಂಘಿಸಿದೆ ಎಂದು ಪರಿಣಿತರು ಹೇಳಿದ್ದಾರೆ. ಅಮೆರಿಕಾ ಈ ಅಧಿನಿರ್ಣಯಕ್ಕೆ ಸಹಿ ಹಾಕಿರುವ ದೇಶಗಳಲ್ಲಿ ಒಂದು.

ಅದಿರಲಿ, ಭಾರತ ಹಿಂದೆಂದೂ ಅಮೆರಿಕಾದ ಎದುರು ಇಷ್ಟು ನಡುಬಗ್ಗಿಸಿದ್ದಿಲ್ಲ ಎನ್ನುತ್ತಾರೆ ವಿಶ್ಲೇಷಕರು. ಈ ಸಂಗತಿಗಳನ್ನು ಬಯಲಿಗೆಳೆದು ಈಗ ತನ್ನ ಸರಕಾರದ ಬೇಟೆಗೊಳಗಾಗಿರುವ ಅಮೆರಿಕಾದ ವಿಧೇಯ ನಾಗರಿಕ ಎಡ್ವರ್ಡ್ ಸ್ನೋಡನ್ ಭಾರತದಲ್ಲೂ ಆಶ್ರಯ ಕೇಳಿದ್ದು ಅದನ್ನು ಯಾವ ಮುಜುಗರವೂ ಇಲ್ಲದೆ ಯುಪಿಎ-2 ಸರಕಾರ ತಿರಸ್ಕರಿಸಿದ್ದರೆ ಅದರಲ್ಲಿ ಆಶ್ಚರ್ಯವೇನಿಲ್ಲ. ಭಾರತ-ಅಮೆರಿಕಾ ಆಯಕಟ್ಟಿನ ಒಪ್ಪಂದದ ಬಗ್ಗೆ ಎಡಶಕ್ತಿಗಳು ನೀಡಿರುವ ಎಚ್ಚರಿಕೆ ಮತ್ತೊಮ್ಮೆ ನಿಜವಾಗಿದೆ.

ಆದರೆ ಫ್ರಾನ್ಸ್, ಜರ್ಮನಿಯಂತಹ ಅಮೆರಿಕಾದ ಅತ್ಯಂತ ನಿಕಟ ಮಿತ್ರರೂ ಪ್ರತಿಭಟಿಸಿರುವಾಗ ಭಾರತ ಪ್ರತಿಭಟಿಸುವುದಿರಲಿ, ಸಮರ್ಥನೆಗೆ ಮುಂದಾಗಿರುವುದು ನಾಚಿಕೆಗೇಡಿನ ಸಂಗತಿ ಎಂದು ಬಣ್ಣಿಸಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ತಕ್ಷಣವೇ ಈ ಬೇಹುಗಾರಿಕೆಯ ವಿರುದ್ಧ ಬಲವಾದ ಪ್ರತಿಭಟನೆಯನ್ನು ಸಲ್ಲಿಸಬೇಕು ಮತ್ತು ಅದನ್ನು ತಕ್ಷಣ ನಿಲ್ಲಿಸುವಂತೆ ಆಗ್ರಹಿಸಬೇಕು ಎಂದಿದೆ.

ಖಾಸಗೀಕರಿಸುವ ನೀತಿಗಳ...

ಪುಟ 7 ರಿಂದ

ಶ್ರಮಕ್ಕೆ ಇನ್ನೂ ಕೊಂಚ ಹೆಚ್ಚಿನ ಪ್ರತಿಫಲ ಕೊಡಿ ಎಂದರೆ ಉದ್ಯೋಗ ಭದ್ರತೆ ಒದಗಿಸಿ ಎಂದರೆ ಅದನ್ನು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಯೋಜನೆಗೆ ವಿರುದ್ಧ ಎಂಬಂತೆ ಸರ್ಕಾರಗಳು ನೋಡುತ್ತವೆ. ಆದರೆ ಅನಿಲ ಅಂಬಾನಿ, ಮುಖೇಶ ಅಂಬಾನಿ, ಗೋಯಂಕಾ, ಅದಾನಿಗಳಿಗೆ ಸಾವಿರಾರು ಕೋಟಿ ಲಕ್ಷಾಂತರ ಕೋಟಿ ರಿಯಾಯಿತಿ ವಿನಾಯಿತಿಗಳನ್ನು ಘೋಷಿಸುವುದೇ ತಮ್ಮ ಪಾಲಿನ ಪವಿತ್ರ ಕರ್ತವ್ಯವೆಂದು ಇವು ಭಾವಿಸಿವೆ.

ಇವೇ ಕೇಂದ್ರ ರಾಜ್ಯ ಸರ್ಕಾರಗಳ ಧೋರಣೆಗಳಿಂದ ಅಗತ್ಯ ವಸ್ತುಗಳ ಬೆಲೆಗಳು ಅಕ್ಷರಶ : ಗಗನಕ್ಕೇರುತ್ತಿವೆ. ಇಂತಹ ಹೊತ್ತಲ್ಲಿ ಅಂಗನವಾಡಿ ನೌಕರರು ಜೀವನ ನಡೆಸುವುದು ಹೇಗೆ ಎಂಬ ಚಿಂತೆ ಅವರನ್ನು ಹಿಂಡುತ್ತಿದ್ದರೆ, ಇರುವ ಉದ್ಯೋಗ ಭದ್ರತೆಯನ್ನೂ ಕಿತ್ತುಕೊಳ್ಳುವ ನೀತಿಗಳನ್ನು ಆಳುವ ಜನರು …ತ್ತಿದ್ದಾರೆ.

ದೇಶವಿರೋಧಿ-ದೇಶದ್ರೋಹಿ ನೀತಿ

ಸ್ಪಷ್ಟವಾಗಿ ಇದು ಜನವಿರೋಧಿ ನೀತಿ. ದೇಶವಿರೋಧಿ ನೀತಿ. ದೇಶದಲ್ಲಿ ಅಧಿಕೃತ ವಿರೋಧ ಪಕ್ಷದ ಸ್ಥಾನದಲ್ಲಿರುವುದು ದೇಶಪ್ರೇಮದ ಗುತ್ತಿಗೆ ತೆಗೆದುಕೊಂಡಂತೆ ಗಂಟಲು ಹರಿದುಕೊಂಡು ಕಿರುಚುವ ಭಾರತೀಯ ಜನತಾ ಪಕ್ಷ. ಆದರೆ ಇದರಲ್ಲಿ ಬಿಜೆಪಿಗೆ ವಿರೋಧಿಸುವಂತಹದ್ದು ಏನೂ ಕಾಣುತ್ತಿಲ್ಲ. ಅವರು ಈ ಸಲುವಾಗಿ ಏನೂ ದನಿ ಎತ್ತಿಲ್ಲ.

ಎಡಪಕ್ಷಗಳು ಎಂದೂ ಇಂತಹ ನೀತಿಗಳ ವಿರುದ್ದ ಸ್ಪಷ್ಟ ನಿಲುವು ತಳೆದು ಜನಪರ ಹೋರಾಟಗಳಿಗೆ ಬೆಂಬಲ ನೀಡುತ್ತಾ ಬರುತ್ತಿವೆ.

ಜುಲೈ 10- ಜಿಲ್ಲಾಧಿಕಾರಿ ಕಛೇರಿಗಳ ಮುತ್ತಿಗೆ

ಕರ್ನಾಟಕ ರಾಜ್ಯದಲ್ಲಿ ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘವು ಸಿಐಟಿಯು ನೇತೃತ್ವದಲ್ಲಿ ಇಂತಹ ನೀತಿಗಳ ವಿರುದ್ಧ ಸತತ ಹೋರಾಟ ನಡೆಸುತ್ತಾ ಬರುತ್ತಿದೆ. ಪ್ರಸ್ತುತ ಈ ಧೋರಣೆಗಳ ವಿರುದ್ಧ ಜುಲೈ 10, 2013 ರಂದು ರಾಜ್ಯದಾದ್ಯಂತ ಜಿಲಾಧಿಕಾರಿಗಳ ಮುತ್ತಿಗೆ ಕರೆ ನೀಡಿ ಹೋರಾಟದ ಕಣಕ್ಕೆ ಇಳಿದಿದೆ. ಆಳುವ ಸರ್ಕಾರಗಳು ಕಣ್ತೆರೆದು ನೋಡಿ ತಮ್ಮ ನೀತಿಗಳ ದಿಕ್ಕನ್ನೇ ಬದಲಿಸಬೇಕಾದ ಅಗತ್ಯ ಕಾಣುತ್ತಿದೆ.

ಪರ್ಯಾಯ ಧೋರಣೆಗಳನ್ನು...

ಪುಟ 08 ರಿಂದ

"ಇದನ್ನು ಎಫ್‌ಡಿಐ ಸೇರಿದಂತೆ ದೀರ್ಘಾವಧಿ ಬಂಡವಾಳದ ಹರಿವುಗಳ ಮೂಲಕ ಮಾಡಬೇಕಾಗಿದೆ" ಎನ್ನುತ್ತ ಅವರು ಭಾರತದ ವಿದೇಶಿ ವಿನಿಮಯ ಮೀಸಲು ಬಲವಾಗಿದ್ದರೂ, ಅದು "ದೀರ್ಘಕ್ಕೆ ಎಳೆವ ಕೊರತೆಗಳಿಗೆ ಹಣಕಾಸು ಹೊಂದಿಸುವ ಮೂಲವಾಗಲು ಸಾಧ್ಯವಿಲ್ಲ" ಎಂಬ ತರ್ಕವನ್ನು ಹೂಡಿದ್ದಾರೆ.

ಪ್ರಧಾನ ಮಂತ್ರಿಗಳು, ಈ ಮೂಲಕ, ಜನತೆಯ ಮೇಲೆ ಹೆಚ್ಚಿನ ಹೊರೆಗಳನ್ನು ಹೇರಲಾಗುವುದು ಎಂಬುದನ್ನು ಸ್ಪಷ್ಟವಾಗಿ ಪ್ರಕಟ ಪಡಿಸಿದ್ದಾರೆ. "ಕಷ್ಟಕರವಾದ, ಆದರೆ ಅಗತ್ಯವಾಗಿರುವ ಧೋರಣೆಯ ಆಯ್ಕೆಗಳು" ಎಂಬ ಈಗ ಕುಖ್ಯಾತವಾಗಿರುವ ಅವರ ಉದ್ಗಾರ ಇದನ್ನು ಬಚ್ಚಿಡುವ ಪ್ರಯತ್ನ. "ಇದು ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಗೆ ಒಂದು ಸವಾಲು. ನಮ್ಮ ಮುಂದಿರುವ ಕಷ್ಟಕರವಾದ, ಆದರೆ ಅಗತ್ಯವಾದ ಧೋರಣೆಯ ಆಯ್ಕೆಗಳನ್ನು ಜಾರಿಗೆ ತರಲು ನಾವು ಸಮರ್ಥವಾಗುವಷ್ಟು ಒಮ್ಮತವನ್ನು ಒಂದು ಪ್ರಜಾಪ್ರಭುತ್ವದ ತೀವ್ರವಾದ ಸ್ಪರ್ಧಾತ್ಮಕ ರಾಜಕೀಯ ಸಾಧಿಸಬಲ್ಲದು ಎಂದು ನಾವು ಸಾಬೀತು ಮಾಡಬೇಕಾಗಿದೆ. ಇದೊಂದು ರಾಷ್ಟ್ರೀಯ ಸವಾಲು, ಸಮಸ್ತ ರಾಜಕೀಯ ಮತ್ತು ಬೌದ್ಧಿಕ ಮುಖಂಡತ್ವ ಇದನ್ನು ಗ್ರಹಿಸಬೇಕಾಗಿದೆ" ಎಂದು ಅವರು ಹೇಳುತ್ತಾರೆ. 12ನೇ ಯೋಜನೆಯಲ್ಲಿ 8ಶೇ. ಬೆಳವಣಿಗೆಯ 'ಮಹತ್ವಾಕಾಂಕ್ಷೆ'ಯ ಗುರಿಯನ್ನು ಸಾಧಿಸಲು ಭಾರತದ ಆರ್ಥಿಕ ಒಂದು ತೀವ್ರವಾದ ವೇಗೋತ್ಕರ್ಷವನ್ನು ಕಾಣಬೇಕು, 2015-16ರೊಳಗೆ 9ಶೇ.ಕ್ಕಿಂತ ಹೆಚ್ಚಿನ ಬೆಳವಣಿಗೆಗೆ ಮರಳಬೇಕು ಎಂದು ಪ್ರಧಾನ ಮಂತ್ರಿಗಳು ತಮ್ಮ ಮುನ್ನುಡಿಯಲ್ಲಿ ಹೇಳಿದ್ದಾರೆ.

ಸರಕಾರ ಈಗ ಬಹುಬ್ರಾಂಡ್ ಚಿಲ್ಲರೆ ವ್ಯಾಪಾರವಲ್ಲದೆ ರಕ್ಷಣಾ ಉತ್ಪಾದನೆಯ ವಲಯವನ್ನು ಕೂಡ ವಿದೇಶಿ ನೇರ ಹೂಡಿಕೆಗೆ ತೆರೆಯುವ ಇಂಗಿತವನ್ನು ಕೊಟ್ಟಿದೆ. ಆರ್ಥಿಕ ವ್ಯವಹಾರಗಳ ಇಲಾಖೆಯ ಕಾರ್ಯದರ್ಶಿ ಮುಖ್ಯಸ್ಥರಾಗಿರುವ ಒಂದು ಸಮಿತಿಯ ಶಿಫಾರಸುಗಳ ಆಧಾರದಲ್ಲಿ ಉನ್ನತ ಅಧಿಕಾರಿಗಳು ಒಂದು ಎಫ್‌ಡಿಐ ಸುಧಾರಣಾ ಅಜೆಂಡಾವನ್ನು ಮಂಡಿಸುತ್ತಾರೆ, ಅದನ್ನು ಜುಲೈ ಮೂರನೇ ವಾರದಲ್ಲಿ ಕೈಗೆತ್ತಿಕೊಳ್ಳಲಾಗುವುದು ಎಂದು ಹಣಕಾಸು ಮಂತ್ರಿಗಳು ಹೇಳಿದ್ದಾರೆ. ಕಳೆದ ವಾರ ಅವರು ಆರ್ಥಿಕ ತಜ್ಞರು ಮತ್ತು ಮಾರುಕಟ್ಟೆಯಲ್ಲಿ ಭಾಗವಹಿಸುವವರನ್ನು ಭೇಟಿಯಾಗಿದ್ದಾರೆ, ಹೂಡಿಕೆಗಳು ಹಾಗೂ 2012-13ರಲ್ಲಿ ಈ ದಶಕದ ಅತ್ಯಂತ ಕಡಿಮೆ ದರವಾದ 5ಶೇ.ಕ್ಕೆ ಕುಸಿದಿರುವ ಬೆಳವಣಿಗೆಗೆ ಉತ್ತೇಜನೆ ನೀಡುವುದು ಹೇಗೆ ಎಂಬ ಬಗ್ಗೆ ಅವರಿಂದ ಅಭಿಪ್ರಾಯಗಳನ್ನು ಪಡೆಯಲಿಕ್ಕಾಗಿ.

ಬೇರೆ ಮಾತುಗಳಲ್ಲಿ ಹೇಳುವುದಾದರೆ, ಯುಪಿಎ-2 ಸರಕಾರ ಒಂದು ಮುಳುಗುತ್ತಿರುವ ಆರ್ಥಿಕವನ್ನು ಮೇಲೆತ್ತುವ ಹೆಸರಿನಲ್ಲಿ ನವ-ಉದಾರವಾದಿ ಸುಧಾರಣೆಗಳ ಹೊಸದೊಂದು ಅಲೆಯನ್ನು ಹರಿಯಬಿಡಲು ಕಟಿಬದ್ಧವಾಗಿರುವಂತೆ ಕಾಣುತ್ತದೆ. ಇಂತಹ ಒಂದು ದಾರಿ-ದಿಕ್ಕಿನ ಪರಿಣಾಮ ಸರ್ವವಿದಿತ. ಇದು ಒಂದೆಡೆ ವಿದೇಶಿ ಮತ್ತು ದೇಶಿ ಬಂಡವಾಳಗಳಿಗೆ ತಮ್ಮ ಲಾಭಗಳನ್ನು ಗರಿಷ್ಟ ಪ್ರಮಾಣಕ್ಕೆ ಏರಿಸುವ ಹೊಸ-ಹೊಸ ಅವಕಾಶಗಳನ್ನೇನೋ ಸೃಷ್ಟಿಸುತ್ತದೆ. ಆದರೆ, ಇನ್ನೊಂದೆಡೆಯಲ್ಲಿ, ಈ ಹಿಂದೆ ಮಾಡಿರುವಂತೆ ಜನಗಳ ಮೇಲೆ ಮತ್ತಷ್ಟು ಹೊರೆಗಳನ್ನು ಹಾಕುತ್ತದಷ್ಟೇ. ಈ ಮೂಲಕ ಅದಾಗಲೇ ಹೆಚ್ಚುತ್ತಿರುವ ಅವರ ಸಂಕಟಗಳನ್ನು ಮತ್ತಷ್ಟು ಉಲ್ಬಣಗೊಳಿಸುತ್ತದೆ.

ಇಂದಿನ ಆವಶ್ಯಕತೆ

ಈಗ ಬದಲಿಸಬೇಕಾಗಿರುವುದು ಇಂತಹ ಒಂದು ದಾರಿ-ದಿಕ್ಕನ್ನೇ. ಇದಕ್ಕೆ ಪರ್ಯಾಯವಾದ ಧೋರಣೆಯ ದಿಕ್ಕೆಂದರೆ, ದೇಶದ ಸಂಪನ್ಮೂಲಗಳನ್ನು ಸಾರ್ವಜನಿಕ ಹೂಡಿಕೆಗಳನ್ನು ಉನ್ನತ ಮಟ್ಟಗಳಿಗೆ ಏರಿಸಲು ಬಳಸಿಕೊಳ್ಳುವುದು, ಆಮೂಲಕ ಬಹಳವಾಗಿ ಬೇಕಾಗಿರುವ ನಮ್ಮ ಸಾಮಾಜಿಕ ಮತ್ತು ಆರ್ಥಿಕ ಮೂಲರಚನೆಗಳನ್ನು ಕಟ್ಟುವುದು. ಕಳೆದ ಮೂರು ವರ್ಷಗಳಲ್ಲಿ ಮಾಡಿರುವಂತೆ, ವಾರ್ಷಿಕವಾಗಿ 5ಲಕ್ಷ ಕೋಟಿ ರೂ.ಗಳಿಗಿಂತಲೂ ಹೆಚ್ಚಿನ, ಹಣಕಾಸು ಕೊರತೆಗಿಂತಲೂ ಹೆಚ್ಚಿನ ಪ್ರಮಾಣದ ತೆರಿಗೆ ರಿಯಾಯ್ತಿಗಳನ್ನು ಕೊಡಮಾಡುವ ಬದಲು ಈ ನ್ಯಾಯಬದ್ಧ ತೆರಿಗೆ ಆದಾಯಗಳನ್ನು ಸಂಗ್ರಹಿಸಿ, ಅವನ್ನು ಸಾರ್ವಜನಿಕ ಹೂಡಿಕೆಗಳನ್ನು ಹೆಚ್ಚಿಸಲು ಬಳಸಬೇಕು. ಇಂತಹ ಒಂದು ದಾರಿ-ದಿಕ್ಕು ಹೆಚ್ಚುವರಿ ಉದ್ಯೋಗಾವಕಾಶಗಳನ್ನು ನಿರ್ಮಿಸುತ್ತದೆ. ಇದು ಆಂತರಿಕ ಬೇಡಿಕೆಯನ್ನು ಸಾಕಷ್ಟು ಪ್ರಮಾಣದಲ್ಲಿ ವಿಸ್ತರಿಸಿ ಒಂದು ಆರೋಗ್ಯಕರ ಬೆಳವಣಿಗೆಯ ದಾರಿ-ದಿಕ್ಕಿಗೆ ಒತ್ತಾಸೆ ನೀಡುತ್ತದೆ.

ಎಡಪಕ್ಷಗಳ ರಾಜಕೀಯ ಸಮಾವೇಶ ಒಂದು ಪರ್ಯಾಯ ಧೋರಣೆಯ ದಿಕ್ಕಿನ ಆಧಾರದಲ್ಲಿ ಇಂತಹ ಒಂದು ಪಲ್ಲಟವನ್ನು ನಮ್ಮ ದೇಶದ ಜನತೆಯ ಮುಂದಿಟ್ಟಿದೆ. ಎಡಪಕ್ಷಗಳು, ಎಲ್ಲ ಕಾಂಗ್ರೆಸೇತರ, ಬಿಜೆಪಿಯೇತರ ಪ್ರಜಾಪ್ರಭುತ್ವವಾದಿ ಮತ್ತು ಜಾತ್ಯಾತೀತ ಪಕ್ಷಗಳಿಗೆ ಮನವಿ ಮಾಡಿಕೊಂಡಿವೆ-ದೇಶದ ಆರ್ಥಿಕಕ್ಕೂ ಮತ್ತು ಜನಗಳ ಬದುಕನ್ನು ಉತ್ತಮ ಪಡಿಸಲಿಕ್ಕೂ ಬಹಳ ಅಗತ್ಯವಿರುವ ಇಂತಹ ಪರ್ಯಾಯ ಧೋರಣೆಗಳ ಸುತ್ತ ಅಣಿನೆರೆಯುವಂತೆ ಕೇಳಿಕೊಂಡಿವೆ. ಈಗ ಮೂಡಿಬರಬಹುದಾದ ಯಾವುದೇ ರಾಜಕೀಯ ಪರ್ಯಾಯ ಕೇವಲ ಒಂದು ಪರ್ಯಾಯ ಸರಕಾರವನ್ನು ಒದಗಿಸುವದಕ್ಕಷ್ಟೇ ಸೀಮಿತವಾಗಿರಲಾಗದು; ಅದು ಇಂತಹ ಪರ್ಯಾಯ ಧೋರಣೆಗಳನ್ನು ಜಾರಿಗೆ ತರುವತ್ತ ಗಮನ ಕೇಂದ್ರೀಕರಿಸುವಂತದ್ದಾಗಿರಬೇಕು.

ಆದ್ದರಿಂದ, ಜನಗಳ ಹೋರಾಟಗಳನ್ನು ಬಲಪಡಿಸುವುದು, ಆಮೂಲಕ ಇಂತಹ ಪರ್ಯಾಯ ಧೋರಣೆಗಳನ್ನು ಆಧರಿಸಿದ ರಾಜಕೀಯ ಪರ್ಯಾಯವೊಂದು ಮುಂಬರುವ 2014ರ ಸಾರ್ವತ್ರಿಕ ಚುನಾವಣೆಗಳಲ್ಲಿ ರೂಪುಗೊಳ್ಳುವಂತೆ ಜನತೆಯ ಒತ್ತಡಗಳನ್ನು ಹೆಚ್ಚಿಸುವುದು ಇಂದಿನ ಆವಶ್ಯಕತೆ.

JANASHAKTHI KANNADA VARA PATRIKE JUL 14, 2013 Price : Rs. 10/- RNI No. KARKAN /2006/1
"REGISTERD" Postal Reg. No. RNP/KA/BGS/2078/2013-15 Posted at MBC Bangalore GPO Licensed to Post without prepayment License No. WP

ಎಡ್ವರ್ಡ್ ಸ್ನೋಡೆನ್ 'ಬೇಟೆ'ಗೆ ಮುಂದುವರೆದ ಅಮೇರಿಕಾದ ಹೆಣಗಾಟ:

"ಸರ್ಕಾರಗಳಿಂದ ರಾಷ್ಟ್ರಪ್ರೇಮಿ ತನ್ನ ದೇಶವನ್ನು ಸದಾ ಸಂರಕ್ಷಿಸಲು ಹೋರಾಡುತ್ತಾನೆ ಎಂದು ಅಮೇರಿಕಾ ಕ್ರಾಂತಿಯ ಗಟ್ಟಿ ಧ್ವನಿಯಾಗಿದ್ದ ಥಾಮಸ್ ಪೇನ್ ಹೇಳಿದ್ದ. ನೀನು ಮಾಡಿರುವ ಕೃತ್ಯದಿಂದ ಅಮೇರಿಕಾ ಸರ್ಕಾರ ಮಾತ್ರವಲ್ಲ ಇಡೀ ವಿಶ್ವದ ಕಣ್ತೆರೆಸಿದ್ದಿ. ಬೆಳೆಯುತ್ತಿರುವ ಸರ್ವಾಧಿಕಾರದ ಅಪಾಯವನ್ನು ಬಟಾಬಯಲುಗೊಳಿಸಿದ್ದಿ. ನಾಗರೀಕತೆಯ ಇತಿಹಾಸವೆಂದರೆ ಸರ್ಕಾರಗಳು ಎಸಗುವ ತಪ್ಪು ತೀರ್ಮಾನ ಅಥವಾ ಅನ್ಯಾಯಗಳಿಗೆ ಮಣಿಯದೆ ಮೆಟ್ಟಿನಿಂತು, ವ್ಯವಸ್ಥೆಯ ಐಷಾರಾಮಿ ಜೀವನಗಳಿಗೆ ಮಾರುಹೋಗದೆ, ಧೀರ ಪುರುಷರು ಮತ್ತು ಮಹಿಳೆಯರು ತಮ್ಮ ಜ್ಞಾನ, ವಿವೇಕ, ಸ್ವಾರ್ಥ-ರಹಿತ ಮೌಲ್ಯಗಳ ಅಸ್ತ್ರಗಳಿಂದ ಹೋರಾಡುವುದಾಗಿದೆ. ನಿನ್ನ ಕಾರ್ಯ ಅದೇ ಧೀರ ಪರಂಪರೆಯ ಹಾದಿಯಲ್ಲಿರುವುದು ಹೆಮ್ಮೆಯೆನಿಸಿದೆ."

– ಎಡ್ವರ್ಡ್ ಸ್ನೋಡೆನ್ ತಂದೆ ಲಾನ್ ಸ್ನೋಡೆನ್ ಮತ್ತು ಅವರ ವಕೀಲ ಬ್ರ್ಯೂಸ್ ಫೇನ್

ಸ್ವತಂತ್ರ, ಸಾರ್ವಭೌಮ ದೇಶಗಳ ರಹಸ್ಯ ಮಾಹಿತಿಗಳನ್ನು ಹಾಗೂ ತನ್ನದೇ ದೇಶದ ಪ್ರಜೆಗಳ ಖಾಸಗಿ ಮಾಹಿತಿಗಳನ್ನು ಕದ್ದು ಸಂಗ್ರಹಿಸಿಟ್ಟುಕೊಳ್ಳುವ ಅಮೇರಿಕಾದ ಗುಪ್ತ ಬೇಹುಗಾರಿಕೆ ಹಗರಣ ಹಾಲಿವುಡ್ ಸಿನಿಮಾದಂತೆ ತಿರುವು ಪಡಕೊಳ್ಳುತ್ತಿದೆ.

ಹರ್ಷವರ್ಧನ್

ಅಮೇರಿಕಾ ಸರ್ಕಾರ ತನ್ನ ರಾಷ್ಟ್ರೀಯ ಭದ್ರತಾ ಸಂಸ್ಥೆ ಮುಖೇನಾ ವಿಶ್ವದ ಎಲ್ಲ ರಾಷ್ಟ್ರಗಳ ಸರ್ಕಾರಗಳು ಮತ್ತು ಪ್ರಜೆಗಳ ಮೇಲೆ ನಡೆಸಿರುವ ಬೇಹುಗಾರಿಕಾ ವ್ಯವಸ್ಥೆ ಕುರಿತು ಸ್ಫೋಟಕ ಮಾಹಿತಿಯನ್ನು ಹೊರಗೆಡವಿ ವಿಶ್ವದ ಮಾಹಿತಿ ಹೀರೋ ಆಗಿರುವ ಎಡ್ವರ್ಡ್ ಸ್ನೋಡೆನ್‌ನನ್ನು ಬಂಧಿಸಲು ಅಮೇರಿಕಾದ ಹೆಣಗಾಟ ಮುಂದುವರೆದಿದೆ. ಅಮೇರಿಕಾದಿಂದ ರಹಸ್ಯವಾಗಿ ಪಾರಾಗಿ ಹಾಂಕಾಂಗ್‌ನ ಹೋಟೆಲ್‌ವೊಂದರಲ್ಲಿ ಉಳಿದುಕೊಂಡಿದ್ದ ಸ್ನೋಡೆನ್‌ನ್ನು ಬಂಧಿಸಿ ತನ್ನ ವಶಕ್ಕೊಪ್ಪಿಸಬೇಕೆಂದು ಅಮೇರಿಕಾ ಚೀನಾಗೆ ತಾಕೀತು ಮಾಡಿತು. ಆದರೆ ಅದಕ್ಕೊಪ್ಪದ ಚೀನಾ ಸ್ನೋಡೆನ್ ತಾನಿಷ್ಟ ಕಡೆ ಹೋಗಲು ಅನುವು ಮಾಡಿಕೊಟ್ಟಿತು. ಹೀಗಾಗಿ ಸ್ನೋಡೆನ್ ಹಾಂಕಾಂಗ್‌ನಿಂದ ರಹಸ್ಯವಾಗಿ ಮಾಸ್ಕೋ ಮೂಲಕ ಈಕ್ವೆಡಾರ್‌ಗೆ ತೆರಳಲು ಯತ್ನಿಸಿದ.

ಚೀನಾವನ್ನು ಶಪಿಸಿಕೊಂಡ ಅಮೇರಿಕಾ ಸ್ನೋಡೆನ್‌ನ್ನು ಒಪ್ಪಿಸಬೇಕೆಂದು ರಷ್ಯಾಗೂ ಬೇಡಿಕೆ ಇಟ್ಟಿತು. ಆದರೆ ರಷ್ಯಾ ಕೂಡ ಇದ-ಕ್ಕೆ ಒಪ್ಪಿಲ್ಲ. ಅಮೇರಿಕಾ ವಿರುದ್ಧ ಸ್ನೋಡೆನ್ ಯಾವುದೇ ಚಟುವಟಿಕೆ ಮಾಡದೇ ಇರುವ ಕರಾರಿನ ಮೇರೆಗೆ ತಾನು ಆತನಿಗೆ ರಾಜಕೀಯ ಆಶ್ರಯ ನೀಡುವುದಾಗಿ ರಷ್ಯಾ ತಿಳಿಸಿತ್ತು, ಇದಕ್ಕೆ ಒಪ್ಪದ ಸ್ನೋಡೆನ್ ಅಲ್ಲಿಂದ ಇನ್ನಾವುದಾದರೂ ಆಶ್ರಯ ನೀಡುವಂಥಹ ದೇಶಕ್ಕೆ ತೆರಳಲು ಮಾಸ್ಕೋದಲ್ಲಿಯೇ ಕಾಯುತ್ತಿದ್ದಾನೆ.


ಈತನ್ಮಧ್ಯೆ ಈ ಹಿಂದೆ ಅಮೇರಿಕಾದಲ್ಲಿ ರಷ್ಯಾಪರ ಬೇಹುಗಾರಿಕೆ ನಡೆಸುತ್ತಿದ್ದ ರಷ್ಯಾದ ಪ್ರಸಿದ್ಧ ಮಾಜಿ ಗೂಢಾಚಾರಿಣಿ ಅನಾ ಚಾಪ್‌ಮನ್ ತಾನು ಸ್ನೋಡೆನ್‌ಗೆ ಆಶ್ರಯ ನೀಡುವುದಾಗಿಯೂ, ಆತ ಇಷ್ಟಪಟ್ಟರೆ ಮದುವೆಯಾಗುವುದಾಗಿಯೂ ಟ್ವಿಟ್ಟರ್‌ನಲ್ಲಿ ಹೇಳಿಕೆ ನೀಡಿದ್ದಾಳೆ. ಇದಕ್ಕೆ ಪ್ರತಿಕ್ರಿಯಿಸಿರುವ ಅಮೇರಿಕಾದ ರಾಷ್ಟ್ರೀಯ ಭದ್ರತಾ ಸಂಸ್ಥೆಯ ಸಿಬ್ಬಂದಿಯೊಬ್ಬರು ಈ ಮದುವೆಗೆ ತಾವು ಸಾಕ್ಷಿಯಾಗುವುದಾಗಿ ಛೇಡಿಸಿದ್ದರೆ, 'ನಮ್ಮ ಮಕ್ಕಳನ್ನು ರಾಷ್ಟ್ರೀಯ ಭದ್ರತಾ ಸಂಸ್ಥೆ ನೋಡಿಕೊಳ್ಳುವುದೇ' ಎಂದು ಚಾಪ್‌ಮನ್ ಚುಚ್ಚಿದ್ದಾರೆ.

ಬೊಲಿವಿಯಾದ ಅಧ್ಯಕ್ಷರ ವಿಮಾನವನ್ನು ತಡೆಹಿಡಿದು ಸ್ನೋಡೆನ್‌ಗಾಗಿ ಶೋಧನೆ: ಖಂಡನೆ

ರಷ್ಯಾದಲ್ಲಿ ನೈಸರ್ಗಿಕ ಅನಿಲ ಉತ್ಪಾದಿಸುವ



ದೇಶಗಳ ಸಭೆಗೆ ಹಾಜರಾಗಿ ವಾಪಸು ಬರುತ್ತಿದ್ದ ಬೊಲಿವಿಯಾದ ಎಡಪಂಥೀಯ ಅಧ್ಯಕ್ಷ ಇವಾ ಮೊರೆಲಸ್ ರವರ ವಿಮಾನ ಆಸ್ಟ್ರಿಯಾದ ವಿಯೆನ್ನಾದಲ್ಲಿ ಇಂಧನ ತುಂಬಿಸಿಕೊಳ್ಳಲು ಇಳಿದಿತ್ತು. ಆಗ ಫ್ರಾನ್ಸ್, ಇಟಲಿ ಮತ್ತು ಪೋರ್ಚುಗಲ್ ದೇಶಗಳು ಅವರ ವಿಮಾನ ತಮ್ಮ ದೇಶಗಳ ಮೇಲೆ ಹಾರಿ ಹೋಗುವುದನ್ನು ರದ್ದುಗೊಳಿಸಿದವು. ಏಕೆಂದರೆ ತನ್ನ ದೇಶದಲ್ಲಿ ತನಗೆ ಮರಣದಂಡನೆ ವಿಧಿಸಿರುವ ವ್ಯಕ್ತಿಯೊಬ್ಬ ರಾಜಕೀಯ ಆಶ್ರಯ ಕೋರಿ ಯೂರೋಪ್ ದೇಶದೊಳಗೆ ಬಂದಿಳಿದರೆ ಅವನಿಗೆ ಆಶ್ರಯ ನೀಡಲೇಬೇಕಾಗುವ ಕಾನೂನು ಬದ್ಧತೆ ಯೂರೋಪ್ ದೇಶಗಳಿಗಿದೆ. ಅಮೇರಿಕಾವನ್ನು ಎದುರು ಹಾಕಿಕೊಂಡು ಅಮೇರಿಕಾದ ಶತ್ರುವಿಗೆ ರಾಜಕೀಯ ಆಶ್ರಯ ನೀಡುವ ಶಕ್ತಿ ಈ ದೇಶಗಳಿಗಿಲ್ಲ. ಈಗಾಗಿ ಯೂರೋಪ್ ದೇಶಗಳ ಒತ್ತಡ-ಕ್ಕೆ ಮಣಿದು ವಿಯೆನ್ನಾದ ಅಧಿಕಾರಿಗಳು ಅವರ ವಿಮಾನವನ್ನು 13 ಘಂಟೆಗಳ ಕಾಲ ತಡೆಹಿಡಿದು 'ಎಡ್ವರ್ಡ್ ಸ್ನೋಡೆನ್' ಆ ವಿಮಾನದಲ್ಲಿ ಬಚ್ಚಿಟ್ಟುಕೊಂಡಿರುವನೆಂದು ಭಾವಿಸಿ ಶೋಧನೆ ನಡೆಸಿದರು. ಆದರೆ ಅಲ್ಲೇನೂ ಅವ'ರಿಗ' ಸಿಗಲಿಲ್ಲ. ನಂತರವಷ್ಟೇ ಇವಾ ಮೊರೆಲಸ್ ರವರ ವಿಮಾನ ತೆರಳಲು ಅವಕಾಶ ನೀಡಲಾಯಿತು. ಇದನ್ನು ಬೊಲಿವಿಯಾ ಜನತೆ ಮತ್ತು ವೆನಿಜುವೆಲಾ, ಈಕ್ವೆಡಾರ್, ಇತ್ಯಾದಿ ಲ್ಯಾಟಿನ್ ಅಮೇರಿಕಾ ರಾಷ್ಟ್ರಗಳು ಖಂಡಿಸಿವೆ.



500 ವರ್ಷಗಳ ಹಿಂದೆ ಅಮೇರಿಕಾವು ಲ್ಯಾಟಿನ್ ಅಮೇರಿಕಾ ದೇಶಗಳ ಮೇಲೆ ನಡೆಸುತ್ತಿದ್ದ ದಬ್ಬಾಳಿಕೆಯನ್ನು ಮತ್ತೆ ಮುಂದುವರೆಸಿದೆ ಎಂದು ಕಿಡಿಕಾರಿವೆ. ಮೆಕ್ಸಿಕೋ ದೇಶದ ಅರ್ಧ ಭಾಗವನ್ನು ಆಕ್ರಮಿಸಿಕೊಂಡಿದ್ದದ್ದು, ಬೇ ಆಫ್ ಪಿಗ್ಸ್, ಚಿಲಿಯ ಅಗಸ್ಟೋ ಪಿನೋಶೆಟ್ ಮತ್ತು ಇತರೆ ಸರ್ವಾಧಿಕಾರಿಗಳಿಗೆ ಬೆಂಬಲ, ಗ್ವಾಟೆಮಾಲಾ, ನಿಕಾರಾಗುವಾ, ಹೊಂಡುರಾಸ್ ಮತ್ತು ಇತ-ರೆಡೆ ಪ್ರಜಾಪ್ರಭುತ್ವ ಮುಖೇನಾ ಆಯ್ಕೆಯಾದ ಸರ್ಕಾರಗಳನ್ನು ಬುಡಮೇಲು ಮಾಡಿದ್ದ ಅಮೇರಿಕಾದ ಕ್ರೌರ್ಯ, ಅತಿಕ್ರಮಣ, ಮಧ್ಯಪ್ರವೇಶ ಮತ್ತು ಪೋಲೀಸ್ ಕ್ರೌರ್ಯ ಮತ್ತೆ ಮುಂದುವರೆದಿದೆ ಎಂದು ದ... ಅಂತರಾಷ್ಟ್ರೀಯ ಒಡಂಬ... ಅಮೇರಿಕಾ ಮತ್ತು ಯೂರೋಪ್ ... ಕಿಂಚಿತ್ತೂ ಗೌರವ ನೀಡದ ... ಮುಖವಾಡ ಕಳಚಿಬಿದ್ದಿವೆ ಎಂದಿವೆ...

ಲಂಡನ್‌ನಲ್ಲಿರುವ ಈಕ್ವೆಡಾರ್ ರಾ... ಕಚೇರಿಯೊಳಕ್ಕೆ ಒಳಸುಸುಳಿಕೆ:

ಕಳೆದ ಒಂದು ವರ್ಷದಿಂದ ... ಸಂಸ್ಥಾಪಕ ಜೂಲಿಯನ್ ಅಸ್ಸಾಂಜ್ ... ಲಂಡನ್‌ನಲ್ಲಿರುವ ಈಕ್ವೆಡಾರ್ ರಾ... ಕಛೇರಿಯೊಳಗೆ ಜೀವನ ಸವೆಸು... ಅವರಿಗೆ ಆಶ್ರಯ ನೀಡಿರುವ ಈ... ರಾಯಭಾರ ಕಛೇರಿಯಿಂದ ಅಸ್ಸಾಂ... ಹೊರಗೆಳೆದು ಬಂಧಿಸಲು ... ಪೋಲೀಸರು ಹೊಂಚು ಹಾ... ಇದ್ದಾರೆ. ಇದೀಗ ತಮ್ಮ ರಾ... ಕಛೇರಿಯೊಳಗೆ ಮೈಕ್ರೋಫೋನ್... ಇಟ್ಟಿದ್ದು ಕಛೇರಿಯ... ಸಂಭಾಷಣೆಗ... ಕದ್ದುಕೇಳಲಾಗುತ್ತಿದೆ ... ಈಕ್ವೆಡಾರ್ ಆಪಾದಿಸಿ...

ಯೂರೋಪ್ ... ಭಾರತದ ಮೇಲೆ ಅಪ... ಬೇಹುಗಾರಿಕೆ :

ಸ್ನೋಡೆನ್‌ನ... ಯಾವುದಾದರೂ ... ಆಶ್ರಯ ನೀಡಿದಲ್ಲಿ ಗಂಭೀರ ಪರಿ... ಎದುರಿಸಬೇಕಾಗುತ್ತದೆಂದು ಅಮೆ... ಎಚ್ಚರಿಕೆ ನೀಡಿದೆ. ಅಮೇರಿಕ... ಎದುರು ಹಾಕಿಕೊಳ್ಳಲಾಗದ ಸ್ಥಿತಿಯ... ಯೂರೋಪ್‌ನ ಹಲವು ರಾಷ್ಟ್ರಗಳು ... ಸ್ನೋಡೆನ್‌ಗೆ ಆಶ್ರಯ ನೀಡು... ಎಂದು ಘೋಷಿಸಿವೆ. ಆದರೆ ಆ ದೇ... ಜನಪ್ರತಿನಿಧಿಗಳು ತಮ್ಮ ಸರ್ಕಾರ ಅಮೆ... ನಡೆಸುತ್ತಿರುವ ಬೇಹುಗಾರಿಕೆ ... ಅಮೇರಿಕಾದಿಂದ ಸ್ಪಷ್ಟನೆ ಕೇಳಬೇ... ಒತ್ತಡ ಹಾಕಿದ್ದಾರೆ.

ಭಾರತ ಸರ್ಕಾರ ಮತ್ತು ಪ್ರ... ಮೇಲೂ ಕೂಡ ಅಮೇ... ರಾಷ್ಟ್ರೀಯ ಭದ್ರತಾ ಸಂಸ್ಥೆ ಬೇಹು... ನಡೆಸುತ್ತಿರುವುದು ಸ್ನೋಡೆನ್ ಸ... ಮಾಡಿರುವ ಮಾಹಿತಿಯಿಂದ ಸಾಬೀತಾ... ಎಲ್ಲ ಪಕ್ಷಗಳು ಮತ್ತು ಸಂಘಟ... ಭಾರತ ಸರ್ಕಾರ ಇದನ್ನು ಗಂಭೀರ... ತೆಗೆದುಕೊಳ್ಳಬೇಕೆಂದು ಹೇಳಿವೆ. ...ಕ್ಕೆ ಪ್ರತಿಕ್ರಿಯಿಸಿರುವ ಕೇಂದ್ರ ... ಸಲ್ಮಾನ್ ಖುರ್ಷಿದ್ ಅವರು, ಅಮೆ... ಬೇಹುಗಾರಿಕೆ ನಡೆಸುತ್ತಿಲ್ಲ, ಬ... ಕಂಪ್ಯೂಟರ್ ಸಂಶೋಧನೆ ನಡೆಸ... ಎಂದು ಉಡಾಫೆ ಉತ್ತರ ನೀಡಿ...ರೆ. ಅಲ್ಲದೆ ಸ್ನೋಡೆನ್ ಭಾರತ ಸ... ರಾಜಕೀಯ ಆಶ್ರಯ ಕೋರಿದಾಗ ಭ... ಅವನಿಗೆ ರಾಜಕೀಯ ಆಶ್ರಯ ನೀ... ಒಪ್ಪದೆ ಸ್ಪಷ್ಟವಾಗಿ ನಿರಾಕರಿಸಿದೆ. ... ದೇಶದ ಆಳುವ ವರ್ಗದ ವರ್ಗ ... ಸಾಮ್ರಾಜ್ಯಶಾಹಿ ಪರ ವಕಾಲತ್ತು ವಹಿ... ಪರಿಯಿದು.

JANASHAKTHI KANNADA VARA PATRIKE: Printed by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086Published by: **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana**, No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor **NITHYANANDASWAMI** EMS Bhavana, No.37/A, 8th Cross, Mahalakshmi Layout, BANGALORE-560086 Editor : **NITHYANANDASWAMI**